30 November 2025 Sunday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
# ವರ್ತಮಾನ
ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ
info.varthaman@gmail.com
9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 44 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ಯಾವುದಾದರೂ ನಮಗೆ ಬೇಕಾಗಿದ್ದ ವಸ್ತು
ಸಿಗಲಿಲ್ಲ ಅಂದರೆ, ದೇವರು ಇದಕ್ಕಿಂತ
ಒಳ್ಳೆಯದೇ ಕೊಡಲು ಕಾದಿದ್ದಾನೆ ಎಂದು
ತಿಳಿದರೆ
ಜೀವನದ ಹಾದಿ ಸುಲಭ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಅನುಭವ
ಹೆಚ್ಚಾದಷ್ಟು ಮನಸ್ಸು
ಗಟ್ಟಿಯಾಗುತ್ತೆ.
ಮನಸ್ಸು ಗಟ್ಟಿಯಾದಷ್ಟು
ಆತ್ಮಸ್ಥೆರ್ಯ ಹೆಚ್ಚುತ್ತದೆ
ಮೈಲಾರ ಸಾವಿತ್ರಿಬಾಯಿ

# ಸಿದ್ದು–ಡಿಕೆಶಿ 'ಕದನ ವಿರಾಮ'

## ತಾರಕಕ್ಕೇರಿದ್ದ 'ಗದ್ದುಗೆ ಗುದ್ದಾಟ' ಫೈಟ್ ಸ್ಥಗಿತಕ್ಕೆ ಹೈಕಮಾಂಡ್ ಸೂಚನೆ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆಶಿವಕುಮಾರ್ ಅವರು ಶನಿವಾರ ಸಿಎಂ ಅಧಿಕೃತ ನಿವಾಸದಲ್ಲಿ ಉಪಾಹಾರ ಕೂಟ ನಡೆಸುವ ಮೂಲಕ ಒಗ್ಗಟ್ಟಿನ ಮಂತ್ರ ಪಠಿಸಿದ್ದಾರೆ. ಇಬ್ಬರ ನಡುವೆ ತಾರಕಕ್ಕೇರಿದ್ದ ಸಿಎಂ ಕುರ್ಚಿ ಕದನಕ್ಕೆ ತಾತ್ಕಾಲಿಕ ವಿರಾಮ ಘೋಷಿಸಿದ್ದಾರೆ. ಆದರೆ ನಾಯಕತ್ವ ಬದಲಾವಣೆ ಬಿಕ್ಕಟ್ಟು ಶಮನದ ಬಗ್ಗೆ ಇಬ್ಬರೂ ಯಾವುದೇ ಚಕಾರ ಎತ್ತಲಿಲ್ಲ.

ಬೆಳಗಾವಿಯಲ್ಲಿ ಡಿಸೆಂಬರ್ 8ರಂದು ಪ್ರಾರಂಭವಾಗುವ ವಿಧಾನಸಭೆಯ ಜಂಟಿ ಅಧಿವೇಶನದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹೈಕಮಾಂಡ್‌ನ ಒತ್ತಾಯದಂತೆ ಇಬ್ಬರೂ ತಾತ್ಕಾಲಿಕ ಕದನ ವಿರಾಮ ಘೋಷಿಸಿದ್ದಾರೆ ಎನ್ನಲಾಗಿದೆ.

2028ರ ವಿಧಾನಸಭಾ ಚುನಾವಣೆ ಮತ್ತು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನಮಗೆ ಬಹಳ ಮುಖ್ಯ. ನಾವಿಬ್ಬರೂ ಇದರ ಬಗ್ಗೆ ಚರ್ಚಿಸಿದ್ದೇವೆ. 2023ರ ಚುನಾವಣೆಯಲ್ಲಿ ನಾವು ಕೆಲಸ ಮಾಡಿದ ರೀತಿಯಲ್ಲಿಯೇ ಒಟ್ಟಿಗೆ ಮುಂದುವರಿಯಲು ನಾವಿಬ್ಬರೂ ನಿರ್ಧರಿಸಿದ್ದೇವೆ. ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯಗಳು ಅಥವಾ ಗೊಂದಲಗಳಿಲ್ಲ ಎಂದು ಸಿಎಂ ಇದೇ ವೇಳೆ ಸ್ಪಷ್ಟಪಡಿಸಿದರು.

ಬೆಳಗಾವಿಯಲ್ಲಿ ಡಿಸೆಂಬರ್ 8ರಿಂದ ಶಾಸಕಾಂಗ ಅಧಿವೇಶನ ಪ್ರಾರಂಭವಾಗಲಿದೆ. ವಿರೋಧ ಪಕ್ಷಗಳನ್ನು ನಾವು ಬಹಳ ಪರಿಣಾಮಕಾರಿಯಾಗಿ ಎದುರಿಸುತ್ತೇವೆ. ಸುಳ್ಳು ಪ್ರಚಾರ, ಸುಳ್ಳು ಆರೋಪ ಮತ್ತು ಅಪಪ್ರಚಾರ ಮಾಡುವುದು ಬಿಜೆಪಿ ಮತ್ತು ಜೆಡಿಎಸ್‌ನ ಅಭ್ಯಾಸವಾಗಿದೆ. ನಾವಿಬ್ಬರೂ ಅದನ್ನು ಪರಿಣಾಮಕಾರಿಯಾಗಿ ಎದುರಿಸುತ್ತೇವೆ. ಅದಕ್ಕಾಗಿ ನಾವು ಅಗತ್ಯವಾದ ತಂತ್ರವನ್ನು ರೂಪಿಸಿದ್ದೇವೆ ಎಂದು ಅವರು ಹೇಳಿದರು. ಪುಟ 2ಕ್ಕೆ



### ಒಗ್ಗಟ್ಟಿನ ಮಂತ್ರ ಜಪಿಸಿದ ಸಿಎಂ–ಡಿಸಿಎಂ!

**ಬೆಂಗಳೂರು:** ನಮ್ಮಿಬ್ಬರ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಹಿಂದೆಯೂ ಇರಲಿಲ್ಲ. ಇವತ್ತಿಗೂ ಇಲ್ಲ. ಮುಂದೆಯೂ ಇರಲ್ಲ ಎಂದು ಜಂಟಿ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು. ಸಿಎಂ ಅವರೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹ ಒಗ್ಗಟ್ಟಿನ ಮಂತ್ರ ಜಪಿಸಿದರು.

ಉಭಯ ನಾಯಕರೂ ಉಪಾಹಾರ ಸಭೆ ನಡೆಸಿದ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹೈಕಮಾಂಡ್ ಹೇಳಿದಂತೆ ನಾವು ಕೇಳುತ್ತೇವೆ. ಇದೇ ನಾವು ಮಾಡಿರುವ ಮುಖ್ಯ ತೀರ್ಮಾನ ಎಂದು ಮುಖ್ಯಮಂತ್ರಿ ಹೇಳಿದರು.

ಗೊಂದಲ ತಿಳಿ ಮಾಡಿ ಎಂದು ಹೈಕಮಾಂಡ್ ಹೇಳಿದೆ. ನಾಳೆಯಿಂದ ಯಾವುದೇ ಗೊಂದಲ ಇರಲ್ಲ. ಈಗಲೂ ಇಲ್ಲ. ಮುಂದೆಯೂ ಇರಲ್ಲ ಎಂದರು. ಹೈಕಮಾಂಡ್ ಏನು ನಿರ್ದೇಶನ ಕೊಡುತ್ತದೆಯೊ ಅದರಂತೆ ನಾವು ಮುಂದೆ ಹೋಗುತ್ತೇವೆ ಎಂದರು.

ಪಕ್ಷದ ವರಿಷ್ಠರ ತೀರ್ಮಾನ, ಸೂಚನೆಯಂತೆ ನಾನು ಹಾಗೂ ಉಪ ಪುಟ 2ಕ್ಕೆ

### ಗೊಂದಲಕ್ಕೆ ಮಾಧ್ಯಮಗಳೇ ಕಾರಣ!

ಬೆಂಗಳೂರು: ಅಧಿಕಾರ ಹಸ್ತಾಂತರ ವಿಚಾರದಲ್ಲಿ ಉಂಟಾಗಿರುವ ಗೊಂದಲಗಳಿಗೆ ಮಾಧ್ಯಮಗಳೇ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು. ಬಿಜೆಪಿ, ಜೆಡಿಎಸ್ ಪಕ್ಷಗಳು ಪತ್ರಿಕೆಗಳಲ್ಲಿ ಅವಿಶ್ವಾಸ ನಿರ್ಣಯ ತೆಗೆದುಕೊಳ್ಳುವುದಾಗಿ ಹೇಳಿಕೆ ನೀಡಿದ್ದಾರೆ. ಇದೊಂದು ವಿಫಲ ಪ್ರಯತ್ನ ಎಂದು ಭಾವಿಸಿದ್ದೇನೆ. ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಿಂದ ಅನಗತ್ಯವಾಗಿ ಕೆಲವು ಗೊಂದಲಗಳು ನಿರ್ಮಾಣವಾಗಿವೆ. 2028ರ ಚುನಾವಣೆ ಹಾಗೂ ಸ್ಥಳೀಯ ಸಂಸ್ಥೆಗಳ ಕಾರ್ಪೋರೇಷನ್, ತಾಲೂಕು, ಜಿಲ್ಲಾ ಹಾಗೂ ಗ್ರಾಮ ಪಂಚಾಯತ್ ಚುನಾವಣೆಗಳು ಬಹಳ ಮುಖ್ಯವಾಗಿದೆ. ಈ ಬಗ್ಗೆ ಚರ್ಚೆ ಮಾಡಿದ್ದೇವೆ. 2028ರಲ್ಲಿ ಕಾಂಗ್ರೆಸ್‌ನ್ನು ಮತ್ತೆ ಅಧಿಕಾರಕ್ಕೆ ತರಬೇಕೆಂದು ಚರ್ಚಿಸಲಾಗಿದೆ. 2022ರ ವಿಧಾನ ಸಭಾ ಚುನಾವಣೆಯಲ್ಲಿ ಕೆಲಸ ಮಾಡಿದಂತೆಯೇ ಮುಂದೆಯೂ ಒಟ್ಟಿಗೆ ಸಾಗುವ ತೀರ್ಮಾನ ಮಾಡಿದ್ದೇವೆ ಎಂದು ತಿಳಿಸಿದರು.

## 'ಕೊಟ್ಟ ಮಾತು' ಪ್ರಶ್ನೆಗೆ ಸಿಎಂ ಸಿದ್ದು ಕೆಂಡಾಮಂಡಲ

**ಬೆಂಗಳೂರು:** ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆ ಒಪ್ಪಂದದಂತೆ 'ಕೊಟ್ಟ ಮಾತು' ಕುರಿತ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಧ್ಯಮಗಳ ವಿರುದ್ಧ ಕೆಂಡಾಮಂಡಲಗೊಂಡ ಪ್ರಸಂಗ ಶನಿವಾರ ನಡೆಯಿತು.

ಡಿಸಿಎಂ ಡಿ.ಕೆ.ಶಿವಕುಮಾರ್ ಜೊತೆಗೆ ಉಪಾಹಾರ ಸಭೆ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಸುದ್ದಿಗಾರರು ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರ ಬಳಿ ಕೊಟ್ಟ ಮಾತಿನ ಕುರಿತು ಪ್ರಶ್ನೆ ಕೇಳಿದರು. ಈ ಪ್ರಶ್ನೆ ಕೇಳುತ್ತಿದ್ದಂತೆ ಮಾಧ್ಯಮಗಳ ಮೇಲೆ ತೀವ್ರವಾಗಿ ಕೆಂಡಾಮಂಡಲಗೊಂಡ ಸಿದ್ದರಾಮಯ್ಯ ಅವರು, ಏನ್ ಕೊಟ್ಟ....ಮಾತು ಹೈಕ ಮಾಂಡ್ ಹೇಳಿದಂತೆ ಕೇಳುತ್ತೇವೆ ಅಂತ ನಾವಿಬ್ಬರೂ ಹೇಳಿಲ್ವಾ? ಮತ್ತೇನು ನಿಮ್ಮದು ಎಂದು ಸಿಟ್ಟಿನಲ್ಲಿ ಹೇಳಿದರು.

ಹೈಕಮಾಂಡ್ ಹೇಳಿದ್ದನ್ನು ಮಾಡುತ್ತೇವೆ ಎಂದು ಹೇಳಿದ ಮೇಲೆ ಕೊಟ್ಟ ಮಾತಿನಂತೆ ಎಂಬ ಪ್ರಶ್ನೆ ಎಲ್ಲಿ ಬರುತ್ತದೆ. ಈ ವೇಳೆ ಸಿಎಂ ಪ್ರತಿಕ್ರಿಯೆಗೆ ಡಿಕೆ.ಶಿವಕುಮಾರ್ ಕೂಡ ನಗುತ್ತಿರುವುದು ಕಂಡು ಬಂದಿತು.

ನಂತರ ಡಿಕೆ.ಶಿವಕುಮಾರ್ ಮಾತನಾಡಿ, ಮೊದಲು ನೀವು ನಾವ್ ಹೇಳೋದು ಕೇಳಿ ಎಂದ ಗರಂ ಆದರು. ನಮ್ಮ ಸರ್ಕಾರದಲ್ಲಿ ಯಾವುದೇ ಗೊಂದಲವಿಲ್ಲ. ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ಕಾರ ನಡೆಯುತ್ತಿದೆ. ಅಧಿವೇಶನದ ಹಿನ್ನೆಲೆ ಸಿಎಂ ಸಿದ್ದರಾಮಯ್ಯ ಜೊತೆ ಚರ್ಚೆ ಮಾಡಿದ್ದೇನೆ. ನಾನು, ಸಿಎಂ ಒಟ್ಟಿಗೆ ಕೆಲಸ ಮಾಡಿಕೊಂಡು ಹೋಗುತ್ತೇವೆ. ನಾನು ಹೈಕಮಾಂಡ್ ಹಾಗೂ ಸಿದ್ದರಾಮಯ್ಯ ಮಾತಿಗೆ ಎದುರಾಡಿಲ್ಲ. 2028ಕ್ಕೆ ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರುತ್ತೆ ಇದಕ್ಕೆ ಕಾರ್ಯಕ್ರಮ ರೂಪಿಸಿದ್ದೇವೆ. ಅದಕ್ಕಾಗಿ ಒಮ್ಮತದಿಂದ ಆಡಳಿತ ಮಾಡಿಕೊಂಡು ಹೋಗುತ್ತೇವೆಂದು ತಿಳಿಸಿದರು.



## ಒಂದೇ ಕುಟುಂಬದ ಐವರು ಸಾವು

### ಕೋಲಾರದಿಂದ ಮಂತ್ರಾಲಯಕ್ಕೆ ಹೋಗುತ್ತಿದ್ದಾಗ ಭೀಕರ ಅಪಘಾತ

**ರಾಯಚೂರು:** ಕೋಲಾರದಿಂದ ಮಂತ್ರಾಲಯಕ್ಕೆ ಹೋಗುತ್ತಿದ್ದಾಗ ಭೀಕರ ಕಾರು ಅಪಘಾತದಲ್ಲಿ ಒಂದೇ ಕುಟುಂಬದ ಐವರು ಮೃತಪಟ್ಟಿದ್ದಾರೆ.

ರಾಯಚೂರು ಸಮೀಪದ ಕರ್ನೂಲು ಜಿಲ್ಲೆಯ ಯಮ್ಮಿಗನೂರು ಮಂಡಲದ ಕೋಟೆಕಲ್ ಘಾಟ್ ತಿರುವಿನಲ್ಲಿ ಶನಿವಾರ ಮುಂಜಾನೆ ಎರಡು ಕಾರುಗಳು ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಐವರು ಮೃತಪಟ್ಟರು. ಇಬ್ಬರು ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕೋಲಾರ ಜಿಲ್ಲೆಯ ಚಿಕ್ಕಹೊಸಳ್ಳಿ ಗ್ರಾಮದ ವೆಂಕಟೇಶ (76), ಅವರ ಮಗಳು ಮೀನಾಕ್ಷಿ (32), ಅಳಿಯ ಸತೀಶ್ (34) ಮತ್ತು ಮೊಮ್ಮಕ್ಕಳಾದ ರಿತ್ವಿಕ್ (4) ಪುಟ 2ಕ್ಕೆ





### ಕೆಎಸ್‌ಆರ್‌ಟಿಸಿ ಬಸ್ ಪಲ್ಟಿ: ಇಬ್ಬರಿಗೆ ಗಂಭೀರ ಗಾಯ

**ರಾಯಚೂರು:** ಕೆಎಸ್‌ಆರ್‌ಟಿಸಿ ಸ್ಲೀಪರ್ ಬಸ್ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿರುವ ಘಟನೆ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ತುಗ್ಗಿಲಿಮಂಡಲಂನ ರಾತನ ಗ್ರಾಮ ಬಳಿ ಇಂದು ಬೆಳಗ್ಗೆ ನಡೆದಿದೆ. ಬೆಂಗಳೂರಿನಿಂದ ಮಂತ್ರಾಲಯಕ್ಕೆ ಪುಟ 2ಕ್ಕೆ

## 20 ದಿನ ಅಧಿವೇಶನ ನಡೆಸಲು ಆಗ್ರಹ

### ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆ ಅಗತ್ಯ: ಆರ್.ಅಶೋಕ್

**ಬೆಂಗಳೂರು:** ವಿಧಾನಮಂಡಲ ಅಧಿವೇಶನವನ್ನು 8 ದಿನಗಳ ಬದಲು 20 ದಿನ ನಡೆಸಬೇಕು. ಉತ್ತರ ಕರ್ನಾಟಕ ಸಮಸ್ಯೆಗಳ ಬಗ್ಗೆ ಹೆಚ್ಚು ಚರ್ಚೆ ಮಾಡಬೇಕೆಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದರು.



ಅಧಿವೇಶನ ಸಂಬಂಧ ಶನಿವಾರ ನಡೆದ ಬಿಜೆಪಿ–ಜೆಡಿಎಸ್ ಸಮನ್ವಯ ಸಮಿತಿ ಸಭೆ ಬಳಿಕ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಬಿಜೆಪಿ ಮತ್ತು ಜೆಡಿಎಸ್ ಒಂದಾಗಿ ಕೆಲಸ ಮಾಡುತ್ತಿದ್ದೇವೆ. ಬೆಳಗಾವಿ ಅಧಿವೇಶನದಲ್ಲಿ ಯಾವೆಲ್ಲ ವಿಷಯಗಳನ್ನು ಪ್ರಸ್ತಾಪಿಸಬೇಕೆಂದು ಚರ್ಚಿಸಲಾಗಿದೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಸಲಹೆಗಳನ್ನು ಪಡೆಯಲಾಗಿದೆ ಎಂದು ತಿಳಿಸಿದರು.

ಈ ಬಾರಿ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಬೇಕಿದೆ. ಆದರೆ, ಕೇವಲ ಬೆಂಗಳೂರು ಸಂಬಂಧಿತ ಮಸೂದೆಗಳನ್ನು ತರುತ್ತಿದ್ದಾರೆ. ಹೀಗಾದರೆ ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆಸುವ ಅಗತ್ಯವಿಲ್ಲ. ಪುಟ 2ಕ್ಕೆ

### ಸಿಎಂ ಯಾರೆಂದು ಗೊತ್ತಿಲ್ಲ

ರಾಜ್ಯದಲ್ಲಿ ಸಿಎಂ ಯಾರೆಂದು ಗೊತ್ತಾಗುತ್ತಿಲ್ಲ. ಇಬ್ಬರು ನಾಯಕರ ನಡುವೆ ಕಾದಾಟ ಜೋರಾಗಿದೆ. ಸಿದ್ದರಾಮಯ್ಯ ಎಂದರೆ ಮಾತು ತಪ್ಪಿದವರು ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಇದರಿಂದಾಗಿ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಸರ್ಕಾರದಲ್ಲಿ ಎಲ್ಲರೂ ಕೆಲಸ ಮಾಡುವುದನ್ನು ಬಿಟ್ಟು ಸಿಎಂ ಯಾರೆಂದು ಚರ್ಚಿಸುತ್ತಿದ್ದಾರೆ. ಅಧಿಕಾರ ಹಂಚಿಕೆ ಒಪ್ಪಂದದ ಕುರಿತು ಡಿ.ಕೆ.ಶಿವಕುಮಾರ್ ನೇರವಾಗಿ ಹೇಳಿದ್ದು, ಈ ಬಗ್ಗೆ ದುರ್ಬಲ ಹೈಕಮಾಂಡ್ ಪ್ರತಿಕ್ರಿಯೆ ನೀಡುತ್ತಿಲ್ಲ ಎಂದು ಟೀಕಿಸಿದರು.

## ಅಧಿಕಾರಕ್ಕಾಗಿ ಮಠಾಧೀಶರ ನೆರವು ಕೇಳಿಲ್ಲ

### ಡಿ.ಕೆ.ಶಿವಕುಮಾರ್ ನಡೆಗೆ ಎಚ್.ಡಿ.ಕುಮಾರಸ್ವಾಮಿ ತಿರುಗೇಟು



**ಬೆಂಗಳೂರು:** ನಾನು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದೆ. ನನ್ನ ಅಧಿಕಾರ ಹೋದಾಗ ಮಠಾಧೀಶರ ನೆರವು ಕೇಳಲಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಡಿ.ಕೆ.ಶಿವಕುಮಾರ್ ಅವರ ಹೆಸರು ಹೇಳದೆ ತಿರುಗೇಟು ನೀಡಿದರು.

ಬೆಂಗಳೂರಿನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕಲಿಗ ಸ್ವಾಮೀಜಿಗಳ ಬೆಂಬಲ ವಿಚಾರವಾಗಿ ಪ್ರತಿಕ್ರಿಯಿಸಿದರು. ನಾನು ಎರಡು ಬಾರಿ ಸಿಎಂ ಆದೆ. ಅಧಿಕಾರ ಹೋದರೂ ನಾನು ಮಠಾಧೀಶರ ನೆರವು ಕೇಳಿಲ್ಲ. ಒಕ್ಕಲಿಗ ಸಮಾಜ, ಇನ್ನೊಂದು ಸಮಾಜದ ಬಗ್ಗೆ ಹೇಳಲ್ಲ. ನಾನು ಹೇಳೋದು ಸಮಾಜದಲ್ಲಿ ಈ ರೀತಿ ಜಾತಿ ವಿಚಾರ ಹೇಳಿಕೊಂಡು, ಧಾರ್ಮಿಕ ಕ್ಷೇತ್ರಗಳನ್ನು ದುರುಪಯೋಗ ಮಾಡಿಕೊಳ್ಳುವುದು ಯಾವುದೇ ರಾಜಕಾರಣಿಗಳಿಗೆ ಶೋಭೆ ತರಲ್ಲ ಎಂದು ಟೀಕಿಸಿದರು.

ಸ್ವಾಮೀಜಿಗಳು ಸೇರಿದಂತೆ ಎಲ್ಲರಿಗೂ ಹೇಳುತ್ತೇನೆ. ಇಲ್ಲಿ ಪ್ರಶ್ನೆ ರಾಜ್ಯ ನೆಮ್ಮದಿಯಿಂದ ಇರಬೇಕು. ಜಾತಿ ರಾಜಕಾರಣ ಮಾಡುವುದಿಲ್ಲ ಎಂದು ಹೇಳಿ, ಈಗ ಬೃಹದಾಕಾರದ ಜಾತಿ ರಾಜಕಾರಣ ಮಾಡಲಾಗುತ್ತಿದೆ. ಇದರಿಂದ ನಷ್ಟ ಅವರಿಗಷ್ಟೇ ಅಲ್ಲ. ರಾಜ್ಯಕ್ಕೆ ನಷ್ಟ ಆಗುತ್ತದೆ. ರಾಜ್ಯದಲ್ಲಿ ಸಮಾಜಗಳ ನಡುವೆ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದೆ. ಇದರ ಅವಶ್ಯಕತೆ ಇಲ್ಲ. ಕಾಂಗ್ರೆಸ್ ಪಕ್ಷಕ್ಕೆ ಮುಜುಗರ ಅಲ್ಲ. ಕರ್ನಾಟಕದ ಜನತೆಗೆ ಮುಜುಗರ ಎಂದು ವಾಗ್ದಾಳಿ ನಡೆಸಿದರು.

ಜವಾಬ್ದಾರಿಯುತ ವ್ಯಕ್ತಿ ಅದಕ್ಕೆ ಉತ್ತರ ನೀಡಬೇಕು. ಸಿಎಂ ಡಿಸಿಎಂ ಪುಟ 2ಕ್ಕೆ

## 18 ಸಾವಿರ ಶಿಕ್ಷಕರ ನೇಮಕ

### ಅನುದಾನಿತ ಶಾಲೆಗಳಿಗೆ 6 ಸಾವಿರ ಶಿಕ್ಷಕರು: ಸಚಿವ ಮಧು ಬಂಗಾರಪ್ಪ ಹೇಳಿಕೆ

**ಶಿವಮೊಗ್ಗ:** ರಾಜ್ಯದಲ್ಲಿ ಸರ್ಕಾರಿ ಶಾಲೆಗಳಿಗೆ 12 ಸಾವಿರ ಮತ್ತು ಅನುದಾನಿತ ಶಾಲೆಗಳಿಗೆ 6 ಸಾವಿರ ಸೇರಿ ಒಟ್ಟು 18 ಸಾವಿರ ಶಿಕ್ಷರನ್ನು ಶೀಘ್ರವೇ ನೇಮಕ ಮಾಡಿಕೊಳ್ಳಲಾಗುತ್ತಿದೆ ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.



ನಗರದಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಶಿಕ್ಷಕರ ಕೊರತೆ ಆಗದಂತೆ ನೋಡಿಕೊಳ್ಳಲಾಗುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಮಕ್ಕಳ ಸ್ವಾಗತಕ್ಕೆ ಹೊಸ ಶಿಕ್ಷಕರೇ ಇರುತ್ತಾರೆ. ಅಲ್ಲಿಗೆ ನಾವು ಒಟ್ಟು 32 ಸಾವಿರ ಶಿಕ್ಷಕರ ನೇಮಕ ಮಾಡಿದ ಹಾಗೆ ಆಗುತ್ತದೆ ಎಂದು ಮಾಹಿತಿ ನೀಡಿದರು. ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕೆ ಇಲಾಖೆ ಸಹ ಸಹಕಾರ ಮಾಡಬೇಕಾಗುತ್ತದೆ. ಪುಟ 2ಕ್ಕೆ

## ನಮ್ಮದು ಒಂದೇ ಕಾಂಗ್ರೆಸ್ ಗುಂಪು: ಡಿಕೆಶಿ

**ಬೆಂಗಳೂರು:** ನಮ್ಮ ನಡುವೆ ಯಾವುದೇ ಗುಂಪುಗಾರಿಕೆ ಇಲ್ಲ, ನಮ್ಮದು ಒಂದೇ ಗುಂಪು ಅದು ಕಾಂಗ್ರೆಸ್ ಗುಂಪು ಎಂದು ಹೇಳುವ ಮೂಲಕ ಡಿಸಿಎಂ ಡಿ.ಕೆ ಶಿವಕುಮಾರ್ ಹೇಳಿದರು.

ಬೆಂಗಳೂರಿನ ಶನಿವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಷ್ಟ ಕಾಲದಲ್ಲೇ ಗುಂಪು ಮಾಡೋಕೆ ಅವಕಾಶ ಕೊಟ್ಟಿಲ್ಲ. ಈಗಲೂ ಕೊಡಲ್ಲ. ನಮ್ಮಲ್ಲಿರೋದು ಒಂದೇ ಗುಂಪು ಅದು ಕಾಂಗ್ರೆಸ್ ಗುಂಪು ಎಂದು ಒಗ್ಗಟ್ಟಿನ ಸಂದೇಶ ಸಾರಿದ್ದಾರೆ.

ನಾನು ಮತ್ತು ಸಿದ್ದರಾಮಯ್ಯ ಒಗ್ಗಟ್ಟಿನಿಂದ ಇದ್ದೇವೆ. ಒಟ್ಟಿಗೆ ಸೇರಿ ಕೆಲಸ ಮಾಡ್ತೇವೆ. ಪಕ್ಷವನ್ನು ಇನ್ನಷ್ಟು ಶಕ್ತಿಶಾಲಿಯನ್ನಾಗಿ ಮಾಡಿ 2028ರಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕೆಲಸ ಮಾಡ್ತೇವೆ. ಎಲ್ಲರ ಸಹಕಾರದಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಜನರಿಗೆ ಕೊಟ್ಟ ಮಾತಿನಂತೆ ಸೇವೆ ಮಾಡುತ್ತಿದ್ದೇವೆ. ಜನರು ನಮ್ಮ ಮೇಲೆ ವಿಶ್ವಾಸ ಇಟ್ಟು ಸಹಕಾರ ಕೊಡ್ತಿದ್ದಾರೆ. ಅವರ ಆಶಯಗಳನ್ನು ಈಡೇರಿಸುತ್ತೇವೆ ಎಂದರು.

ನಾನು ಸಿಎಂ ಒಟ್ಟಾಗಿ ಕೆಲಸ ಮಾಡ್ತೀವಿ. ಕರ್ನಾಟಕದ ಜನತೆಗೆ ಕೊಟ್ಟ ಮಾತು ನಾವು ಈಡೇರಿಸುತ್ತೇವೆ. ಉತ್ತಮ ಆಡಳಿತ ಕೊಡೋದನ್ನ ಪುಟ 2ಕ್ಕೆ



## 'ಕೊಟ್ಟ ಮಾತು' ತಿರುಚಿದ ಹೇಳಿಕೆ!

### ಮಾಧ್ಯಮಗಳ ವಿರುದ್ಧ ಡಿ.ಕೆ.ಸುರೇಶ್ ಆರೋಪ

**ನವದೆಹಲಿ:** ಕೊಟ್ಟ ಮಾತು ಉಳಿಸಿಕೊಳ್ಳಬೇಕೆಂದು ನಾನು ಹೇಳಿದ್ದು ಬೇರೆ ವಿಚಾರಕ್ಕೆ. ಮಾಧ್ಯಮಗಳು ನನ್ನ ಹೇಳಿಕೆ ತಿರುಚಿ ಸುದ್ದಿ ಮಾಡಿವೆ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ಯೂಟರ್ನ್ ಹೊಡೆದಿದ್ದಾರೆ.



ದೆಹಲಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿಎಂ ಕೊಟ್ಟ ಮಾತು ಉಳಿಸಿಕೊಳ್ಳಬೇಕು ಅಂತಾ ನಾನು ಹೇಳಿದ್ದು ಬೇರೆ. ನೀವು ತೋರಿಸಿದ್ದು ಬೇರೆ. ನಾನು ಆ ರೀತಿ ಹೇಳಿರಲಿಲ್ಲ. ನನ್ನ ಹೇಳಿಕೆ ತಿರುಚಲಾಗಿದೆ. ನಾನು ಹೇಳಿದ್ದೇ ಬೇರೆ ತರ. ನೀವು ಹೇಳುತ್ತಿರುವುದು ಬೇರೆ ತರ ಎಂದು ಟೀಕಿಸಿದರು.

ಸಿಎಂ, ಡಿಸಿಎಂ ಸಭೆ ನಡೆಸಿ ಹೇಳಿದ ಬಳಿಕ ನಾನು ಹೇಳುವುದು ಏನು ಇಲ್ಲ. ಒಟ್ಟಾಗಿ ಉಪಾಹಾರಕ್ಕೆ ಸೇರಿ, ಒಗ್ಗಟ್ಟಾಗಿದ್ದೇವೆ ಅಂತಾ ಹೇಳೋದು ಅವರ ಕರ್ತವ್ಯ. ರಾಜ್ಯದ ಜನರಿಗೆ ಮಾತು ಕೊಟ್ಟಿದ್ದಾರೆ, ಅದರಂತೆ ಸಿಎಂ, ಡಿಸಿಎಂ ನಡೆದುಕೊಳ್ತಾರೆ. ಪುಟ 2ಕ್ಕೆ

# ಕೊನೆಗೂ ಅಖಾಡಕ್ಕಿಳಿದ ಹೈಕಮಾಂಡ್

## ರಾಹುಲ್ ಗಾಂಧಿ–ಖರ್ಗೆ ಎರಡು ಗಂಟೆಗಳ ಸುದೀರ್ಘ ಚರ್ಚೆ

**ನವದೆಹಲಿ:** ಕಾಂಗ್ರೆಸ್‌ನಲ್ಲಿ ಕುರ್ಚಿ ಕದನ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ನವದೆಹಲಿಯಲ್ಲಿ ಶನಿವಾರ ಹೈಕಮಾಂಡ್ ಸಭೆ ನಡೆಸಿ ಚರ್ಚಿಸಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ನಿವಾಸಕ್ಕೆ ಆಗಮಿಸಿದ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಖರ್ಗೆ ಅವರು ಎರಡು ಗಂಟೆಗಳ ಸುದೀರ್ಘ ಸಭೆ ನಡೆಸಿದರು.

ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಉಪಾಹಾರ ಸಭೆಯ ಬಗ್ಗೆಯೂ ಚರ್ಚಿಸಲಾಗಿದೆ. ಬಳಿಕ ಈವರೆಗೂ ನಡೆದ ಬೆಳವಣಿಗೆ ಬಗ್ಗೆ ಖರ್ಗೆ ರಾಹುಲ್ ಗಾಂಧಿ ಜೊತೆಗೆ ಚರ್ಚಿಸಿದರು. ಮುಖ್ಯವಾಗಿ ಸಿಎಂ ಬದಲಾವಣೆ ಬಗ್ಗೆ ನಡೆದ ಚರ್ಚೆ ಚರ್ಚೆಯಲ್ಲಿ ಸಾಧಕ–ಬಾಧಕಗಳ ಬಗ್ಗೆ ವಿಮರ್ಶೆ ನಡೆದಿದೆ ಎನ್ನಲಾಗಿದೆ.

ನಾಳೆ ಸಂಜೆ ಐದು ಗಂಟೆಗೆ ಕಾಂಗ್ರೆಸ್ ವರಿಷ್ಠೆ ಸೋನಿಯ ಗಾಂಧಿ ಜೊತೆಗೆ ಚರ್ಚೆ ಬಳಿಕ ಅಂತಿಮ ತೀರ್ಮಾನಕ್ಕೆ



ಬರುವ ನಿರ್ಧಾರ ಮಾಡಲಾಗಿದೆ. ಹೀಗಾಗಿ, ನಾಳೆ ಸೋನಿಯ ಗಾಂಧಿ ನೇತೃತ್ವದಲ್ಲಿ ನಡೆಯಲಿರುವ ಸಭೆ ನಿರ್ಣಾಯಕವಾಗಿದೆ. ಮುಖ್ಯಮಂತ್ರಿ ಹುದ್ದೆಯ ಭವಿಷ್ಯ ನಿರ್ಣಯಿಸಲಿದೆ.

ಮುಖ್ಯಮಂತ್ರಿ ಬದಲಾವಣೆ ಕುರಿತು ಸೃಷ್ಟಿಯಾಗಿರುವ ಗೊಂದಲಗಳಿಗೆ ತೆರೆ ಎಳೆಯಲು ಹೈಕಮಾಂಡ್ ಮಧ್ಯಪ್ರವೇಶಿಸಿದೆ. ಗೊಂದಲಕ್ಕೆ ಪರಿಹಾರ ಕಂಡುಕೊಳ್ಳಲು ಪರಸ್ಪರ ಮಾತುಕತೆ ನಡೆಸುವಂತೆ ಪುಟ 2ಕ್ಕೆ

### ಬಿಹಾರ ಸೋಲಿನ ಪರಾಮರ್ಶೆ

**ನವದೆಹಲಿ:** ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋತಿತ್ತು. ಸೋಲಿನ ಪರಾಮರ್ಶೆ ಸಂಬಂಧ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಬಿಹಾರ ನಾಯಕರು ಚರ್ಚೆ ನಡೆಸಿದ್ದಾರೆ.

ಕಾಂಗ್ರೆಸ್ ನಾಯಕ ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ನಿವಾಸಕ್ಕೆ ಶನಿವಾರ ಭೇಟಿ ನೀಡಿದ್ದರು. ಈ ವೇಳೆ ಬಿಹಾರ ನಾಯಕರನ್ನು ಒಳಗೊಂಡಂತೆ ಚರ್ಚೆ ನಡೆದಿದೆ. ಬಿಹಾರ ರಾಜಕೀಯದ ಬಗ್ಗೆ ಚರ್ಚೆ ನಡೆಸಿದ ನಾಯಕರು, ಇತ್ತೀಚಿನ ವಿಧಾನಸಭೆಗೆ ಸೋಲಿಗೆ ಕಾರಣಗಳೇನು ಎಂದು ಪರಾಮರ್ಶಿಸಿಕೊಂಡಿದ್ದಾರೆ. ಎನ್‌ಡಿಎ ಸರ್ಕಾರ ಮಹಿಳೆಯರ ಪರವಾಗಿ ಘೋಷಿಸಿದ ಪುಟ 2ಕ್ಕೆ

## ಡಿ.1ರಿಂದ 'ಒನ್ ನೇಷನ್ ಒನ್ ಕಾರ್ಡ್'

### ಆರ್.ಸಿ, ಡಿ.ಎಲ್ ಕಾರ್ಡ್‌ನಲ್ಲಿ ಕ್ಯೂಆರ್ ಕೋಡ್: ಸಚಿವ ರಾಮಲಿಂಗಾರೆಡ್ಡಿ

**ಮೈಸೂರು:** ಮೈಸೂರು ಜಿಲ್ಲೆಯಲ್ಲಿ ಡಿಸೆಂಬರ್ 1ರಿಂದ ಒನ್ ನೇಷನ್ ಒನ್ ಕಾರ್ಡ್ ಯೋಜನೆಗೆ ಚಾಲನೆ ನೀಡಲಾಗುವುದು. ಆರ್.ಸಿ ಕಾರ್ಡ್ ಹಾಗೂ ಡಿ.ಎಲ್‌ನಲ್ಲಿ ಕ್ಯೂಆರ್ ಕೋಡ್ ಇರಲಿದೆ. ಇದರಲ್ಲಿ ಸಮಗ್ರ ಮಾಹಿತಿ ಇರಲಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.



ಮೈಸೂರು ದಕ್ಷಿಣ ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮೈಸೂರು ವಿಭಾಗದ ವ್ಯಾಪ್ತಿಯ ಪ್ರಾದೇಶಿಕ ಸಾರಿಗೆ ಇಲಾಖೆ ವ್ಯಾಪ್ತಿಯಲ್ಲಿ 2025 ಏಪ್ರಿಲ್ ನಿಂದ ಅಕ್ಟೋಬರ್ ವರೆಗೆ 648 ಕೋಟಿ ರೂ ಶುಲ್ಕ ಸಂಗ್ರಹಿಸಲಾಗಿದೆ, ತಪಾಸಣೆ ವೇಳೆ 15.17 ಕೋಟಿ ರೂ ದಂಡ ವಸೂಲಿ ಮಾಡಲಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಪ್ರಾದೇಶಿಕ ಸಾರಿಗೆ ಇಲಾಖೆಯ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಗಳಿಗೆ ಮಧ್ಯವರ್ತಿಗಳು ಹಾಗೂ ವಾಹನ ಚಾಲನಾ ತರಬೇತಿ ಶಾಲೆಯವರು ಬರುವ ಚಾಳಿ ಇದೆ. ಇದಕ್ಕೆ ಅವಕಾಶ ನೀಡದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಎಚ್ಚರಿಕೆ ವಹಿಸಿ ಪುಟ 2ಕ್ಕೆ

### 100 ವಿದ್ಯುತ್ ಚಾಲಿತ ಬಸ್

ಮೈಸೂರು ಜಿಲ್ಲೆಗೆ ಕೆ.ಎಸ್.ಆರ್.ಟಿ.ಸಿ ವತಿಯಿಂದ 100 ವಿದ್ಯುತ್ ಚಾಲಿತ ಬಸ್ ಗೆ ಪ್ರಸ್ತಾವನೆ ಸಲ್ಲಿಸಿದೆ. ಇದರ ನಿರ್ವಹಣೆಗಗಿ ಬನ್ನಿಮಂಟಪದಲ್ಲಿ ಡಿಪೋದಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಮೈಸೂರು ನಗರ ಬೆಳೆಯುತ್ತಿದ್ದು, ಹೊರ ವಲಯದ ರಿಂಗ್ ರೋಡ್‌ಗಳಲ್ಲಿ ಬಸ್ ಹಾಗೂ ಟ್ರಿಪ್‌ಗಳ ಬೇಡಿಕೆ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ 4 ಹೊಸ ಬಸ್ ನಿಲ್ದಾಣಕ್ಕೆ ಸ್ಥಳ ಗುರುತಿಸಲು ಯೋಜಿಸಲಾಗುತ್ತಿದೆ. 120 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಮೈಸೂರು ಹೊಸ ಗ್ರಾಮಾಂತರ ಬಸ್ ನಿಲ್ದಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

## ಮೊದಲ ಪುಟದಿಂದ

### ಸಿದ್ದು–ಡಿಕೆಶಿ 'ಕದನ ವಿರಾಮ'

ಬಿಜೆಪಿ ಅವಿಶ್ವಾಸ ನಿರ್ಣಯ ಮಂಡಿಸುವುದಾಗಿ ಹೇಳಿದೆ. ನಮ್ಮಲ್ಲಿ 140 ಶಾಸಕರಿದ್ದಾರೆ. ಬಿಜೆಪಿಯಿಂದ ಕೇವಲ 64 ಮತ್ತು ಜೆಡಿಎಸ್‌ನಿಂದ 18 ಶಾಸಕರಿದ್ದಾರೆ. ಅವರಿಬ್ಬರೂ ಸೇರಿದರೆ 82. ಅವರು ಏನೇ ಸುಳ್ಳು ಆರೋಪಗಳನ್ನು ಮಾಡಿದರೂ, ನಾವು ಅವುಗಳನ್ನು ಪರಿಣಾಮಕಾರಿಯಾಗಿ ಎದುರಿಸುತ್ತೇವೆ ಎಂದು ಸಿಎಂ ಪ್ರತಿಪಾದಿಸಿದರು. ವಿಧಾನಮಂಡಲ ಅಧಿವೇಶನದ ಸಮಯದಲ್ಲಿ ಕಾಂಗ್ರೆಸ್ ಸರ್ಕಾರದ ಮೇಲೆ ಪರಿಣಾಮ ಬೀರುವ ನಾಯಕತ್ವದ ಬಿಕ್ಕಟ್ಟಿನಿಂದ ಅವಿಶ್ವಾಸ ನಿರ್ಣಯ ಮಂಡಿಸುವುದಾಗಿ ಬಿಜೆಪಿ ಎಚ್ಚರಿಸಿತ್ತು. ಈ ಹಿನ್ನೆಲೆಯಲ್ಲಿ ಸಿಎಂ ಮತ್ತು ಡಿಸಿಎಂ ಇಬ್ಬರೂ ಅದನ್ನು ಎದುರಿಸಲು ಸಿದ್ಧ ಎಂಬ ಸಂದೇಶ ರವಾನಿಸಿದ್ದಾರೆ. ವಿಧಾನಸಭೆ ಅಧಿವೇಶನದ ಹಿನ್ನೆಲೆಯಲ್ಲಿ ಗೊಂದಲವನ್ನು ನಿವಾರಿಸಲು ಹೈಕಮಾಂಡ್ ನಮ್ಮನ್ನು ಕೇಳಿದೆ ಮತ್ತು ನಾಳೆಯಿಂದ ಯಾವುದೇ ಗೊಂದಲ ಇರುವುದಿಲ್ಲ. ಈಗಿನಿಂದ ಮತ್ತು ಭವಿಷ್ಯದಲ್ಲಿ ಹೈಕಮಾಂಡ್ ನೀಡಿದ ನಿರ್ದೇಶನಗಳ ಪ್ರಕಾರ ನಾವು ಮುಂದುವರಿಯುತ್ತೇವೆ ಎಂದು ಸಿಎಂ ಹೇಳಿದರು.

### ಅಖಾಡಕ್ಕಿಳಿದ ಹೈಕಮಾಂಡ್

ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಹೈಕಮಾಂಡ್ ಸೂಚನೆ ನೀಡಿತ್ತು. ಅದರಂತೆ ಸಿಎಂ ಮತ್ತು ಡಿಸಿಎಂ ಇಂದು ಬೆಳಗ್ಗೆ ಉಪಾಹಾರ ಸಭೆ ನಡೆಸಿದರು.

### 20 ದಿನ ಅಧಿವೇಶನ

ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಗಮನಹರಿಸಬೇಕಿದೆ. ಕಳೆದ ಸಲ ಕೊನೆಯ ಎರಡು–ಮೂರು ದಿನ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಗೆ ಅವಕಾಶ ನೀಡಲಾಗಿತ್ತು. ನಂತರ ಸಿಎಂ ಸಿದ್ದರಾಮಯ್ಯ ಒಂದಷ್ಟು ಭರವಸೆಗಳನ್ನು ನೀಡಿದ್ದರು. ಅದನ್ನು ಇಂದಿಗೂ ಈಡೇರಿಸಿಲ್ಲ ಎಂದು ಟೀಕಿಸಿದರು.

### ಒಗ್ಗಟ್ಟಿನ ಮಂತ್ರ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡೆದುಕೊಳ್ಳುತ್ತೇವೆ ಎಂದು ಇಬ್ಬರೂ ತೀರ್ಮಾನಿಸಿದ್ದೇವೆ. ಸಚಿವರಾಗಲಿ, ಶಾಸಕರಾಗಿ ಸರ್ಕಾರದ ವಿರುದ್ಧವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಕೆಲವು ಶಾಸಕರು ಸಚಿವ ಸಂಪುಟ ಪುನರ್ ರಚನೆಗೆ ಸಂಬಂಧಿಸಿದಂತೆ ದೆಹಲಿಗೆ ಭೇಟಿ ನೀಡಿರಬಹುದು. ಹಾಗೆಂದು ಬೇರೆ ಅರ್ಥ ಕಲ್ಪಿಸಬೇಕಿಲ್ಲ. ಕೆಲವರು ಇಂಥ ಕಾರಣಕ್ಕೆ ಭೇಟಿ ನೀಡಿರುವುದಾಗಿ ತಿಳಿಸಿದ್ದಾರೆ. ಅಧಿವೇಶನ ಇರುವುದರಿಂದ ಇಬ್ಬರಿಗೂ ಗೊಂದಲಗಳನ್ನು ತಿಳಿಗೊಳಿಸುವ ಕೆಲಸ ಮಾಡಲು ಸೂಚಿಸಿದ್ದಾರೆ. ನಾಳೆಯಿಂದ ಯಾವುದೇ ಗೊಂದಲ ಇರುವುದಿಲ್ಲ. ಈಗಲೂ ಇಲ್ಲ. ನಮ್ಮ ನಡುವೆ ಆಗಿರುವ ಒಪ್ಪಂದದ ಬಗ್ಗೆ ಹೈಕಮಾಂಡಿಗೆ ಮಾಹಿತಿ ನೀಡಲಾಗುವುದು. ಗೊಂದಲ ಸೃಷ್ಟಿಯಾಗಿದೆ, ಕೆಲವು ಮಾಧ್ಯಮಗಳು ಇದನ್ನು ಸೃಷ್ಟಿಸಿವೆ ಎಂದರು.

ಬ್ರೇಕ್‌ಫಾಸ್ಟ್ ಮೀಟಿಂಗ್‌ನಲ್ಲಿ ಡಿ.ಕೆ.ಶಿವಕುಮಾರ್, ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ ಉಪಸ್ಥಿತರಿದ್ದರು. ಉಪಹಾರ ಸಭೆಯಲ್ಲಿ ಏನೂ ಮಾತನಾಡಿಲ್ಲ. ಇಬ್ಬರೂ ನಮ್ಮ ಮನೆಯಲ್ಲಿ ಒಟ್ಟಿಗೆ ಉಪಹಾರ ಸೇವಿಸಿದ್ದೇವೆ. ಪಕ್ಷದ ವರಿಷ್ಠರಾದ ವೇಣುಗೋಪಾಲ್ ಅವರು ಪೊನ್ನಣ್ಣ ಅವರಿಗೆ ಕರೆ ಮಾಡಿ ಶಿವಕುಮಾರ್ ಅವರನ್ನು ಉಪಾಹಾರಕ್ಕೆ ಕರೆಯಲು ಸೂಚಿಸಿದ್ದರು. ಡಿಸಿಎಂ ಅವರಿಗೂ ಇದನ್ನೇ ತಿಳಿಸಿದ್ದರು. ಅವರೇ, ನಮ್ಮ ಮನೆಗೆ ಊಟಕ್ಕೆ ಬನ್ನಿ ಎಂದು ಆಹ್ವಾನ ನೀಡಿದರು. ಮತ್ತೊಂದು ದಿನ ಊಟಕ್ಕೆ ಬರೋಣ ಎಂದು ತಿಳಿಸಿ ನಮ್ಮ ಮನೆಗೇ ಉಪಾಹಾರಕ್ಕೆ ಕರೆದೆ ಎಂದು ಸಿಎಂ ತಿಳಿಸಿದರು.

### ಬಿಹಾರ ಸೋಲಿನ ಪರಾಮರ್ಶೆ

ಯೋಜನೆಗಳು, ಪಕ್ಷದ ಆಂತರಿಕ ಕಲಹ ಹಾಗೂ ಭಿನ್ನಾಭಿಪ್ರಾಯಗಳು. ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವಲ್ಲಿ ವಿಳಂಬ ಸೇರಿದಂತೆ ಅನೇಕ ಅಂಶಗಳು ಸೋಲಿಗೆ ಕಾರಣವಾಗಿವೆ ಎಂದು ನಾಯಕರು ತಿಳಿಸಿದ್ದಾರೆ.

ಪಕ್ಷದ ಸೋಲಿಗೆ ಕಾರಣಗಳನ್ನು ತಿಳಿದುಕೊಳ್ಳಲು ರಾಹುಲ್ ಗಾಂಧಿ ಮತ್ತು ಖರ್ಗೆ ಅವರು ಇಂದಿರಾ ಭವನದಲ್ಲಿ ಬಿಹಾರದ ನಾಯಕರು ಮತ್ತು ಸ್ಪರ್ಧಿಸಿದ್ದ ಎಲ್ಲಾ ಅಭ್ಯರ್ಥಿಗಳನ್ನು ಭೇಟಿಯಾಗಿದ್ದರು. ಬಿಹಾರ ವಿಧಾನಸಭಾ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿಕೂಟದ ಕಾಂಗ್ರೆಸ್ ಪಕ್ಷವು 61 ಕ್ಷೇತ್ರ, ಆರ್‌ಜೆಡಿ ಪಕ್ಷವು 143 ಕ್ಷೇತ್ರ, ಸಿಪಿಐ (ಎಂಎಲ್) ಪಕ್ಷವು 20 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಈ ಪೈಕಿ ಕಾಂಗ್ರೆಸ್ ಕೇವಲ ಆರು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. 202 ಸ್ಥಾನಗಳಲ್ಲಿ ಎನ್‌ಡಿಎ ಜಯಭೇರಿ ಬಾರಿಸಿತ್ತು.

### ಐವರು ಸಾವು

ಮತ್ತು ಬನ್ನಿತ್ (5) ಸಾವನ್ನಪ್ಪಿದವರು ಎಂದು ಗುರುತಿಸಲಾಗಿದೆ. ಯಮ್ಮಿಗನೂರಿನಿಂದ ಬೆಂಗಳೂರಿಗೆ ಹೋಗುತ್ತಿದ್ದ ಕಾರು ಬೆಳಗಿನ ಜಾವ 4 ಗಂಟೆಗೆ ಅದೋನಿಯಿಂದ ಬರುತ್ತಿದ್ದ ಮತ್ತೊಂದು ಕಾರಿಗೆ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ದುರ್ಘಟನೆ ಸಂಭವಿಸಿದೆ. ಬೆಳಗಿನ ಜಾವದ ದಟ್ಟ ಮಂಜು, ಮಾರ್ಗ ಸರಿಯಾಗಿ ಕಾಣಿಸದೆ ಮತ್ತು ಬೆಟ್ಟಗಳ ನಡುವಿನ ತೀಕ್ಷ್ಣವಾದ ತಿರುವುಗಳಿಂದಾಗಿ, ಎರಡೂ ವಾಹನಗಳು ಅತಿವೇಗದಲ್ಲಿ ಪರಸ್ಪರ ಡಿಕ್ಕಿ ಹೊಡೆದಿವೆ ಎನ್ನಲಾಗಿದೆ.

ಐವರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವೆಂಕಟೇಶಂ ಅವರ ಪತ್ನಿ ಗಂಗಮ್ಮ ಮತ್ತು ಕಾರು ಚಾಲಕ ಸುರೇಶ್ ತೀವ್ರ ಗಾಯಗೊಂಡಿದ್ದಾರೆ. ಯಮ್ಮಿಗನೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅವರ ಸ್ಥಿತಿ ಗಂಭೀರವಾಗಿದೆ.

ಐವರ ಸಾವಿಗೆ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ದುಃಖ ವ್ಯಕ್ತಪಡಿಸಿದ್ದಾರೆ. ಗಾಯಾಳುಗಳಿಗೆ ತಕ್ಷಣದ ಮತ್ತು ಗುಣಮಟ್ಟದ ವೈದ್ಯಕೀಯ ಆರೈಕೆಯನ್ನು ಖಚಿತಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಸಚಿವ ಬಿ.ಸಿ. ಜನಾರ್ದನ ರೆಡ್ಡಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವೆ ನಿಮ್ಮಲ ರಾಮನಾಯ್ಡು ಅವರು ಸ್ಥಳೀಯ ಅಧಿಕಾರಿಗಳೊಂದಿಗೆ ಪರಿಸ್ಥಿತಿಯನ್ನು ಪರಿಶೀಲಿಸಿದರು.

**ಕಾರ್ಮಿಕ ಮುಖಂಡ ಚಂದ್ರಶೇಖರ ಮೇಟಿ ಎಚ್ಚರಿಕೆ**

# ವಿವಿ ಭದ್ರತಾ ಕಾರ್ಮಿಕರ ನೇಮಕದಲ್ಲಿ ಅವ್ಯವಹಾರ

ಮೈಸೂರು:ಮೈಸೂರು ವಿವಿಯಲ್ಲಿ ಕಳೆದ ಏಳೆಂಟು ವರ್ಷಗಳಿಂದ ಭದ್ರತಾ ಕಾರ್ಮಿಕರ ನೇಮಕದಲ್ಲಿ ಭಾರೀ ಅವ್ಯವಹಾರ ನಡೆದಿದೆ. ಈಚೆಗೆ ರಜೆಯಿಲ್ಲದ ಕಾರಣ ಅಸ್ವಸ್ಥನಾಗಿದ್ದರೂ ಕೆಲಸಕ್ಕೆ ಹಾಜರಾದ ವೇಳೆ ಮೃತಪಟ್ಟ ಭದ್ರತಾ ಕಾರ್ಮಿಕರೊಬ್ಬರಿಗೆ ನ್ಯಾಯ ಒದಗಿಸುವಲ್ಲಿ ವಿವಿ ವಿಫಲವಾಗಿದೆ. ಹೀಗಾಗಿ ಕೂಡಲೇ ಸ್ಪಂದಿಸದಿದ್ದರೆ ಲೋಕಾಯುಕ್ತಕ್ಕೆ ದೂರು ಅಥವಾ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಬೇಕಾಗುತ್ತದೆಂದು ಸಂತ್ರಸ್ಥರ ಪರವಾಗಿ ಕಾರ್ಮಿಕ ಮುಖಂಡ ಚಂದ್ರಶೇಖರ ಮೇಟಿ ಎಚ್ಚರಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಜೆಯಿಲ್ಲದೆ ಸತತ ಕರ್ತವ್ಯ ನಿರ್ವಹಿಸಿ ಅಸ್ವಸ್ಥರಾಗಿದ್ದ ಸಂಜಯರ್‌ಕುಮಾರ್ ಎಂಬ ಭದ್ರತಾ ಕಾರ್ಮಿಕರೊಬ್ಬರನ್ನು ಬಲವಂತವಾಗಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದ ಕಾರಣ ಈಚೆಗೆ ಆತ ಕರ್ತವ್ಯ ನಿರತನಾಗಿದ್ದ ವೇಳೆ ಸಾವನ್ನಪ್ಪಿದರು. ಈತನ ಕುಟುಂಬಕ್ಕೆ ನ್ಯಾಯ ಒದಗಿಸುವುದಾಗಿ ಭರವಸೆ ನೀಡಿದ್ದ ವಿವಿ ಕುಲಸಚಿವರು ಮಾತಿಗೆ ತಪ್ಪಿದ್ದಾರೆ ಎಂದು ದೂರಿದರು.

ವಿವಿಯಲ್ಲಿ ಸುಮಾರು 152 ಮಂದಿಯನ್ನು ಭದ್ರತಾ ಕಾರ್ಮಿಕರನ್ನಾಗಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ಕಳೆದ ಏಳೆಂಟು ವರ್ಷಗಳಿಂದ ಬಿಲ್ ಮಾಡಲಾಗುತ್ತಿದೆ. ಆದರೆ ವಾಸ್ತವವಾಗಿ ಕೇವಲ 120 ಮಂದಿ ಮಾತ್ರ ಕೆಲಸ ನಿರ್ವಹಿಸುತ್ತಿದ್ದರು. ಇದೇ ವೇಳೆ ಪ್ರತಿಯೊಬ್ಬರಿಗೂ ಸುಮಾರು 23 ಸಾವಿರ ವೇತನವೆಂದು ತಿಳಿಸಿ, ಕೇವಲ 12 ಸಾವಿರ ರೂ. ನೀಡಿ ದುಡಿಸಿಕೊಳ್ಳಲಾಗಿದೆ. ಈ ರೀತಿ ಕೋಟಿಗಟ್ಟಲೆ ಅವ್ಯವಹಾ ವಿವಿಯಲ್ಲಿ ಭದ್ರತಾ ಕಾರ್ಮಿಕರ ಪೂರೈಕೆ ಗುತ್ತಿಗೆ ಪಡೆದಿದ್ದ ಕಂಪನಿಗಳು ನಡೆಸಿವೆ. ಈ ಕುರಿತು ಈಚೆಗೆ ಪ್ರತಿಭಟನೆ ನಡೆಸಿದ ವೇಳೆ ಸಮಸ್ಯೆ ಸರಿಪಡಿಸುವುದಾಗಿ ಕುಲಸಚಿವರು ಭರವಸೆ ನೀಡಿದ್ದರು. ಹೊಸ ಕಂಪನಿಗೆ ಹೊರ ಗುತ್ತಿಗೆ ನೀಡಿದ ಕಾರಣ ಕೇವಲ 90 ಮಂದಿಯನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಆದರೆ ಇವರಾರಿಗೂ ಕಾನೂನು ಬದ್ಧ ಸೌಲಭ್ಯ ದೊರಕುತ್ತಿಲ್ಲ ಎಂದು ದೂರಿದರು.

ಜೊತೆಗೆ, ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕಾರಣ ಆರು ಮಂದಿಯನ್ನು ಗುತ್ತಿಗೆದಾರ ಕೆಲದಿಂದ ತೆಗೆದುಹಾಕಿದ್ದಾರೆ. ಈ ಎಲ್ಲ ಅವ್ಯವಹಾರಗಳಿಗೆ ಸೂಪರ್‌ವೈಸರ್ ಅರುಣ್ ಕುಮಾರ್ ಹಾಗೂ ವಿವಿಯ ಕೆಲವರು ಕಾರಣರಾಗಿದ್ದಾರೆ. ಹೀಗಾಗಿ ಹಗರಣ ಕುರಿತು ಸ್ವತಂತ್ರ ತನಿಖೆ ನಡೆಸಬೇಕು. ಭದ್ರತಾ ಸಿಬ್ಬಂದಿಗೆ ಎಲ್ಲ ಸೌಲಭ್ಯ ನೀಡಬೇಕು, ಮೃತ ಸಂಜಯ್‌ಕುಮಾರ್ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು. ಇಲ್ಲದಿದ್ದಲ್ಲಿ ಲೋಕಾಯುಕ್ತಕ್ಕೆ ದೂರು ನೀಡುವ ಅಥವಾ ಕ್ರಾಫರ್ಡ್ ಹಾಲ್ ಎದುರು ಅಹೋರಾತ್ರಿ ಧರಣಿ ನಡೆಸುವ ನಿರ್ಧಾರಕ್ಕೆ ಬರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರಗತಿಪರ ಹೋರಾಟಗಾರ ಉಗ್ರ ನರಸಿಂಹೇಗೌಡ, ನಾರಾಯಣ್, ಶಿವಣ್ಣ, ಶಿವಕುಮಾರ್ ಹಾಗೂ ಇನ್ನಿತರ ನೊಂದ ಭದ್ರತಾ ಕಾರ್ಮಿಕರು ಹಾಜರಿದ್ದರು.

# ಡಿಕೆಶಿ ಸಿಎಂ ಮಾಡುವಂತೆ ಬೈಕ್ ಜಾಥಾ

## ಮೈಸೂರು ಜಿಲ್ಲಾ ಒಕ್ಕಲಿಗರ ಸಂಘ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯ

ಮೈಸೂರು: ಕೊಟ್ಟ ಮಾತಿನಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರನ್ನು ಮುಖ್ಯಮಂತ್ರಿಯಾಗಿ ಹೈಕಮಾಂಡ್ ಘೋಷಿಸುವಂತೆ ಆಗ್ರಹಿಸಿ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ನಗರದಲ್ಲಿ ಬೃಹತ್ ಬೈಕ್ ಪ್ರತಿಭಟನಾ ಜಾಥವನ್ನು ನಡೆಸಿದರು.





ನಗರದ ಒಂಟಿಕೊಪ್ಪಲಿನ ಚಂದ್ರಮೌಳೇಶ್ವರ ದೇವಾಸ್ಥಾನದಲ್ಲಿ ದೇವರಿಗೆ ವಿಶೇಷಪೂಜೆ ನೇರವೇರಿಸಿ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ರನ್ನು ಘೋಷಿಸುವಂತೆ ವಿವಿಧ ಘೋಷಣೆಗಳನ್ನು ಕೂಗಿದರು. ಮುಂದಿನ ಮುಖ್ಯಮಂತ್ರಿ ಡಿಕೆಶಿ ಎಂಬಿತ್ಯಾದಿ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು. ಬಳಿಕ ಕೆಂಗೇರಿ ಮಠದ ವಿಶ್ವ ಒಕ್ಕಲಿಗ ಪೀಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ಮೂರು ದಶಕದಿಂದ ಪಕ್ಷ ಸಂಘಟನೆ ಮಾಡಿರುವ ಡಿ.ಕೆ.ಶಿವಕುಮಾರ್ ದುಡಿದಿದ್ದಾರೆ. ದುಡಿದ ವ್ಯಕ್ತಿಗೆ ಅನ್ಯಾಯ ಮಾಡಬಾರದು. ಹೈಕಮಾಂಡ್ ಇವರಿಗೆ ಅನ್ಯಾಯ ಮಾಡಿದರೆ ಪಕ್ಷಕ್ಕೆ ಅನ್ಯಾಯ ಆಗುತ್ತದೆ. ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ಕೊಡಬೇಕು. ಮುಖ್ಯಮಂತ್ರಿ ಆದರೆ ಇನ್ನಷ್ಟು ಬಲಪಡಿಸುತ್ತಾರೆ. ಇದು ಪ್ರತಿಭಟನೆ ಅಲ್ಲ ಶಾಂತಿಯುತವಾಗಿ ಹಕ್ಕೊತ್ತಾಯ ಮಾಡುತ್ತಿದ್ದೇವೆ. ಅಧಿಕಾರಕ್ಕೆ ಹಾತೊರೆಯುವವರಲ್ಲ ಡಿಕೆ ಶಿವಕುಮಾರ್, ಕೂಡಲೇ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಬೇಕು ಎಂದರು.

ಇಡೀ ನಾಡಿನಲ್ಲಿ ಅನೇಕರು ಎಲ್ಲಾ ಪಕ್ಷದ ಕಾರ್ಯಕರ್ತರು ನಮಗೆ ಕರೆ ಮಾಡುತ್ತಿದ್ದಾರೆ. ಡಿಕೆಶಿ ಯಾಕೆ ಮುಖ್ಯಮಂತ್ರಿಯಾಗಬೇಕೆಂದು ಪ್ರಶ್ನಿಸಿದರೆ 2023ರ ಚುನಾವಣೆಯಲ್ಲಿ ಭೀಮಶಕ್ತಿಯಾಗಿ ದುಡಿದ್ದಾರೆ. ಶ್ರೀ ಸಾಮಾನ್ಯನಂತೆ ಹೈಕಮಾಂಡ್ ಗೆ ಗೌರವ ನೀಡಿ ಅವರು ಹೇಳಿದಂತೆ ಕೇಳುತ್ತಿದ್ದಾರೆ. ಈ ಬಾರಿ ಹೈಕಮಾಂಡ್ ಅಷ್ಟೇ ಗೌರವದಿಂದ ಅವರಿಗೆ ಸ್ಥಾನ ನೀಡಬೇಕು. ಆಗ ಹೈಕಮಾಂಡ್ ಗೂ ಹೆಚ್ಚಿನ ಶಕ್ತಿ ಸಿಕ್ಕಿ, ಪಕ್ಷಕ್ಕೂ ದೊಡ್ಡ ಬಲ ಬರಲಿದೆ. ಈ ನಿಟ್ಟಿನಲ್ಲಿ ಡಿಕೆಶಿಯವರಿಗೆ ಮುಖ್ಯಮಂತ್ರಿ ನೀಡಬೇಕೆಂಬುದು ಒತ್ತಾಯ. ಅವರಿಗೆ ಸಿಗುವುದಿಲ್ಲ ಎಂಬಂತ ಯಾವುದೇ ಅನುಮಾನವಿಲ್ಲ. ದೇವರ ಮುಂದೆ ಪ್ರಾರ್ಥಿಸಿದ್ದೇವೆ. ಅವರ ತಾಳ್ಮೆ, ನಿಷ್ಠೆ ಭಗವಂತ ಅವರಿಗೆ ಯಾವುದೇ ಮೋಸ ಮಾಡದೇ ಕೈ ಹಿಡಿಯುತ್ತಾನೆಂಬ ನಂಬಿಕೆಯಿದೆ. ಈಗಾಗಲೇ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಶ್ರೀಗಳು ಡಿ.ಕೆ.ಶಿವಕುಮಾರ್ ಅವಕಾಶ ನೀಡಲು ಹೆಚ್ಚು ಹೆಚ್ಚು ಕಾಯಿಸಿದರೆ ಅಥವಾ ವಿಳಂಬ ಮಾಡಿದರೆ ಶ್ರೀಗಳ ಸಮಕ್ಷಮದಲ್ಲಿ ಚರ್ಚೆ ಮಾಡಿ ಮುಂದಿನ ತೀರ್ಮಾನವನ್ನು ಕೈಗೊಳ್ಳುತ್ತೇವೆಂದರು.

ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಎಂ.ಈ.ಚೇತನ್ ಮಾತನಾಡಿ, ಇದು ಪ್ರತಿಯೊಬ್ಬ ನಿಷ್ಠಾವಂತ ಕಾರ್ಯಕರ್ತರಿಗೆ ಪಕ್ಷವನ್ನು ನೀಡಬೇಕಾದ ಗೌರವವಾಗಿದೆ. ನಿಜಕ್ಕೂ ಒಪ್ಪಂದ ಆಗಿದ್ದರೆ ಅದರಂತೆ ಡಿ.ಕೆ.ಶಿವಕುಮಾರ್ ಅವರಿಗೆ ಸ್ಥಾನ ಬಿಟ್ಟುಕೊಡಬೇಕು. ಈ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಸ್ಪಷ್ಟನೆ ನೀಡಬೇಕಿದೆ. ಮಾತ್ರವಲ್ಲದೆ, ಕಾಂಗ್ರೆಸ್ ಪಕ್ಷ ಬರುವಲ್ಲಿ ಒಕ್ಕಲಿಗ ಸಮುದಾಯದ ಶ್ರಮವೂ ಇದೆ. ಹೀಗಾಗಿ ಒಕ್ಕಲಿಗ ನಾಯಕನಿಗೆ ಸ್ಥಾನ ನೀಡಿದೇ ಕಾಂಗ್ರೆಸ್ ಪಕ್ಷ ಮೋಸ ಮಾಡಿದರೆ ಮುಂದಿನ ದಿನಗಳಲ್ಲಿ ಅದರ ಪರಿಣಾಮವನ್ನು ಪಕ್ಷವೇ ಎದುರಿಸಲಿದೆ ಎಂದು ಹೇಳಿದರು.

ದಿ ಮೈಸೂರು ಸಿಟಿ ಕೋ ಅಪರೇಟಿವ್ ಬ್ಯಾಂಕ್ ಅಧ್ಯಕ್ಷ ಯೋಗೇಶ್ 2023ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ವೇಳೆ 136 ಸೀಟ್ ಗೆಲ್ಲುತ್ತೇವೆಂಬ ಏಕೈಕ ಅಜೆಂಡದೊಂದಿಗೆ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿಯೂ ಸಂಚರಿಸಿ ಸರ್ಕಾರ ತಂದಿದ್ದಾರೆ. ಸರ್ಕಾರ ಬಂದಿರುವುದರಲ್ಲಿ ಎಲ್ಲಾ ಪಾತ್ರವಿದೆ. ಈ ಕಾರಣಕ್ಕೆ ಕೇಂದ್ರದಲ್ಲಿ ಒಪ್ಪಂದ ಆಗಿದೆ. ಒಪ್ಪಂದ ಆಗಿರುವುದು ಸ್ಪಷ್ಟವಾಗಿದ್ದು, ಕೊಟ್ಟಿರುವ ಮಾತಿನ ಪ್ರಕಾರ ಸಿಎಂ ಸಿದ್ದರಾಮಯ್ಯ ಸಿಎಂ ಸ್ಥಾನ ಬಿಟ್ಟುಕೊಡಬೇಕು. ಹಿಂದೆಯಿಂದಲೂ ಸಿದ್ದರಾಮಯ್ಯ ಕೊಟ್ಟ ಮಾತು ಉಳಿಸಿಕೊಂಡಿದ್ದು, ಅಂತೆಯೇ ಡಿಕೆಶಿಯನ್ನು ಸಿಎಂ ಖುರ್ಚಿಯಲ್ಲಿ ಕೂರಿಸಿ ಅಧಿಕಾರವನ್ನು ನಡೆಸಲಿ ಎಂದು ಒತ್ತಾಯಿಸಿದರು.

ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕಿ ಸುಶೀಲ ನಂಜಪ್ಪ, ಈಗಾಗಲೇ ಒಪ್ಪಂದದ ಪ್ರಕಾರ ಸಿದ್ದರಾಮಯ್ಯ ಸ್ವಯಂ ಪ್ರೇರಿತರಾಗಿ ಸಿಎಂ ಸ್ಥಾನ ಬಿಟ್ಟುಕೊಡಬೇಕಿದೆ. ಯಾವ ಕಾರಣಕ್ಕೆ ಇನ್ನೂ ಕೊಟ್ಟಿಲ್ಲ ಎಂಬುದು ಗೊತ್ತಿಲ್ಲ. ಒ ಪ್ಪಂದ ಆಗಿರುವುದು ಎಲ್ಲ ರೀತಿಯಲ್ಲೂ ಸ್ಪಷ್ಟವಾಗಿದೆ. ನಮಗೆ ಇಬ್ಬರೂ ಜೋಡೆತ್ತಿನಂತೆ ಇರಬೇಕು. ಆದರೆ, ಮುಖ್ಯಮಂತ್ರಿಯಾಗಿ ಡಿಕೆಶಿ ಇರಬೇಕೆಂದರು. ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್, ನಿರ್ದೇಶಕರಾದ ಉಮೇಶ್, ಕುಮಾರ್, ನಾಗಣ್ಣ, ಸುಶೀಲ ನಂಜಪ್ಪ, ಪ್ರಕಾಶ್, ಗಿರೀಶ್ ಗೌಡ, ಪ್ರಶಾಂತ್ ಕುಮಾರ್, ರವಿ ಒಕ್ಕಲಿಗ ಸಮುದಾಯದ ಮುಖಂಡರಾದ ಬೀಡನಹಳ್ಳಿ ಸತೀಶ್ ಗೌಡ, ತಾಲ್ಲೂಕು ಒಕ್ಕಲಿಗರ ಸಂಘದ ಕೃಷ್ಣೇಗೌಡ, ಶ್ರೀನಿವಾಸ್, ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ಮೋದಾಮಣಿ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಕಾವಲುಪಡೆ ಅಧ್ಯಕ್ಷ ಮೋಹನ್ ಕುಮಾರ್ ಗೌಡ, ಜಯರಾಮ್, ಕೆಎಸ್ ಆರ್ ಟಿಸಿ ನೌಕರರ ಸಂಘದ ಅಧ್ಯಕ್ಷ ವಿಶ್ವನಾಥ್, ಬಿಜಿಎಸ್ ಒಕ್ಕಲಿಗರ ಸಂಘದ ಅಧ್ಯಕ್ಷ ಮೊಗ್ಗಣ್ಣ ಗೌಡ, ನೇಗಿಲಯೋಗಿ ರವಿಕುಮಾರ್, ಕೆ.ಜಿ.ಕೊಪ್ಪಲು ಭಾಸ್ಕರ್, ಕುಂಬಾರ ಕೊಪ್ಪಲು ಚೇತನ್ ವಿಷಕಂಠೇಗೌಡ,ಇದ್ದರು.

> **ಡಿ.ಕೆ.ಶಿವಕುಮಾರ್ ರನ್ನು ಕೂಲಂ ಕೂಶವಾಗಿ ನಮಗೆ ಗೊತ್ತಿಲ್ಲ. ನಮ್ಮ ಅಜೆಂಡ ಡಿ.ಕೆ.ಶಿವಕುಮಾರ್ ಸಿಎಂ ಆಗಬೇಕು. ಐವತ್ತು ವರ್ಷ ಕಾಂಗ್ರೆಸ್‌ಗಾಗಿ ದುಡಿದಿದ್ದಾರೆ. ಪಕ್ಷಕ್ಕಾಗಿ ಅವರು ಸಾಕಷ್ಟು ತ್ಯಾಗ ಮಾಡಿದ್ದಾರೆ. ಮೈಸೂರು ಒಕ್ಕ ಲಿಗರ ಸಂಘ ಹಾಗೂ ವಿವಿಧ ಸಾಕಷ್ಟು ಒಕ್ಕಲಿ ಗರ ಸಂಘಟನೆಗಳು ಸ್ವಯಂ ಪ್ರೇರಿತವಾಗಿ ಹೋರಾಟಕ್ಕಿಳಿದಿದ್ದಾರೆ. ಮುಖ್ಯಮಂತ್ರಿ ಸ್ಥಾನ ಕೊಡದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು. ಮಾತಿನ ಪ್ರಕಾರ ಸಿಎಂ ಹುದ್ದೆ ಕೇಳುತ್ತಿದ್ದೇವೆ. ಸಿಎಂ ಅವರು ಮಾತಿನಂತೆ ಸ್ಥಾನ ಬಿಟ್ಟುಕೊಟ್ಟರೆ ಅವರೇ ದೊಡ್ಡವರಾಗುತ್ತಾರೆ. ಇನ್ನೆರಡು ದಿನ ಕಾಯಿರಿ ಮಾತುಕತೆಗಳೆಲ್ಲವೂ ಮಾಧ್ಯಮಗಳ ಮುಂದೆಯೇ ಬರುತ್ತದೆ. ಡಿಕೆಶಿ ಕೆಲಸಕ್ಕೆ ಕೂಲಿ ಕೊಡಿ.**
>
> **–ಎಂ.ಮರಿಸ್ವಾಮಿ**
>
> ಅಧ್ಯಕ್ಷ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ

## ಮೊದಲ ಪುಟದಿಂದ

### 'ಒನ್ ನೇಷನ್ ಒನ್ ಕಾರ್ಡ್'

ಎಂದು ಸೂಚನೆ ನೀಡಿದರು. ಪ್ರಾದೇಶಿಕ ಸಾರಿಗೆ ಇಲಾಖೆಯ 31 ಸೇವೆಗಳನ್ನು ಸಕಾಲದಲ್ಲಿ ಆನ್ ಲೈನ್ ಮೂಲಕ ನೀಡಲಾಗುತ್ತಿದೆ. ಸಾರ್ವಜನಿಕರು ಅನಿವಾರ್ಯವಾಗಿ ಕಚೇರಿಗೆ ಅಲೆದಾಡುವುದು ಬೇಕಿಲ್ಲ. ಸಕಾಲ ಯೋಜನೆಯನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು. ಸಭೆಯಲ್ಲಿ ಅಪರ ಸಾರಿಗೆ ಆಯುಕ್ತೆ ಓಂಕಾರೇಶ್ವರಿ, ಜಂಟಿ ಸಾರಿಗೆ ಅಯುಕ್ತ ವಸಂತ್ ಚೌಹಣ್, ಮೈಸೂರು ಪೂರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಧುರ, ಉಪ ಪ್ರಾದೇಶಿಕ ಸಾರಿಗೆ ಅಧಿಕಾರಿ ರಾಮಚಂದ್ರ, ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿ ಬಿ.ಶ್ರೀನಿವಾಸ್, ಮೈಸೂರು ನಗರ ವಿಭಾಗೀಯ ನಿಯಂತ್ರಣಾಧಿಕಾರಿ ವೀರೇಶ್ ಉಪಸ್ಥಿತರಿದ್ದರು

### 'ಕೊಟ್ಟ ಮಾತು' ತಿರುಚಿದ ಹೇಳಿಕೆ!

ಈ ಬಾರಿ ಇಬ್ಬರು ನಾಯಕರು ಮಾತಾಡಿದ್ದಾರೆ. ಈ ಬಗ್ಗೆ ನಾನು ಮಾತಾಡೋದು ಸರಿ ಅಲ್ಲ ಎಂದು ತಿಳಿಸಿದರು.

ದೆಹಲಿಗೆ ಖಾಸಗಿ ಕಾರ್ಯಕ್ರಮಕ್ಕೆ ಬಂದಿದ್ದೇನೆ. ಹೈಕಮಾಂಡ್ ನಾಯಕರು ಸಿಕ್ಕರೆ ಭೇಟಿಯಾಗುವೆ. ವಾರದ ಕೊನೆಯ ಆಗಿರುವ ಕಾರಣ ಭೇಟಿ ಅನುಮಾನ. ವರಿಷ್ಠರು ಸಮಯ ಕೊಟ್ಟರೆ ಭೇಟಿಯಾಗುತ್ತೇನೆ ಎಂದು ಹೇಳಿದರು.

### ಇಬ್ಬರಿಗೆ ಗಂಭೀರ ಗಾಯ

ಹೋಗುತ್ತಿದ್ದ ಬಸ್‌ನ ಸ್ಟೇರಿಂಗ್ ಕತ್ತರಿಸಿ ಚಾಲಕನ ನಿಯಂತ್ರಣ ತಪ್ಪಿದ ಪರಿಣಾಮ ಪಲ್ಟಿ ಹೊಡೆದು ಪಕ್ಕದ ಜಮೀನಿಗೆ ಉರುಳಿದೆ. ಬಸ್‌ನಲ್ಲಿದ್ದ 29 ಜನರ ಪೈಕಿ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಹಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸದ್ಯ ಗಾಯಾಳುಗಳನ್ನ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ದೂರ ಪ್ರಯಾಣದ ಬಸ್‌ಗಳಿಗೆ ಒಬ್ಬರೇ ಚಾಲಕರು ಇರುವುದರಿಂದ ಅಪಘಾತಗಳು ಹೆಚ್ಚಾಗುತ್ತವೆ. ಬೆಂಗಳೂರು–ಮಂತ್ರಾಲಯ–ರಾಯಚೂರು ಬಸ್‌ಗಳಿಗೆ ಇಬ್ಬರು ಪ್ರಯಾಣಿಕರನ್ನ ಒದಗಿಸಬೇಕು. ಇದರಿಂದ ಅಪಘಾತಗಳನ್ನ ತಪ್ಪಿಸಲು ಸಾಧ್ಯ ಎಂದು ಪೊಲೀಸರು ತಿಳಿಸಿದ್ದಾರೆ.

### ನಮ್ಮದು ಒಂದೇ ಕಾಂಗ್ರೆಸ್ ಗುಂಪು: ಡಿಕೆಶಿ

ಮುಂದುವರಿಸುತ್ತೇವೆ. ವಿಪಕ್ಷಗಳು ಏನೇ ಗೊಂದಲ ಮಾಡಿದರೂ ಅದಕ್ಕೆ ಉತ್ತರ ಕೊಡ್ತೀನಿ. ಪಕ್ಷದ ಶಿಸ್ತಿನ ಸಿಪಾಯಿಗಳು ನಾವು. 2029ರ ಲೋಕಸಭೆ ಚುನಾವಣೆಗೂ ರಾಹುಲ್, ಖರ್ಗೆಗೆ ಶಕ್ತಿಯನ್ನ ಕರ್ನಾಟಕದಿಂದ ಕೊಡೋ ಕೆಲಸ ಮಾಡ್ತೀವಿ ಎಂದರಲ್ಲದೇ ಹೈಕಮಾಂಡ್ ನಮ್ಮನ್ನ ಕರೆದರೆ ನಾವು ಹೋಗ್ತೀವಿ ಎಂದು ತಿಳಿಸಿದರು.

### 18 ಸಾವಿರ ಶಿಕ್ಷಕರ ನೇಮಕ

ಈ ನಿಟ್ಟಿನಲ್ಲಿ ಪ್ರಾಂಶುಪಾಲರು, ಉಪಪ್ರಾಂಶುಪಾಲರ ಕಾರ್ಯಾಗಾರ ನಡೆಸಲಾಗುತ್ತಿದೆ. ಈ ಹಿಂದಿನ ಸರ್ಕಾರದವರು ಕೇವಲ 5 ಸಾವಿರ ಶಿಕ್ಷಕರ ನೇಮಕಾತಿ ಮಾಡಿದ್ದರು. ಮಕ್ಕಳ ಹಿತದೃಷ್ಟಿಯಿಂದ ಶಿಕ್ಷಕರ ನೇಮಕಾತಿ ಆದಷ್ಟು ಬೇಗನೆ ಮುಗಿಯಲಿದೆ ಎಂದು ಸ್ಪಷ್ಟಪಡಿಸಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ವಿಐಎಸ್‌ಎಲ್ ಕಾರ್ಖಾನೆ ಭೇಟಿ ವಿಚಾರಕ್ಕೆ ಪ್ರತಿಕ್ರಿಯಿಸಿ, ಕಾರ್ಖಾನೆ ಪುನಶ್ಚೇತನ ಮಾಡುತ್ತೇವೆಂದು ಎಷ್ಟು ವರ್ಷದಿಂದ ಹೇಳುತ್ತಿದ್ದಾರೆ. ಕೇವಲ ಹೇಳಿಕೆಯಾಗಿ ಉಳಿಯದೇ ಕಾರ್ಯರೂಪಕ್ಕೆ ಬರಬೇಕು. ಅವರ ಮಾತನ್ನು ಉಳಿಸಿಕೊಂಡು ಹೋಗಲಿ ಎಂದು ಹೇಳಿದರು.

### ಅಧಿಕಾರಕ್ಕಾಗಿ ಮಠಾಧೀಶರ ನೆರವು ಕೇಳಿಲ್ಲ

ನಡುವೆ ಬ್ರೇಕ್ ಫಾಸ್ಟ್ ಮೀಟಿಂಗ್ ಹೆಸರಿನಲ್ಲಿ ಡ್ರಾಮಾ ನಡೆಯುತ್ತಿದೆ. ಡ್ರಾಮಾದ ಫಲಿತಾಂಶಕ್ಕೆ ನಾವು ಕಾಯ್ತಾ ಇದ್ದೇವೆ. ಯಾವ ಸರ್ಕಾರದ ಬಗ್ಗೆ ಮಾತಾಡ್ತಾ ಇದ್ದೀರಾ? ಕಾಂಗ್ರೆಸ್ ಪಕ್ಷದ ಸರ್ಕಾರ ಅಲ್ಲ ಇದು ಎಂದು ವಾಗ್ದಾಳಿ ನಡೆಸಿದರು.


**ನಗರಸಭಾ ಕಾರ್ಯಾಲಯ, ಹೂಟಗಳ್ಳಿ**

ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ

ಮೈಸೂರು ಜಿಲ್ಲೆ – 570018, ದೂ: 0821–2001737

ಇ–ಮೇಲ್: ka.hootagalli.cmc@gmail.com, ವೆಬ್‌ಸೈಟ್: ka.hootagalli.cmc@gmail.com

ಸಂ.: ನಸಹೂ/ತಾಂತ್ರಿಕ/ಟೆಂಡರ್ ಪ್ರಕಟಣೆ/ಸಿ.ಆರ್.–12/2025–26 **ದಿನಾಂಕ:** 28.11.2025

**ಟೆಂಡರ್ ಪ್ರಕಟಣೆ**

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2023–24 & 2024–25ನೇ ಸಾಲಿನ ಎಸ್.ಎಫ್.ಸಿ. ಉಳಿತಾಯ ಹಾಗೂ 2025–26ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ–01ರ ನಿಯಮದಂತೆ KPP ಪೋರ್ಟಲ್ ಮೂಲಕ ಐಟಂವಾರು ವಿವಿಧ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **https://kppp.karnataka.gov.in** ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 15.12.2025 ಸಂಜೆ 5:30 ಗಂಟೆಯವರೆಗೆ,** ಟೆಂಡರ್ ತೆರೆಯುವ **ದಿನಾಂಕ: 17.12.2025, ಬೆಳಿಗ್ಗೆ 10.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ.

| ಕ್ರ. ಸಂ. | ಕಾಮಗಾರಿಯ ಇಂಡೆಂಟ್ ನಂ. | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | DMA/2025-26/WS/WORK_INDENT52261 | 8.80 | 18,600 |
| 2 | DMA/2025-26/WS/WORK_INDENT52262 | 9.50 | 20,100 |

ಸಹಿ/–

**ಪೌರಾಯುಕ್ತರು**

ನಗರಸಭೆ, ಹೂಟಗಳ್ಳಿ

DIPR/MYS/1303/SA/2025-26


# ಗ್ರಾ.ಪಂ. ನೌಕರರ ವಿವಿಧ ಬೇಡಿಕೆ ಈಡೇರಿಸಲು ಆಗ್ರಹ

ಮೈಸೂರು: ಗ್ರಾಮ ಪಂಚಾಯಿತಿ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ವತಿಯಿಂದ ಜಿಲ್ಲಾ ಪಂಚಾಯತ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು ವಿಭಾಗ ಮಟ್ಟದ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು ಜಿಲ್ಲೆಗಳ ಗ್ರಾಮ ಪಂಚಾಯಿತಿ ನೌಕರರು ಸುಬ್ಬರಾಯನ ಕೆರೆಯ ಸ್ವಾತಂತ್ರ್ಯ ಉದ್ಯಾನವನದಿಂದ ಜಿ.ಪಂ ವರೆಗೆ ಮೆರವಣಿಗೆ ನಡೆಸಿ ಜಿ.ಪಂ ಮುಂಭಾಗ ಪ್ರತಿಭಟನೆ ನಡೆಸಿದರು. 1948ರಲ್ಲಿ ಭಾರತ ಸರ್ಕಾರ ಕನಿಷ್ಠ ವೇತನ ಕಾಯ್ದೆ ಅಂಗೀಕರಿಸಿದೆ. ಸಂವಿಧಾನದಲ್ಲಿ ಬದುಕುಳಿಯುವ ವೇತನ ನೀಡಬೇಕೆಂದು ತಿಳಿಸಲಾಗಿದೆ. 1957 ರಲ್ಲಿ ದೆಹಲಿಯಲ್ಲಿ ನಡೆದ 15ನೇ ಕಾರ್ಮಿಕ ಸಮ್ಮೇಳನದಲ್ಲಿ ದುಡಿಯುವ ವರ್ಗಕ್ಕೆ ಸೂಕ್ತ ಕನಿಷ್ಠ ವೇತನ ನಿಗದಿ ಪಡಿಸಲು ನಿರ್ದಿಷ್ಟ ಸೂತ್ರಗಳನ್ನು ಅಳವಡಿಸಿದೆ. ಹಿಂದಿನ ಬೊಮ್ಮಾಯಿ ಸರ್ಕಾರ ಈ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಿರಲಿಲ್ಲ. ಇದಕ್ಕೆ ಸಂಘದಿಂದ ನ್ಯಾಯಾಲಯದ ಮೆಟ್ಟಿಲೇರಿ




ಕನಿಷ್ಠ ವೇತನ ಜಾರಿ ಮಾಡಲು ಗಡುವು ನೀಡಲಾಗಿತ್ತು. ಆದರೆ, ಈವರೆಗೂ ಅನುಷ್ಠಾನವಾಗಿಲ್ಲ ಎಂದು ಕಿಡಿಕಾರಿದರು.

ಬೇಡಿಕೆಗಳು: ಗ್ರಾಮ ಪಂಚಾಯಿತಿ ನೌಕರರಿಗೆ ವೈಜ್ಞಾನಿಕ ಕನಿಷ್ಠ ವೇತನ ನಿಗದಿ ಮಾಡಬೇಕು. ಪಿಂಚಣಿ ಅಥವಾ ಇಡಿಗಂಟು ನೀಡಬೇಕು. ಘನ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಚಾಲಕಿಯರು ಮತ್ತು ಸಹಾಯಕಿಯರುಗಳಿಗೆ ಪ್ರತಿ ತಿಂಗಳು ವೇತನ ನೀಡಬೇಕು. ತರಬೇತಿ ಪಡೆದಿರುವ ಎಲ್ಲರಿಗೂ ಕೆಲಸ ನೀಡಬೇಕು. ಇವರನ್ನು ಗ್ರಾಮ ಪಂಚಾಯಿತಿ ನೌಕರರೆಂದು ಪರಿಗಣಿಸಬೇಕು. ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಲೆಕ್ಕ ಸಹಾಯಕ ಹುದ್ದೆ ಮಂಜೂರು ಮಾಡಬೇಕು. ಸೇವಾ ಹಿರಿತನ ಭತ್ಯೆ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು. ಬಳಿಕ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ವಿಜಯ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷರಾದ ಜಿ.ರಾಮಕೃಷ್ಣ, ರೇಖಾ.ಎಸ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ಎಸ್.ದಿನೇಶ್, ಕೊಡಗು ಜಿಲ್ಲಾಧ್ಯಕ್ಷ ಪಿ.ಆರ್.ಭರತ್, ಚಾಮರಾಜನಗರ ಜಿಲ್ಲಾಧ್ಯಕ್ಷ ಸಿದ್ದರಾಜು, ಮಂಡ್ಯ ಜಿಲ್ಲಾಧ್ಯಕ್ಷ ಎಂ.ಎಂ.ಶಿವಕುಮಾರ್, ಹಾಸನ ಜಿಲ್ಲಾಧ್ಯಕ್ಷ ಕೆ.ಟಿ.ಹೊನ್ನೇಗೌಡ ಸೇರಿ ಹಲವರು ಭಾಗವಹಿಸಿದ್ದರು.

# ಸ್ವಚ್ಛ ಕೊಡಗು ಸ್ವಚ್ಛತಾ ಅಭಿಯಾನ



ಮಡಿಕೇರಿ:–ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಮಡಿಕೇರಿಯ ಸಂತ ಜೋಸೆಪರ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲಾ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಂದ 'ಸ್ವಚ್ಛ ಕೊಡಗು ಸುಂದರ ಕೊಡಗು' ಸ್ವಚ್ಛತಾ ಅಭಿಯಾನವು ನಗರದ ಮುಖ್ಯರಸ್ತೆಯಲ್ಲಿ ಶನಿವಾರ ನಡೆಯಿತು.

ನಗರದ ರಾಜಾಸೀಟು ಮುಂಭಾಗದಲ್ಲಿ ನಗರ ಪೊಲೀಸ್ ಅಧಿಕಾರಿ ರಾಧಾ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ನಂತರ ನಗರದ ಮುಖ್ಯರಸ್ತೆಗಳ ಇಕ್ಕೆಲಗಳಲ್ಲಿ ತ್ಯಾಜ್ಯ ಕಸವನ್ನು ಹೆಕ್ಕಿ ವಿಲೇವಾರಿ ಮಾಡಲಾಯಿತು. ಬಳಿಕ ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ತೆರಳಿದ ವಿದ್ಯಾರ್ಥಿಗಳು ಅಲ್ಲಿಯೂ ಸ್ವಚ್ಛತಾ ಅಭಿಯಾನ ಕೈಗೊಂಡರು.

ಸಂತ ಜೋಸೆಫರ ಗೈಡ್ ಶಿಕ್ಷಕಿ ಎನ್.ಪಿ.ಪ್ರೇಮ, ಶಿಕ್ಷಕಿಯರಾದ ಡಯನಾ ಚಂಗಪ್ಪ, ಪ್ರದೀಪ್, ಸ್ಕೌಟ್ಸ್‌ನ ಜಿಲ್ಲಾ ಸಹಾಯಕ ಆಯುಕ್ತರಾದ ಗಣೇಶ್, ಸಂತ ಜೋಸೆಫರ ಆಂಗ್ಲ ಮಾಧ್ಯಮ ಶಾಲಾ ಮುಖ್ಯ ಶಿಕ್ಷಕಿ ಫಿಲೋಮಿನಾ ಡಿ'ಸೋಜ, ಜಿಲ್ಲಾ ಸಂಘಟಕರಾದ ದಮಯಂತಿ, ಸಂತ ಜೋಸೆಫರ ಶಾಲಾ ಶಿಕ್ಷಕರುಗಳಾದ ಮೋಹಿನಿ ಸಿ.ಸಿ., ದಿವ್ಯ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕುಮಾರ್ ಅವರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಮಡಿಕೇರಿಯನ್ನು ಸ್ವಚ್ಛವಾಗಿ ಇರಿಸಿ ಎಂಬ ಫಲಕಗಳನ್ನು ಹಿಡಿದು ಸ್ವಚ್ಛತೆಯ ಘೋ?ವಾಕ್ಯಗಳನ್ನು ಮೊಳಗಿಸಿದರು. ರಾಜ್ಯ ಸಂಸ್ಥೆಯ ಮುಖ್ಯ ಆಯುಕ್ತರಾದ ಪಿ.ಜಿ.ಆರ್.ಸಿಂಧ್ಯಾ ಅವರ ನಿರ್ದೇಶನದಂತೆ ಕೊಡಗು ಸ್ಕೌಟ್ಸ್ ಮತ್ತು ಗೈಡ್ಸ್ ಆಯುಕ್ತರಾದ ಕೆ.ಟಿ.ಬೇಬಿ ಮ್ಯಾಥ್ಯೂ ಅವರ ಮಾರ್ಗದರ್ಶನದಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲಾಯಿತು.

# ರಂಗಾಯಣದಲ್ಲಿ ನಾಟಕೋತ್ಸವದ ಭಿತ್ತಿಪತ್ರ ಅನಾವರಣ




ಮೈಸೂರು: ರಂಗಾಯಣದಿಂದ ಜನವರಿಯಲ್ಲಿ ನಡೆಯುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಮುನ್ನುಡಿಯಾಗಿ ರಂಗಾಯಣ ಭೂಮಿಗೀತ ರಂಗಮಂದಿರದಲ್ಲಿ ಡಿ.30ರಿಂದ ಜ.4ರವರೆಗೆ ಪ್ರತಿ ಭಾನುವಾರ ನಾಟಕಗಳ ಪ್ರದರ್ಶನದ ಮೂಲಕ ನಾಟಕೋತ್ಸವವನ್ನು ಆಯೋಜಿಸಲಾಗಿದೆ.

ಈ ಸಂಬಂಧ ನಗರದ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಸುದ್ದಿಗೋಷ್ಠಿಯಲ್ಲಿ ನಾಟಕೋತ್ಸವದ ಭಿತ್ತಿಪತ್ರ ಅನಾವರಣಗೊಳಿಸಿ ಮಾತನಾಡಿದರು. 'ರಂಗಾಯಣ ರೆಪರ್ಟರಿಗಳ ನಾಟಕ ಉತ್ಸವ' ಆಯೋಜಿಸಲಾಗಿದೆ. ಕಾರ್ಕಳದ ಯಕ್ಷ ರಂಗಾಯಣ, ಶಿವಮೊಗ್ಗ ರಂಗಾಯಣ, ಧಾರವಾಡ ರಂಗಾಯಣ, ದಾವಣಗೆರೆಯ ವೃತ್ತಿ ರಂಗಾಯಣ, ಕಲಬುರಗಿ ರಂಗಾಯಣ ಹಾಗೂ ಮೈಸೂರು ರಂಗಾಯಣ ತಂಡಗಳು ಭೂಮಿಗೀತ ರಂಗಮಂದಿರದಲ್ಲಿ ನಿಗದಿತ ದಿನಾಂಕದಲ್ಲಿ ಸಂಜೆ 6.30ಕ್ಕೆ ನಾಟಕ ಪ್ರದರ್ಶನ ನೀಡಲಿವೆ ಎಂದು ಹೇಳಿದರು.

ನಾಟಕಗಳ ವಿವರ: ನ.30 ರಂದು ಕಾರ್ಕಳದ ಯಕ್ಷ ರಂಗಾಯಣ ತಂಡದಿಂದ ಬಿ.ಆರ್.ವೆಂಕಟರಮಣ ಐತಾಳ್ ನಿರ್ದೇಶನದ ಗುಲಾಮನ ಸ್ವಾತಂತ್ರ್ಯ, ಡಿ.1ರಂದು ಕಾರ್ಕಳದ ಯಕ್ಷ ರಂಗಾಯಣ ತಂಡದಿಂದ ಎನ್.ವಿ. ಶ್ರೀಕಾಂತ್ ನಿರ್ದೇಶನದ ಮಹಾತ್ಮರ ಬರವಿಗಾಗಿ ನಾಟಕ ಪ್ರದರ್ಶನಗೊಳ್ಳಲಿದೆ ಎಂದರು.

ಡಿ.7ರಂದು ಮೈಸೂರು ರಂಗಾಯಣ ತಂಡದಿಂದ ಗಣೇಶ್ ಮಂದಾರ್ತಿ ನಿರ್ದೇಶನದ ಮೈ ಫ್ಯಾಮಿಲಿ ನಾಟಕ, 14ರಂದು ಶಿವಮೊಗ್ಗ ರಂಗಾಯಣದ ತಂಡದಿಂದ ಚಿದಂಬರರಾವ್ ಜಂಬೆ ನಿರ್ದೇಶನದ ನಮ್ಮೊಳಗೊಬ್ಬ ಗಾಂಧಿ, 21ರಂದು ದಾವಣಗೆರೆ ರಂಗಾಯಣ ತಂಡದಿಂದ ಮಾಲತೇಶ್ ಬಡಿಗೇರ್ ನಿರ್ದೇಶನದ ಪ್ರತಿ ಗಂಧರ್ವ ನಾಟಕ, 28ರಂದು ಧಾರವಾಡ ರಂಗಾಯಣದಿಂದ ಡಾ. ಪ್ರಕಾಶ್ ಗರುಡ ನಿರ್ದೇಶನದ ಕಂದಗಲ್ಲ ಭಾರತ ನಾಟಕ, ಜ.4ರಂದು ಕಲಬುರಗಿ ರಂಗಾಯಣ ತಂಡದಿಂದ ಹುಲುಗಪ್ಪ ಕಟ್ಟಿಮನಿ ನಿರ್ದೇಶನದ ಕಾಲಚಕ್ರ ನಾಟಕ ಆಯೋಜಿಸಲಾಗಿದೆ ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಉಪನಿರ್ದೇಶಕ ಎಂ.ಡಿ.ಸುದರ್ಶನ್, ಹಿರಿಯ ರಂಗ ಕಲಾವಿದೆಯರಾದ ಕೆ.ಆರ್. ನಂದಿನಿ, ಬಿ.ಆರ್.ಶಶಿಕಲಾ ಸುದ್ದಿಗೋಷ್ಠಿಯಲ್ಲಿದ್ದರು.

# ಕಲೆ, ಕಲಾವಿದರಿಗೆ ಗಡಿರೇಖೆ ಇಲ್ಲ

## ಲೇಖಕ ಜಿ.ಶಿವಣ್ಣ ಕೊತ್ತಿಪುರ ಹೇಳಿಕೆ । ಕಲಾ ಪ್ರತಿಭೋತ್ಸವ ಕಾರ್ಯಕ್ರಮ



ರಾಮನಗರ: ಕಲೆ ಮತ್ತು ಕಲಾವಿದರಿಗೆ ಭೂ ಪ್ರದೇಶ, ಭಾಷೆ ಮತ್ತು ಬಾನಗಡಿಯಿಲ್ಲ. ಪ್ರೇಕ್ಷಕ ರನ್ನು ಸಂತೃಪ್ತಿಗೊಳಿಸುವುದೇ ಪ್ರಧಾನ ಉದ್ದೇಶ ಎಂದು ಲೇಖಕ ಜಿ.ಶಿವಣ್ಣ ಕೊತ್ತಿಪುರ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಾಂಸ್ಕೃತಿಕ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಕಲಾ ಪ್ರತಿಭೋತ್ಸವ ಕಾರ್ಯ ಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರದರ್ಶನ ಕಲೆಗಳು ಸಾಮಾಜಿಕ ಮತ್ತು ವೈಯಕ್ತಿಕ ಭಾವನಾತ್ಮಕ ಸಂತೋಷ ಪಡೆಯಲು ಸಹಕಾರಿಯಾಗಿವೆ. ಗೀತೆಗಳು, ನೃತ್ಯಗಳು, ನಾಟಕಗಳು, ಚಲನಚಿತ್ರಗಳು, ಚಿತ್ರಕಲೆ ಇತ್ಯಾದಿ ಸಾಂಸ್ಕೃತಿಕ ಕಲಾ ಪ್ರಕಾರಗಳು ಮನರಂಜನೆ ನೀಡುತ್ತವೆ ಎಂದರು.

### ನಾಟ್ಯದಿಂದ ದೈಹಿಕ ಸಶಕ್ತತೆ

ಮನೋರಂಜನೆ ಮತ್ತು ಮನೋವಿಕಾಸವನ್ನು ಏಕಕಾಲಕ್ಕೆ ನೀಡುವ ಸಾಮರ್ಥ್ಯ ಕಲಾ ಕಾರರಲ್ಲಿರುತ್ತದೆ. ಭರತನಾಟ್ಯ, ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ, ಜಾನಪದ ಮತ್ತು ಚಲನಚಿತ್ರಗೀತೆಗಳಿಗೆ ನೃತ್ಯ ಮಾಡುವುದು ದೈಹಿಕ ಸಶಕ್ತತೆಯನ್ನು ಮತ್ತು ಭಾವ ಜಗತ್ತನ್ನು ಮುದಗೊಳಿಸುತ್ತದೆ ಎಂದು ಹೇಳಿದರು.

ಮಕ್ಕಳು ಚಿಕ್ಕವರಿದ್ದಾಗಲೇ ಭರತನಾಟ್ಯ, ಗೀತಗಾಯನ, ಏಕ ಪಾತ್ರಾಭಿನಯ ಇತ್ಯಾದಿ ಸಾಂಸ್ಕೃತಿಕ ಕಲೆಗಳನ್ನು ಕಲಿಸುವುದು ದೈಹಿಕ ಬೆಳವಣಿಗೆ ಮತ್ತು ಮಾನಸಿಕ ಸದೃಢತೆಗೆ ನೆರವಾಗುತ್ತದೆ. ಸಾಂಸ್ಕೃತಿಕ ಕಲೆಗಳಲ್ಲಿ ಪಾಲ್ಗೊಂಡವರು ಪಠ್ಯ ಕಲಿಕೆ ಮತ್ತು ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಾರೆ. ವ್ಯಕ್ತಿಗತವಾಗಿ ಉತ್ತಮ ನಡವಳಿಕೆಯನ್ನು ರೂಢಿಸಿಕೊಳ್ಳುತ್ತಾರೆ ಎಂದು ತಿಳಿಸಿದರು.

ಪೋಷಕರು ತಮ್ಮ ಮಕ್ಕಳನ್ನು ಕಲಾವಿದರನ್ನಾಗಿ ಮಾಡಲು ಶ್ರಮಿಸುತ್ತಾರೆ. ವೇದಿಕೆಯ ಮೇಲೆ ಅವರ ನೃತ್ಯ ಪ್ರದರ್ಶನ ನೋಡಿ ಖುಷಿ ಪಡುತ್ತಾರೆ. ಮಕ್ಕಳ ಕಲಾ ಪ್ರತಿಭೆ ಪ್ರಜ್ವಲಿಸಲಿ ಎನ್ನುವುದು ಪ್ರತಿಯೊಬ್ಬ ಪೋಷಕರ ನಿರೀಕ್ಷೆಯಾಗಿರುತ್ತದೆ. ಸತತ ಅಭ್ಯಾಸ, ಆತ್ಮವಿಶ್ವಾಸ, ಗುರಿ ಮುಟ್ಟುವ ಮಹತ್ವಾಕಾಂಕ್ಷೆಯುಳ್ಳ ಮಕ್ಕಳು ಪೋಷಕರ ನಿರೀಕ್ಷೆಯನ್ನು ನಿಜಗೊಳಿಸುವಲ್ಲಿ ಯಶಸ್ವಿಯಾಗುತ್ತಾರೆ. ಸರ್ಕಾರ ಮತ್ತು ಸಂಘ ಸಂಸ್ಥೆಗಳು ಮಕ್ಕಳ ಕಲಾ ಪ್ರತಿಭೋತ್ಸವ ಕಾರ್ಯಕ್ರಮಗಳನ್ನು ರೂಪಿಸಿ, ಸಾಮಾಜಿಕ ಸಾಮರಸ್ಯ, ಸಾಮಾಜಿಕ ಆರೋಗ್ಯ ಕಾಪಾಡಲು ಶ್ರಮಿಸಬೇಕು ಎಂದರು.

ತೀರ್ಪುಗಾರರಾಗಿ ಅಂತಾರಾಷ್ಟ್ರೀಯ ಕಲಾವಿದ ಎಸ್.ರೇಣುಕಪ್ರಸಾದ್, ವಿದುಷಿ ಮಧುಮಿತ, ವಿದುಷಿ ಪ್ರೇಮ, ವಿದುಸಿ ಪೂರ್ಣಿಮಾ, ಗಾಯಕರಾದ ಸಿದ್ದರಾಜಯ್ಯ, ಬೇವೂರು ರಾಮಯ್ಯ, ಚಂದ್ರಶೇಕರ್, ಬ್ಯಾಡರಹಳ್ಳಿ ಶಿವಕುಮಾರ್, ಜಗದೇಶ್ ಕಾರ್ಯ ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಬೇವೂರು ರಾಮಯ್ಯ, ಹೊನ್ನಿಗಾನಹಳ್ಳಿ ಸಿದ್ದರಾಜು, ಗಾಯಕ ಬ್ಯಾಡ್ರಹಳ್ಳಿ ಶಿವಕುಮಾರ್ ಮೊದಲಾದವರು ಹಾಜರಿದ್ದರು.

### ಮರೆಯಾಗುತ್ತಿವೆ ಲಾವಣಿ ಗೀತೆಗಳು

ಜಾನಪದ ವಿದ್ವಾಂಸ ಡಾ.ಎಂ.ಬೈರೇಗೌಡ ಮಾತ ನಾಡಿ, ತತ್ವಪದಗಳು, ಮೂಲ ಜಾನಪದ ಗೀತೆಗಳು ಹಾಡುಗರಿಲ್ಲದೆ ಕಳೆದು ಹೋಗುತ್ತಿವೆ. ಪಕ್ಕವಾದ್ಯ ವಿಟ್ಟು ಸಂಗೀತ ಮತ್ತು ರಾಗ ಸಂಯೋಜನೆ ಮಾಡಿ, ಮಧುರವಾಗಿ ಹಾಡಿ ನೋಡುಗರನ್ನು ರಂಜಿಸುವ, ಆನಂದಿಸುವ ಅವಕಾಶವನ್ನು ಕಲಾವಿದರು ಮಾಡಬೇಕು. ಆಧುನಿಕತೆಯ ಅಬ್ಬರದಲ್ಲಿ ಲಾವಣಿ ಗೀತೆಗಳು ಮರೆಯಾಗುತ್ತಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಾ ಪ್ರತಿಭೋತ್ಸವ ಕಾರ್ಯಕ್ರಮಗಳನ್ನು ಏರ್ಪಡಿಸಿ ಕಲೆಗಳ ಬೆಳವಣಿಗೆಗೆ ನೆರವಾಗುತ್ತಿದೆ. ಇಂದು ನೂರಕ್ಕೆ ಮೂರ್ನಾಲ್ಕು ಜನ ಕಲಾ ಪ್ರತಿಭೆಗಳು ಬೆಳೆಯುತ್ತಿವೆ. ಸ್ಪರ್ಧೆಗಷ್ಟೇ ಕಲೆಗಳ ಕಲಿಕೆಯನ್ನು ಮತ್ತು ಪ್ರದರ್ಶನವನ್ನು ಸೀಮಿತಗೊಳಿಸಿಕೊಳ್ಳದೆ ಬದುಕಿನುದ್ದಕ್ಕೂ ಉಳಿಸಿ, ಬೆಳೆಸಿಕೊಂಡು ಹೋಗುವುದು ಶ್ರೇಯಸ್ಕರ ಎಂದರು.

### ಪ್ರತಿವರ್ಷ ಕಲಾ ಪ್ರತಿಭೋತ್ಸವ ಕೆ.ಸತೀಷ್

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೆ.ಸತೀಶ್ ಮಾತನಾಡಿ, ಪ್ರತಿ ವರ್ಷ ಜಿಲ್ಲಾ, ವಲಯ ಹಾಗೂ ರಾಜ್ಯಮಟ್ಟದಲ್ಲಿ ಕಲಾ ಪ್ರತಿಭೋತ್ಸವ ಆಚರಿಸುವ ಮೂಲಕ ಕನ್ನಡ ನಾಡಿನ ಸಂಸ್ಕೃತಿಯ ಬೇರುಗಳನ್ನು ಬಲಗೊಳಿಸುವ ಪ್ರಯತ್ನವನ್ನು ನಮ್ಮ ಇಲಾಖೆ ಮಾಡುತ್ತಾ ಬರುತ್ತಿದೆ. ನಗದು ಬಹುಮಾನ ನೀಡಿ ಕಲಾ ಪ್ರತಿಭೆಗಳನ್ನು ಪ್ರೋತ್ಸಾಹ ನೀಡಲಾಗುತ್ತಿದೆ ಎಂದರು.

# ತೃತೀಯ ಲಿಂಗಿಗಳು ಸ್ವಾಭಿಮಾನದ ಜೀವನ ನಡೆಸಿ: ನ್ಯಾ.ಅಣ್ಣಯ್ಯ ಕರೆ



ರಾಮನಗರ: ತೃತೀಯ ಲಿಂಗಿಗಳು ಒಗ್ಗಟ್ಟಿನಿಂದ ಸ್ವಾಭಿಮಾನದ ಜೀವನ ನಡೆಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಂ.ಎಚ್.ಅಣ್ಣಯ್ಯ ಕರೆ ನೀಡಿದರು.

ನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ರಾಮನಗರದ ಪಯಣ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ತೃತೀಯ ಲಿಂಗಿಗಳಿಗೆ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಅಂಗಡಿ ಮಳಿಗೆಗಳು, ತರಕಾರಿ, ಹಣ್ಣು ಮಾರಾಟದಂತಹ ಕಾಯಕ ಸೇರಿದಂತೆ ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡು ಬದುಕನ್ನು ಕಟ್ಟಿಕೊಳ್ಳುವ ಮೂಲಕ ಜೀವ ಮತ್ತು ಜೀವನದಲ್ಲಿರುವ ಅರ್ಥವನ್ನು ತಿಳಿದುಕೊಳ್ಳಬೇಕು ಎಂದರು.

ತೃತೀಯ ಲಿಂಗಿಗಳಿಗೆ ಸರ್ಕಾರದಿಂದ ಸಾಕಷ್ಟು ಸೌಲಭ್ಯಗಳು ದೊರೆಯುತ್ತವೆ, ಅವುಗಳನ್ನು ಬಳಸಿಕೊಂಡು ಗೌರವತಯುವಾದ ಜೀವನ ನಡೆಸಬೇಕು ಎಂದವರು ಹೇಳಿದರು. ಮಾನವ ಸಮಾಜವು ತೃತೀಯ ಲಿಂಗಿಗಳೆಂದು ಬೇಧ ಎಣಿಸದೇ ಅವರು ನಮ್ಮವರೇ ಎಂದು ಒಪ್ಪಿಕೊಳ್ಳುವ ಮನೋಭಾವ ಪ್ರದರ್ಶಿಸಬೇಕು. ತೃತೀಯ ಲಿಂಗಿಗಳು ಅರ್ಧನಾರೀಶ್ವರಿಯರು, ತೃತೀಯ ಲಿಂಗ ಎನ್ನುವುದು ಒಂದು ಕಾಯಿಲೆ ಅಲ್ಲ ಅದು ಹಾರ್ಮೋನ್‌ಗಳ ಬದಲಾವಣೆ ಅಷ್ಟೇ ಅಂದರು.

### ಸಂವಿಧಾನದ ಪ್ರಕಾರ ಎಲ್ಲರೂ ಸಮಾನರು ? ಆರ್. ಚಂದ್ರಯ್ಯ

ಬೆಂಗಳೂರು ದಕ್ಷಿಣ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ ಅವರು ಮಾತನಾಡಿ, ಹುಟ್ಟು ಸಾವು ಸಹಜ ಪ್ರಕ್ರಿಯೆಗಳು ಹಾಗಾಗಿ ನಮ್ಮಲ್ಲಿನ ನ್ಯೂನ್ಯತೆಗಳನ್ನು ಸವಾಲಾಗಿ ತೆಗೆದುಕೊಂಡು ಬದುಕಿ ತೋರಿಸಬೇಕು. ಭಾರತವೆಂದರೆ ಸರ್ವ ಜನಾಂಗದ ಶಾಂತಿಯ ತೋಟ ಈ ರೀತಿಯ ವಾತಾವರಣದಲ್ಲಿ ನಾವೆಲ್ಲರೂ ಜನಿಸಿರುವುದು ಪುಣ್ಯ, ನಾವು ಉತ್ತಮ ಜೀವನ ಕಟ್ಟಿಕೊಳ್ಳುವುದಕ್ಕೆ ಭಾರತ ಸಂವಿಧಾನದ ಪ್ರಕಾರ ನಾವೆಲ್ಲರೂ ಸಮಾನರು ಎಂದು ಪ್ರತಿಯೊಬ್ಬರಿಗೂ ಜೀವಿಸುವ ಹಕ್ಕನ್ನು ಕೊಟ್ಟಿದೆ. ಹಾಗಾಗಿ ತೃತೀಯ ಲಿಂಗಿಗಳು ಸರ್ಕಾರದಿಂದ ದೊರೆಯುವ ಎಲ್ಲಾ ರೀತಿಯ ಸವಲತ್ತುಗಳ ಸದುಪಯೋಗಪಡೆದುಕೆಳ್ಳಬೇಕು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಟಿ.ಜಿ ಕಾರ್ಡ್ (ಲಿಂಗತ್ವ ಅಲ್ಪಸಂಖ್ಯಾತರ ಗುರುತಿನ ಚೀಟಿ) ನೀಡುವ ವ್ಯವಸ್ಥೆಯನ್ನು ಮಾಡಲಾಗಿದೆ ಅದರ ಸದುಪಯೋಗನ್ನೂ ಪಡೆದುಕೊಳ್ಳಬೇಕು, ಭಾರತೀಯ ಚುನಾವಣಾ ಆಯೋಗದ ಗುರುತಿನ ಚೀಟಿಯನ್ನು ಪಡೆದುಕೊಂಡು ಮುಂಬರುವ ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿಗಳ ಚುನಾವಣೆಗಳಲ್ಲಿ ಮತ ಚಲಾಯಿಸಬಹುದು ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಚಂದ್ರಶೇಖರ್ ಅವರು ಮಾತನಾಡಿದರು. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತಾ ಪಿ.ಆರ್., ಒಂದನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ನ್ಯಾ. ಪಂಚಾಕ್ಷರಿ ಎಂ, ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನಿವೇದಿತ ಟಿ.ಎಂ., ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ದಂಡಾಧಿಕಾರಿ ಲೋಕೇಶ್, ಜಿಲ್ಲಾ ವಕೀಲರ ಸಂಘದ ಖಜಾಂಚಿ ಮಂಜೇಶ್ ಗೌಡ, ಪಯಣ ಕಾರ್ಯದರ್ಶಿಗಳು ಹಾಗೂ ಸಿಸಿಟಿಐ ರಾಮನಗರ ಪ್ರಾಜೆಕ್ಟ್ ಡೈರೆಕ್ಟರ್ ಸವಿತಾ ಎಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಭಿವೃದ್ಧಿ ಅಧಿಕಾರಿ ಗಾಯತ್ರಿ ದೇವಿ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಶಶಿಕಿರಣ್, ತೃತೀಯ ಲಿಂಗಿಗಳು, ಸಿಬ್ಬಂದಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಚಾ.ನಗರ: ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ



ಚಾಮರಾಜನಗರ: ರಾಜ್ಯ ಕಾಂಗ್ರೆಸ್ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಜಿಲ್ಲಾ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಫೆಂಡಾಲ್ ಹಾಕಿ ಪ್ರತಿಭಟನೆ ನಡೆಸಿ

ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು. ನಂತರ ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ರಚಿಸಿ ಕೆಲಕಾಲ ರಸ್ತೆತಡೆ ನಡೆಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಇದರ ವಿರುದ್ಧ ಬಿಜೆಪಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತಿದ್ದು ಚಾಮರಾಜನಗರದಲ್ಲೂ ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್ ಮಾತನಾಡಿ, ಕಾಂಗ್ರೆಸ್ ಸರಕಾರದಿಂದ ರೈತರಿಗೆ ಅನ್ಯಾಯವಾಗಿದ್ದು, ಅದನ್ನು ಖಂಡಿಸಿ ಜಿಲ್ಲಾ ಬಿಜೆಪಿ ಘಟಕದಿಂದ ಪ್ರತಿಭಟನೆ ನಡೆಸುವ ಮೂಲಕ ಸರಕಾರವನ್ನು ಎಚ್ಚರಿಸುವ ಕೆಲಸವನ್ನು ಮಾಡುತ್ತಿದೆ ಎಂದರು.

ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಲು ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಇದರಿಂದ ಜನರಿಗೆ ಅನ್ಯಾಯವಾಗಿದೆ. ಬಿಜೆಪಿ ಸರಕಾರವು ಎಸ್‌ಸಿ,ಎಸ್‌ಟಿ ಸಮುದಾಯ ಏಳಿಗೆಗೆ ಶ್ರಮಿಸಿತ್ತು. ಆದರೆ, ಈ ಸರಕಾರ ಅವರ ಎಸ್‌ಇಪಿ, ಟಿಎಸ್‌ಪಿ ಹಣವನ್ನು ದುರ್ಬಳಕೆ ಮಾಡಿಕೊಂಡು ಅವರನ್ನು ಕಡೆಗಣಿಸಿದೆ ಎಂದು ದೂರಿದರು.

ಕಾಂಗ್ರೆಸ್‌ನವರಿಗೆ ರೈತರ ಪರ ಕಾಳಜಿ ಇಲ್ಲ. ಆದ್ದರಿಂದಲೇ ರೈತರು ಬಳಕೆ ಮಾಡುವಂತಹ ಉತ್ಪನ್ನಗಳ ಬೆಲೆಯನ್ನು ಏರಿಕೆ ಮಾಡಿದ್ದಾರೆ. ಈ ಹಿಂದೆ ನಮ್ಮ ಸರಕಾರವಿದ್ದಾಗ ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ನೀಡುತ್ತಿತ್ತು. ಆದರೆ, ಈಗ ಲಕ್ಷಾಂತರ ರೂ.ಗಳನ್ನು ಖರ್ಚು ಮಾಡಬೇಕಾಗಿದ್ದು, ಕಾಂಗ್ರೆಸ್ ಸರ್ಕಾರದ ರೈತವಿರೋಧಿ ಸರ್ಕಾರವಾಗಿ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ಮಾಜಿ ಅಧ್ಯಕ್ಷರಾದ ಆರ್.ಸುಂದರ್, ಸಾಹಿತಿ ಕೋಡಿಉಗನೆಮಂಜು ಮಾತನಾಡಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಮಾಜಿ ಅಧ್ಯಕ್ಷ ನಾರಾಯಣ ಪ್ರಸಾದ್, ಅರಕಲವಾಡಿ ನಾಗೇಂದ್ರ, ಹಾಪ್ ಕಾಮ್ಸ್ ಅಧ್ಯಕ್ಷ ಲೋಕೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಳಾದ ಪಿ.ವೃಷಬೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್, ಜಿಲ್ಲಾ ರೈತ ಮೋರ್ಚಾದ ಅಧ್ಯಕ್ಷ ಬೇಡರಪುರ ಬಸವಣ್ಣ,ಯುವ ಮೋರ್ಚಾದ ಅಧ್ಯಕ್ಷ ಸೂರ್ಯ, ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ಕಮಲಮ್ಮ, ಪ್ರಧಾನ ಕಾರ್ಯದರ್ಶಿ ಶೈಲಜಾ, ಎಸ್ ಟಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಬುಲೆಟ್ ಚಂದ್ರು,ಶಿವಣ್ಣ ರಾಮಸಮುದ್ರ ಶಿವಣ್ಣ, ಮಂಜುನಾಥ್ ಕೆರೆಹಳ್ಳಿ ವೆಂಕಟೇಶ್, ಕೂಸಣ್ಣ, ಮಹೇಶ್, ಹೊಂಗನೂರು ಮಹಾದೇವಸ್ವಾಮಿ, ಮುತ್ತಿಗೆ ಮೂರ್ತಿ, ಇತರರು ಭಾಗವಹಿಸಿದ್ದರು.

# ಇಂದು ಭೀಮಬಲ ಬಳಗದ ವಾಕಥಾನ್

ಮೈಸೂರು: ಭೀಮ ಬಲ ಬಳಗದ ವತಿಯಿಂದ ಸಂವಿಧಾನದ 75 ರ ಸಂಭ್ರಮ ಹಿನ್ನೆಲೆ ನ. 30 ರ ಬೆಳಗ್ಗೆ 7.30ಕ್ಕೆ ನಗರದ ಮೈಸೂರು ವಿವಿ ಕ್ರಾಫರ್ಡ್ ಭವನದಿಂದ ಟೌನ್ ಹಾಲ್ ಬಳಿಯ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆವರೆಗೆ ವಾಕಥಾನ್ ಹಮ್ಮಿಕೊಂಡಿರುವುದಾಗಿ ನಗರಪಾಲಿಕೆ ಮಾಜಿ ಸದಸ್ಯ ಶರತ್ ಸತೀಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕ್ರಾಫರ್ಡ್ ಭವನದ ನಾಲ್ವಡಿ ಪ್ರತಿಮೆ ಬಳಿ ಉಪ ಪೊಲೀಸ್ ಆಯುಕ್ತ ಸುಂದರ್‌ರಾಜ್, ವಿವಿ ವಿದ್ಯಾರ್ಥಿಗಳ ಕ್ಷೇಮ ಪಾಲನಾ ನಿರ್ದೇಶಕ ಗುರು ಸಿದ್ದಯ್ಯ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಸಮ್ಮುಖದಲ್ಲಿ ಚಾಲನೆ ದೊರೆಯಲಿದೆ. ಬಳಗದ 75 ಮಂದಿ ಸದಸ್ಯರು ಡಾ.ಬಿ.ಆರ್. ಅಂಬೇಡ್ಕರ್ ಚಿತ್ರದ ಟೀ ಶರ್ಟ್ ಧರಿಸಿ ಮುಂಚೂಣಿಯಲ್ಲಿರಲಿದ್ದಾರೆ. ವಿವಿಧ ಸಂಘಟನೆ ಸದಸ್ಯರು, ಸಾರ್ವಜನಿಕರು ಪಾಲ್ಗೊಳ್ಳಲಿದ್ದಾರೆಂದರು. ನಾಡನಹಳ್ಳಿ ಸುರೇಶ್, ಡಾ. ಪ್ರತಾಪ್, ಡಾ. ಕಿರಣ್, ಪುಷ್ಪ ಇದ್ದರು.




## ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜು ಬಾಲಕರ ಮತ್ತು ಬಾಲಕಿಯರ ಶಟಲ್ ಬ್ಯಾಡ್ಮಿಂಟನ್

# ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಸಮಾರೋಪ ಸಮಾರಂಭ






ಮಡಿಕೇರಿ:–ಕ್ರೀಡೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು ದೇಶಕ್ಕೆ ಯಶಸ್ವಿಯನ್ನು ತಂದು ಕೊಡಿ ಎಂದು ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಎಂ.ಎಲ್.ಚಿದಾನಂದ ಕುಮಾರ್ ಅವರು ಹೇಳಿದರು.

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು ಇವರ ವತಿಯಿಂದ ನಗರದ ಜನರಲ್ ತಿಮ್ಮಯ್ಯ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜು ಬಾಲಕರ ಮತ್ತು ಬಾಲಕಿಯರ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಯಶಸ್ವಿಯಾಗಿ ಕ್ರೀಡೆಗಳಲ್ಲಿ ಭಾಗವಹಿಸಿ ಎಂದು ಆಶಿಸಿದರು. ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷರಾದ ಚಿತ್ರಾ ವೈ. ಅವರು ಮಾತನಾಡಿ ಸೋಲು ಗೆಲುವು ಮುಖ್ಯವಲ್ಲ ಕ್ರೀಡೆಗಳಲ್ಲಿ ಭಾಗವಹಿಸುವುದು ಮುಖ್ಯ ಎಂದು ಹೇಳಿದರು.

ಪ್ರಾಂಶುಪಾಲರು ಹಾಗೂ ಕೊ.ಜಿ.ಪ.ಪೂ.ಕಾ ಪ್ರಾಂಶುಪಾಲರುಗಳ ಸಂಘದ ಖಜಾಂಜಿ ವಿವಿಯನ್ ಅಂತೋಣಿ ಆಲ್ವಾರಿಸ್ ಅವರು ಮಾತನಾಡಿ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಕ್ರೀಡೆಗಳಿಗೆ ಹೆಚ್ಚಿನ ಮಹತ್ವ ನೀಡಿ ಹಾಗೂ ಕ್ರೀಡೆಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಕೊ.ಜಿ.ಪ.ಪೂ.ಕಾ ಪ್ರಾಂಶುಪಾಲರುಗಳ ಸಂಘದ ಕಾರ್ಯದರ್ಶಿ ಹಾಗೂ ಪ್ರಾಂಶುಪಾಲರು ಎನ್.ಕೆ.ಜ್ಯೋತಿ ಅವರು ಮಾತನಾಡಿ ಮಕ್ಕಳ ಮೇಲೆ ಹೆಚ್ಚಿನ ಗಮನ ಹರಿಸುವುದು ತಂದೆ ತಾಯಿಗಳ ಕರ್ತವ್ಯ ಹಾಗೂ ಗೌರವ ಆತ್ಮವಿಶ್ವಾಸ ಬೆಳೆಸುವುದು ಮಕ್ಕಳ ಕರ್ತವ್ಯ ಎಂದು ಹೇಳಿದರು.

ನಗರಸಭೆ ಉಪಾಧ್ಯಕ್ಷರಾದ ಮಹೇಶ್ ಜೈನಿ ಅವರು ಮಾತನಾಡಿ ವಿದ್ಯಾರ್ಥಿಗಳ ಪ್ರತಿಭೆಗಳನ್ನು ರೂಪಿಸುವುದು ಮತ್ತು ಜವಾಬ್ದಾರಿಯಿಂದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ವಸಂತ್ ಅವರು ಮಾತನಾಡಿ ಕ್ರೀಡೆ ಇದ್ದರೆ ಶಿಕ್ಷಣ ಇರುವುದು ಹಾಗೂ ಕೊಡಗು ಜಿಲ್ಲೆಯು ಉತ್ತಮವಾದ ಸೌಲಭ್ಯಗಳನ್ನು ಹೊಂದಿದೆ ಎಂದರು.

ರಾಜ್ಯಮಟ್ಟದ ಪದವಿ ಪೂರ್ವ ಕಾಲೇಜು ಬಾಲಕರ ಮತ್ತು ಬಾಲಕಿಯರ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕೊ.ಜಿ.ಪ.ಪೂ.ಕಾ ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘದ ಅಧ್ಯಕ್ಷರಾದ ಕೆ.ಸಿ.ಚಂದ್ರಶೇಖರ್, ಶಿವಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ. ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಪಿ.ಆರ್.ವಿಜಯ, ವಿದ್ಯಾರ್ಥಿಗಳು ಸಿಬ್ಬಂದಿ ವರ್ಗದವರು ಉಪನ್ಯಾಸಕರು ಇತರರು ಇದ್ದರು.

## ರೈತರಿಂದ ಸುವರ್ಣ ಸೌಧ ಮುತ್ತಿಗೆ ಹಾಕುವ ಎಚ್ಚರಿಕೆ



ಚಾಮರಾಜನಗರ: ರಾಜ್ಯದ ರೈತರ ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ಸುವರ್ಣ ಸೌಧ ಮುತ್ತಿಗೆ ಹಾಕಲಾಗುವುದು ಎಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಎಚ್ಚರಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ ತೀರ್ಮಾನಿಸಲಾಯಿತು.

ದಕ್ಷಿಣ ಕರ್ನಾಟಕದ ಕಬ್ಬು ಬೆಳೆಗಾರರಿಗೆ ಕಟಾವು ಸಾಗಾಣಿಕೆಯನ್ನು ಬಿಟ್ಟು ಪ್ರತಿ ಟನ್ ಕಬ್ಬಿಗೆ 2900 ರೂ ನೇರವಾಗಿ ರೈತರ ಖಾತೆಗೆ ಜಮಾ ಮಾಡಬೇಕು. ಸಕ್ಕರೆ ಕಾರ್ಖಾನೆಗಳ ಮುಂದೆ ತೂಕದ ಯಂತ್ರ ಹಾಕಬೇಕು. ಇಳುವರಿ ಮೋಸ ತಪ್ಪಿಸಲು ಲ್ಯಾಬ್ ಸ್ಥಾಪಿಸಬೇಕು. ದ್ವಿಪಕ್ಷಿಯ ಒಪ್ಪಂದ ಪತ್ರ ಜಾರಿ, ಸಕ್ಕರೆ ಕಾರ್ಖಾನೆಗಳ ಉಪ ಉತ್ಪನ್ನಗಳ ಲಾಭವನ್ನು ರೈತರಿಗೆ ಹಂಚಬೇಕು. ಕಳೆದ ಎರಡು ವರ್ಷಗಳ ಹಿಂದಿನ ಬಾಕಿ 1950 ಕೋಟಿ ನೀಡಬೇಕೆಂದು ಒತ್ತಾಯಿಸಿದರು.

ರಾಜ್ಯದ ಭತ್ತ ಬೆಳೆಗಾರರಿಗೆ ಎಫ್‌ಆರ್‌ಪಿ ಜೊತೆ 500 ಹೆಚ್ಚುವರಿ ಪ್ರೋತ್ಸಾಹ ಧನ ಹಾಗೂ ಖರೀದಿ ಕೇಂದ್ರಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತೆರೆಯಬೇಕು. ಚಾಮುಲ್ ಗೆ ಬಾಕಿ ಇರುವ ಅನುದಾನ ಐವತ್ತು ಕೋಟಿ ತಕ್ಷಣ ನೀಡಬೇಕು ಐಸ್ ಕ್ರೀಮ್ ಘಟಕ ಪ್ರಾರಂಭಕ್ಕೆ ಕ್ರಮ. ಅಕ್ರಮ ಸಕ್ರಮ ಯೋಜನೆ ಜಾರಿ, ಜಿಲ್ಲೆಯ ಕೆರೆಕಟ್ಟೆಗಳಿಗೆ ನದಿ ಮೂಲದಿಂದ ನೀರು ತುಂಬಿಸಲು ವಿಶೇಷ ಪ್ಯಾಕೇಜ್ ನೀಡಬೇಕು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಾಲ ಮನ್ನಾ ಮಾಡಬೇಕು ಎಂದು ಸಭೆಯಲ್ಲಿ ಆಗ್ರಹಿಸಿದರು. ಮಾನವ–ಪ್ರಾಣಿ ಸಂಘರ್ಷ ತಡೆಯಲು ವಿಶೇಷ ಅನುದಾನ ನೀಡಿ ಸೂಕ್ತ ಕ್ರಮ ಕೈಗೊಳ್ಳಬೇಕು. ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ಕೇಳಬಾರದು. ರೈತರ ಕೃಷಿ ಚಿನ್ನದ ಸಾಲಕ್ಕೆ ಅಸಲು ಮತ್ತು ಬಡ್ಡಿ ಒಟ್ಟಿಗೆ ಪಾವತಿಸಲು ರೈತರನ್ನು ಒತ್ತಾಯಿಸಬಾರದು ಬಡ್ಡಿಯನ್ನು ಜಮಾ ಮಾಡಿಕೊಂಡು ಸಾಲವನ್ನು ರಿನಿವಲ್ ಮಾಡಬೇಕು ಈ ಮೇಲ್ಕಂಡ ರೈತರ ಹಕ್ಕುಗಳಿಗೆ ಒತ್ತಾಯಿಸಿ ಸುವರ್ಣಸೌಧ ಮುತ್ತಿಗೆ ಹಾಕಲು ತೀರ್ಮಾನಿಸಲಾಗಿದ್ದು ರಾಜ್ಯದ ಕಬ್ಬು ಬೆಳಗಾರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಭಾಗ್ಯರಾಜ್ ಮನವಿ ಮಾಡಿದರು. ಸಭೆಯಲ್ಲಿ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು, ಮಲೆಯೂರು ಮಹೇಂದ್ರ, ಸತೀಶ್, ಪ್ರಕಾಶ್ ಗಾಂಧಿ, ಗುರುವಿನಪುರ ಚಂದ್ರಪ್ಪ, ಮಲ್ಲು, ಬಸವರಾಜು, ನಾಗರಾಜು, ನಾಗ ಮಲ್ಲಪ್ಪ, ರಾಮಣ್ಣ, ಪ್ರಭುಸ್ವಾಮಿ, ಮಹಾದೇವಪ್ಪ ಹಾಗೂ ಇತರರು ಹಾಜರಿದ್ದರು.

## ಬೈಕ್ ಡಿಕ್ಕಿ ಪಾದಚಾರಿ ಸಾವು

ಚಾಮರಾಜನಗರ, ತಾಲೂಕಿನ ಹರದನಹಳ್ಳಿ – ಅಮಚವಾಡಿ ಮುಖ್ಯ ರಸ್ತೆಯ ಎಸ್ ಬಿಐ ಬ್ಯಾಂಕಿನ ಎದುರು ಬೈಕ್ ಡಿಕ್ಕಿ ಹೊಡೆದು ಪಾದಚಾರಿ ಮೃತಪಟ್ಟಿರುವ ಘಟನೆ ಗುರುವಾರ ರಾತ್ರಿ ಸಂಭವಿಸಿದೆ.

ತಾಲೂಕಿನ ಬಸವಾಪುರ ಗ್ರಾಮದ ನಿವಾಸಿ ಮಹೇಶ್(35) ಮೃತ ಪಾದಚಾರಿ. ಮೃತ ಮಹೇಶ್ ಅಮಚವಾಡಿಯಿಂದ ಹರದನಹಳ್ಳಿ ಕಡೆಗೆ ನಡೆದುಕೊಂಡು ಬರುತ್ತಿದ್ದ, ಈ ವೇಳೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿದ ಕೂಡಲೇ ಪೂರ್ವ ಪೊಲೀಸ್ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮೃತ ದೇಹವನ್ನು ನಗರದ ಸಿಮ್ಸ್ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆಯ ನಂತರ ವಾರಸುದಾರರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ರಾಮಸಮುದ್ರ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬೃಹತ್ ಮೈಸೂರು ನಿರ್ಧಾರ ಸ್ವಾಗತಿಸಿದ ರಾಜೀವ್

ಮೈಸೂರು: ಮೈಸೂರನ್ನು ಬೃಹತ್ ಮೈಸೂರನ್ನಾಗಿಸುವ ಸಚಿವ ಸಂಪುಟದ ಸಭೆ ನಿರ್ಧಾರದಿಂದಾಗಿ ನಗರ ಮುಂದಿನ ದಿನಗಳಲ್ಲಿ ಪ್ರವಾಸೋದ್ಯಮ, ಕೈಗಾರಿಕೆ, ಇನ್ನಿತರ ಆರ್ಥಿಕ ಚಟುವಟಿಕೆಗಳ ದೃಷ್ಟಿಯಿಂದ ಸಮಗ್ರವಾಗಿ ಅಭಿವೃದ್ಧಿ ಹೊಂದಲಿದೆ ಎಂದು ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಸಂತಸ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದರಿಂದಾಗಿ ಈಗಾಗಲೇ ಮೂಲ ಸೌಕರ್ಯ ದೃಷ್ಟಿಯಿಂದ ಸಮಸ್ಯೆ ಎದುರಿಸುತ್ತಿರುವ ಪ್ರದೇಶಗಳು ಬೃಹತ್ ಮೈಸೂರು ವ್ಯಾಪ್ತಿಗೆ ಬಂದು, ಎಲ್ಲ ರೀತಿಯ ಅಭಿವೃದ್ಧಿ ಕಾಣಲಿವೆ. ಜೊತೆಗೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬರುವ ಅನುದಾನವೂ ಹೆಚ್ಚಳವಾಗಲಿದೆ. ರಸ್ತೆಗಳು ವಿಶಾಲವಾಗಲಿವೆ. ಮೈಸೂರಿಗೆ ಹೊಂದಿಕೊಂಡಂತಿರುವ ನಂಜನಗೂಡು, ಕೆ.ಆರ್.ಎಸ್. ಶ್ರೀರಂಗಪಟ್ಟಣದಂತಹ ಧಾರ್ಮಿಕ, ಪ್ರವಾಸೋದ್ಯಮ ಕೇಂದ್ರಗಳು ಪ್ರಗತಿ ಕಾಣಲಿವೆ ಎಂದರು. ಇದಲ್ಲದೆ ಮೆಟ್ರೋ, ಇನ್ನಿತರ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಆರಂಭ, ಇಲ್ಲವೇ ಸುಧಾರಣೆ ಕಾಣಲಿವೆ. ನೋಂದಣಿಯಾಗಿದ್ದರೂ ನಿರ್ವಹಣೆ ರಹಿತವಾಗಿರುವ ಬಡಾವಣೆಗಳಲ್ಲಿ ಪರಿಸ್ಥಿತಿ ಸುಧಾರಿಸಲಿದೆ. ಜಲಶುದ್ಧೀಕರಣ ವ್ಯವಸ್ಥೆ ಆರಂಭಿಸಿ, ಕಲುಷಿತ ನೀರು ಸಂಸ್ಕರಿಸುವ ಕೆಲಸ ನಡೆಯುವ ಕಾರಣ ಅಕ್ಕಪಕ್ಕದ ನದಿಗಳು ಕಲುಷಿತವಾಗುವುದು ತಪ್ಪುತ್ತದೆ. ವಿಮಾನ ನಿಲ್ದಾಣ ವಿಸ್ತರಣೆ, ರೈಲ್ವೆ ಸೌಕರ್ಯ ವಿಸ್ತರಣೆ ಸಾಧ್ಯವಾಗಲಿದೆ. ನಗರ ಮೈಸೂರು ಮಹಾರಾಜರ ನಂತರ ಮತ್ತೆ ವ್ಯವಸ್ಥಿತವಾಗಿ ಬೆಳವಣಿಗೆ ಹೊಂದಲು ಇದು ಕಾರಣವಾಗಲಿದೆ. ಆಸ್ತಿ ತೆರಿಗೆ ಏಕರೂಪವಾಗಲಿದೆ ಎಂಬ ಆಶಾಭಾವನೆ ವ್ಯಕ್ತಪಡಿಸಿದರು. ಮಾಜಿ ಮೇಯರ್ ಬಿ.ಎಲ್. ಭೈರಪ್ಪ, ಎನ್.ಡಿ. ಮಮತಾ, ಕೆ.ಎ.ಎಸ್. ಸಿದ್ದಲಿಂಗಪ್ಪ ಹಾಗೂ ಇನ್ನಿತರರು ಇದ್ದರು.




# ಅಧಿಕಾರಿ ನೌಕರರಿಗೆ ಕರ್ತವ್ಯ ಪ್ರಜ್ಞೆ ಅಗತ್ಯ: ನ್ಯಾ.ಕೆ.ಎನ್.ಫಣೀಂದ್ರ



ಚಾಮರಾಜನಗರ, ಜನರ ಆರೋಗ್ಯ, ಶಿಕ್ಷಣ ಸೇರಿದಂತೆ ವಿವಿಧ ಸವಲತ್ತುಗಳನ್ನು ತಲುಪಿಸುವ ಜವಾಬ್ದಾರಿ ಕಾರ್ಯಾಂಗದ ಮೇಲಿದ್ದು, ಇದರ ಮುಖ್ಯ ಭಾಗವಾಗಿರುವ ಸರ್ಕಾರಿ ಅಧಿಕಾರಿ ನೌಕರರಿಗೆ ಕರ್ತವ್ಯ ಪ್ರಜ್ಞೆ ಅಗತ್ಯವಾಗಿದೆ ಎಂದು ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಲೋಕಾಯುಕ್ತದಲ್ಲಿ ಬಾಕಿ ಇರುವ ದೂರು ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಕುರಿತ ಕಾರ್ಯ ಉದ್ಘಾಟನೆ ನೆರವೇರಿಸಿ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದರು. ಉತ್ತಮ ಜೀವನಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನು ಜನರಿಗೆ ತಲುಪಿಸುವ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುವ ಹೊಣೆಗಾರಿಕೆ ಇರುವ ಅಧಿಕಾರಿ ನೌಕರರು ಕಾರ್ಯಾಂಗದ ಮುಖ್ಯ ಭಾಗಿದಾರರಾಗಿದ್ದಾರೆ. ಕಟ್ಟಕಡೆಯ ವ್ಯಕ್ತಿಗೂ ಎಲ್ಲ ಸವಲತ್ತುಗಳು ದೊರೆಯಬೇಕು. ಯಾವುದೇ ಸಮಸ್ಯೆ ಬಾರದಂತೆ ಕರ್ತವ್ಯ ನಿರ್ವಹಿಸುವ ಹೆಚ್ಚಿನ ಜವಾಬ್ದಾರಿ ಕಾರ್ಯಾಂಗದ ಮೇಲಿದೆ ಎಂದರು.

ಆಡಳಿತ, ಕರ್ತವ್ಯದಲ್ಲಿ ಶ್ರದ್ದೆ ಇರಬೇಕು. ಭ್ರಷ್ಟಾಚಾರ, ಸ್ವಜನಪಕ್ಷಪಾತ, ಪ್ರಭಾವ ಬೀರುವುದು ದುರಾಡಳಿತಕ್ಕೆ ಕಾರಣವಾಗಲಿದೆ. ಕಾನೂನಿನ ಪ್ರಕಾರ ಯಾವ ಕೆಲಸಗಳನ್ನು ಮಾಡಬೇಕಿದೆಯೋ ಅದನ್ನು ಚ್ಯುತಿ ಬಾರದಂತೆ ಮಾಡಬೇಕು. ನಿಯಮಾ ವಳಿ ಉಲ್ಲಂಘನೆ ಯಾಗಬಾರದು. ಮಾಡಲೇ ಬೇಕಾದ ಕೆಲಸವನ್ನು ಯಾವುದೇ ವಿಳಂಬವಿಲ್ಲದೆ ನಿರ್ವಹಿ ಸಬೇಕು. ಇಲ್ಲವಾದಲ್ಲಿ ಲೋಕಾಯುಕ್ತ ತನ್ನ ಕೆಲಸ ವನ್ನು ಮಾಡಬೇಕಾಗುತ್ತದೆ ಎಂದು ತಿಳಿಸಿದರು.


ಸರ್ಕಾರಿ ಅಧಿಕಾರಿಗಳು, ನೌಕರರು ದೇಶದ ಅಭಿವೃದ್ಧಿಯ ಮನೋಭಾವನೆಯನ್ನು ಇಟ್ಟುಕೊಂಡು ಕರ್ತವ್ಯ ಮಾಡಬೇಕು. ಅರ್ಜಿ ವಿಲೇವಾರಿ ಯಲ್ಲಿ ಸಂದರ್ಭ, ಸಮಯೋಚಿತಕ್ಕನುಸಾರವಾಗಿ ಜವಾಬ್ದಾರಿಯನ್ನು ನಿಭಾಯಿಸಬೇಕು. ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ಸಂವಿಧಾನದ ಆಶಯಕ್ಕನುಗುಣವಾಗಿ ನಡೆದುಕೊಳ್ಳ ಬೇಕು. ಕರ್ತವ್ಯ ಲೋಪ ದುರಾಡಳಿತ ಕಂಡು ಬಂದರೆ ಸಮಸ್ಯೆ ಯಾರಿಂದ ಉಂಟಾಯಿತು ಹೇಗೆ ತಲೆದೋರಿದೆ ಎಂಬುದನ್ನು ಪರಿವೀಕ್ಷಣೆ ಮಾಡಿ ಲೋಕಾಯುಕ್ತ ತಕ್ಕ ಕ್ರಮ ವಹಿಸಲಿದೆ ಎಂದರು.

ಪ್ರತಿಯೊಬ್ಬ ವ್ಯಕ್ತಿಗೂ ಉತ್ತಮ ಗೌರವಯುತ, ಶಾಂತಿಯುತ ಬದುಕು ಬೇಕಿದೆ. ಪುರುಷ ಮಹಿಳೆ ಎಂಬ ಬೇಧವಿಲ್ಲದೆ ಎಲ್ಲರಿಗೂ ಅಗತ್ಯ ಮೂಲ ಸೌಕರ್ಯಗಳು ಲಭಿಸಬೇಕಿದೆ. ಕಾನೂನಾತ್ಮಕವಾಗಿ ಜನರ ರಕ್ಷಣೆಗೆ ಸಾಕಷ್ಟು ಕಾಯ್ದೆಗಳು ಇವೆ. ಎಲ್ಲರಿಗು ಸಮಾನ ಅವಕಾಶಗಳು ಇದ್ದು, ಜನಪರ ಕಾಳಜಿ ವಹಿಸಬೇಕಿದೆ ಎಂದು ತಿಳಿಸಿದರು.

ಇದೇ ವೇಳೆ ಲೋಕಾಯುಕ್ತ ಸಂಸ್ಥೆಯಲ್ಲಿ ಚಾಮರಾಜನಗರ ಜಿಲ್ಲೆಗೆ ಸಂಬಂಧಿಸಿದಂತೆ ಬಾಕಿ ಇರುವ ದೂರುಗಳ ಸಂಬಂಧ ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ವಿಚಾರಣೆ ನಡೆಸಿದರು. ಸಿವಿಲ್ ನ್ಯಾಯಾಧೀಶರು ಮತ್ತು ಉಪ ಲೋಕಾಯುಕ್ತರ ಆಪ್ತ ಕಾರ್ಯದರ್ಶಿಗಳಾದ ಕಿರಣ್ ಪಿ.ಎಂ. ಪಾಟೀಲ್, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ, ಲೋಕಾಯುಕ್ತ ಎಸ್.ಪಿ.ಯವರಾದ ಉದೇಶ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಇನ್ನಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಆಸ್ಪತ್ರೆ, ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಉಪ ಲೋಕಾಯುಕ್ತರ ದಿಢೀರ್ ಭೇಟಿ, ಪರಿಶೀಲನೆ

## ಆಸ್ಪತ್ರೆಯಲ್ಲಿ ಸಮರ್ಪಕವಾಗಿ ಮೂಲಸೌಕರ್ಯ ಕಲ್ಪಿಸಲು ಸೂಚನೆ



ಚಾಮರಾಜನಗರ, ಕರ್ನಾಟಕ ರಾಜ್ಯ ಉಪಲೋಕಾಯುಕ್ತರಾದ ನ್ಯಾಯಮೂರ್ತಿಗಳಾದ ಕೆ.ಎನ್ ಫಣೀಂದ್ರ ಅವರು ಪಟ್ಟಣದಲ್ಲಿರುವ ತಾಯಿ ಮಕ್ಕಳ ಆಸ್ಪತ್ರೆ ಹಾಗೂ ಹೊರವಲಯದಲ್ಲಿರುವ ತ್ಯಾಜ್ಯ ವಿಲೇವಾರಿ ಘಟಕಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ನಗರದ ಬಿ. ರಾಚಯ್ಯ ಜೋಡಿರಸ್ತೆಯಲ್ಲಿರುವ ತುರ್ತು ನಿಗಾ ಘಟಕಕ್ಕೆ ಭೇಟಿ ನೀಡಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು, ಆರೋಗ್ಯ ಸಿಬ್ಬಂದಿ ಕುರಿತು ಮಾಹಿತಿ ಪಡೆದರು. ತುರ್ತು ಸಂದರ್ಭಗಳಲ್ಲಿ ಬರುವ ಸಾರ್ವಜನಿಕರಿಗೆ ಹೇಗೆ ಸ್ಪಂದಿಸಲಾಗುತ್ತಿದೆ. ಯಾವ ಚಿಕಿತ್ಸಾ ಸೌಲಭ್ಯಗಳು ನೀಡಲಾಗುತ್ತಿದೆ ಎಂಬ ಬಗ್ಗೆ ವಿವರ ಪಡೆದರು.

ಬಳಿಕ ಆಸ್ಪತ್ರೆ ಆವರಣದಲ್ಲಿ ಇದ್ದ ಸಾರ್ವಜನಿಕರೊಂದಿಗೆ ಮಾತನಾಡಿದ ಉಪಲೋಕಾಯುಕ್ತರು ಆಸ್ಪತ್ರೆಯಲ್ಲಿ ಯಾವ ಸಮಸ್ಯೆಗಳು ಇವೆ? ವೈದ್ಯರು ಹೊರಗಡೆಯಿಂದ ಔಷಧಿ ಖರೀದಿಸಲು ಚೀಟಿ ಬರೆಯುತ್ತಿದ್ದಾರೆಯೇ? ವೈದ್ಯರು ಸರಿಯಾದ ಸಮಯಕ್ಕೆ ಲಭ್ಯವಿದ್ದು, ಸೇವೆ ನೀಡುತ್ತಿದ್ದಾರೆಯೇ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಸಾರ್ವಜನಿಕರು ವೈದ್ಯರ ಸೇವೆ ಚಿಕಿತ್ಸೆ ಸೇವೆ ಉತ್ತಮವಾಗಿದೆ. ಆದರೆ ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಇಲ್ಲ. ರೋಗಿಗಳಿಗೆ ಬಿಸಿ ನೀರು ನೀಡಲಾಗುತ್ತಿಲ್ಲ. ಶೌಚಾಲಯಗಳು, ಸ್ನಾನಗೃಹಗಳಲ್ಲಿ ಶುಚಿತ್ವ ಇಲ್ಲ, ರೋಗಿಗಳನ್ನು ನೋಡಿಕೊಳ್ಳಲು ಬರುವವರಿಗೆ ಕುಳಿತುಕೊಳ್ಳಲು ಸೂಕ್ತ ಸ್ಥಳಾವಕಾಶ ವಿಲ್ಲವೆಂದು ಹೇಳಿದರು. ಈ ಎಲ್ಲಾ ಅಹವಾಲುಗಳನ್ನು ಆಲಿಸಿದ ಉಪಲೋಕಾಯುಕ್ತರು ಪರಿಶೀಲಿಸಿ ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗುವುದು ಎಂದರು.

ಆಸ್ಪತ್ರೆ ಹೊರ ಆವರಣದಿಂದ ರೋಗಿಗಳಿಗೆ ವಿತರಿಸಲು ಸಾಗಿಸಲಾಗುತ್ತಿದ್ದ ಬೆಳಗಿನ ಉಪಹಾರವನ್ನು ಉಪಲೋಕಾಯುಕ್ತರು ಪರಿಶೀಲಿಸಿದರು. ಪ್ರತಿದಿನ ಸರಿಯಾದ ಸಮಯಕ್ಕೆ ಊಟ ಉಪಹಾರ ನೀಡಲಾಗುತ್ತಿದೆಯೇ ಎಂಬ ಬಗ್ಗೆ ವಿವರ ಪಡೆದರು.

ಬಳಿಕ ತಾಯಿ ಮಕ್ಕಳ ಆಸ್ಪತ್ರೆಗೆ ತೆರಳಿ ವಾರ್ಡ್‌ಗಳಲ್ಲಿ ದಾಖಲಾಗಿದ್ದ ಮಹಿಳೆಯರೊಂದಿಗೆ ಮಾತನಾಡಿ ಆಸ್ಪತ್ರೆಯಲ್ಲಿ ನಿಮಗೆ ಚಿಕಿತ್ಸೆ ಸೌಲಭ್ಯಗಳಿಗೆ ಕೊರತೆ ಇದೆಯೇ? ಎಷ್ಟು ದಿನಕೊಮ್ಮೆ ಹಾಸಿಗೆ ಮೇಲಿನ ಹೊದಿಕೆಗಳನ್ನು ಬದಲಾಯಿಸಲಾಗುತ್ತಿದೆ? ಇಲ್ಲಿ ನೀಡಲಾಗುತ್ತಿರುವ ಊಟ ಉಪಹಾರದ ಗುಣಮಟ್ಟ ಹೇಗಿದೆ ಎಂಬುದನ್ನು ಕೇಳಿ ಉತ್ತರ ಪಡೆದುಕೊಂಡರು.

ಶೌಚಾಲಯಗಳನ್ನು ವೀಕ್ಷಿಸಿದ ವೇಳೆ ಶುಚಿತ್ವ ಇಲ್ಲದಿರುವುದನ್ನು ಕಂಡು ಆಸ್ಪತ್ರೆ ವೈದ್ಯಾಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಬಿಸಿ ನೀರು ಲಭ್ಯವಿಲ್ಲದಿರುವ ಬಗ್ಗೆ ಬಂದ ದೂರುಗಳ ಸಂಬಂಧ ಅಧಿಕಾರಿಗಳನ್ನು ಪ್ರಶ್ನಿಸಿದರು. ವೈದ್ಯರ ಸೇವೆ ಬಗ್ಗೆ ಉತ್ತಮ ಅಭಿಪ್ರಾಯವಿದೆ. ಆದರೆ ಮೂಲ ಸೌಕರ್ಯಗಳು ಸರಿಯಾಗಿಲ್ಲ. ಕೊರತೆಯಿರುವ ಸೌಲಭ್ಯಗಳನ್ನು ಒದಗಿಸಲು ಸೂಕ್ತ ಅನುದಾನದ ಪಡೆದುಕೊಂಡು ಶೀಘ್ರವೇ ಕ್ರಮವಹಿಸಬೇಕು. ಶುಚಿತ್ವ, ಇನ್ನಿತರ ದಿನನಿತ್ಯದ ಕೆಲಸಗಳನ್ನು ಸಮರ್ಪಕವಾಗಿ ಉಸ್ತುವಾರಿ ಮಾಡಬೇಕು. ಸಮಸ್ಯೆಗಳಿಗೆ ಪರಿಹಾರ ಕೂಡಲೇ ಸಿಗಬೇಕು ಎಂದು ಲೋಕಾಯುಕ್ತರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇದೇ ವೇಳೆ ಜಿಲ್ಲಾಧಿಕಾರಿಯವರಾದ ಶಿಲ್ಪಾ ನಾಗ್ ಅವರು ಆಸ್ಪತ್ರೆಗೆ ತುರ್ತಾಗಿ ಒದಗಿಸಬೇಕಿರುವ ಸೌಲಭ್ಯಗಳ ಬಗ್ಗೆ ಆದ್ಯ ಗಮನ ಹರಿಸಲಾಗುವುದು. ಸಣ್ಣ ಪುಟ್ಟ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಲಾಗುವುದು ಎಂದರು.

ಜಿಲ್ಲಾ ಸರ್ಜನ್ ಕಚೇರಿಗೆ ತೆರಳಿ ವೈದ್ಯರು, ಆಸ್ಪತ್ರೆಯ ಸಿಬ್ಬಂದಿ ಹಾಜರಾತಿ ಪರಿಶೀಲಿಸಿದರು. ಈ ವೇಳೆ ಕೆಲವರು ಸಹಿ ಮಾಡದಿರುವುದನ್ನು ಗಮನಿಸಿ ಪ್ರಶ್ನಿಸಿದಾಗ ಹಲವು ವೈದ್ಯರು ಜಿಲ್ಲಾಸ್ಪತ್ರೆಯಲ್ಲಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬ ಉತ್ತರ ಬಂದಿತು. ಈ ಬಗ್ಗೆ ಹಾಜರಾತಿಯಲ್ಲಿ ಸ್ಪಷ್ಟವಾಗಿ ನಮೂದು ಮಾಡಬೇಕು. ಕ್ಯಾಶ್ ಡಿಕ್ಲರೇಷನ್, ಚಲನ ವಹಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು ಎಂದು ಲೋಕಾಯುಕ್ತರು ನಿರ್ದೇಶನ ನೀಡಿದರು. ಆಸ್ಪತ್ರೆ ಭೇಟಿಗೂ ಮೊದಲು ನಗರಸಭೆಗೆ ಸೇರಿದ ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಭೇಟಿ ನೀಡಿ ಅಲ್ಲಿ ಕೈಗೊಂಡಿರುವ ಪ್ರಕ್ರಿಯೆಯನ್ನು ವೀಕ್ಷಿಸಿದರು. ಹಸಿಕಸ, ಒಣಕಸ ವನ್ನು ಪ್ರತ್ಯೇಕವಾಗಿ ಬೇರ್ಪಡಿಸಿ ಸೂಕ್ತ ರೀತಿಯಲ್ಲಿ ವಿಲೇವಾರಿಯಾಗಬೇಕು. ತ್ಯಾಜ್ಯ ಸಂಸ್ಕರಣೆ ವೈಜ್ಞಾನಿಕವಾಗಿ ಆಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಿವಿಲ್ ನ್ಯಾಯಾಧೀಶರು ಮತ್ತು ಉಪಲೋಕಾಯುಕ್ತರ ಆಪ್ತ ಕಾರ್ಯದರ್ಶಿಗಳಾದ ಕಿರಣ್ ಪಿ.ಎಂ. ಪಾಟೀಲ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ, ಲೋಕಾಯುಕ್ತ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ಜಿಲ್ಲಾ ಸರ್ಜನ್ ಡಾ. ಚಿನ್ನಬೋವಿ, ಸಿಮ್ಸ್ ನ ಪ್ರಭಾರ ಡೀನ್ ಡಾ. ಕೆ.ಟಿ. ಅಜಯ್, ಜಿಲ್ಲಾ ಪರಿಸರ ಅಧಿಕಾರಿ ಕೆ.ಎಲ್. ಸವಿತಾ, ನಗರಸಭೆಯ ಪ್ರಭಾರ ಆಯುಕ್ತರಾದ ಪ್ರಕಾಶ್, ಪರಿಸರ ಎಂಜಿನಿಯರ್ ರೂಪಾ, ಇನ್ನಿತರರು ಇದೇ ವೇಳೆ ಹಾಜರಿದ್ದರು.

## ಕನ್ನಡಿಗ ಪ್ರಶಸ್ತಿ ಪ್ರದಾನ ಸಮಾರಂಭ



ಚಾಮರಾಜನಗರ, ಅಭ್ಯಾಸಿ ಕನ್ನಡ ಹಬ್ಬ ಮತ್ತು ಅಭ್ಯಾಸಿ ಶ್ರೇಷ್ಠ ಕನ್ನಡಿಗ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಭ್ಯಾಸಿ ಟ್ರಸ್ಟ್ ಅಧ್ಯಕ್ಷ ಕಿರಣ್ ಗಿರ್ಗಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ನ.30 ರಂದು ಸಂಜೆ 4 ಗಂಟೆಗೆ ನಗರದ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸಮಾರಂಭ ನಡೆಯಲಿದ್ದು, ಸಮಾರಂಭವನ್ನು ರಂಗಕರ್ಮಿ ಸಿ.ಬಸವಲಿಂಗಯ್ಯ ಉದ್ಘಾಟನೆ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಂಸ್ಕೃತಿ ಚಿಂತಕ ಮಹಾದೇವ ಶಂಕನಪುರ ಅವರು ಅಧ್ಯಕ್ಷತೆ ವಹಿಸಲಿದ್ದು, ಕವಿ, ಕಾದಂಬರಿಕಾರ ಆಲೂರು ದೊಡ್ಡನಿಂಗಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜು, ಸಮಾಜ ಸೇವಕ ಶ್ರೀನಿಧಿ ಕುದರ್, ಕವಿ ಶಂಕರ್ ಅಂಕನಶೆಟ್ಟಿಪುರ, ಸಿಸ್ಟರ್ ಮರಿಯಾ ಜೋಸ್, ಚಿತ್ರ ಕಲಾವಿದ ಮಧುಸೂದನ್ ಹೊಸೂರು, ಬಿಎಸ್‌ವಿ ಪ್ರತಿಷ್ಠಾನದ ವೆಂಕಟನಾಗಪ್ಪಶೆಟ್ಟಿ, ಗಾಯಕ ಉಮತ್ತೂರು ಚಂದ್ರು, ಭಾಗವಹಿಸಲಿದ್ದಾರೆ ಎಂದರು.

ಅಭ್ಯಾಸಿ ಟ್ರಸ್ಟ್ ಕಲಾವಿದರು ಹಾಗೂ ವಿದ್ಯಾರ್ಥಿಗಳಿಂದ ಕನ್ನಡ ಗೀತಗಾಯನ, ಕೀಬೋರ್ಡ್ ವಾದ್ಯಸಂಗೀತ, ಡಾ.ಎಚ್.ಎಸ್.ಶಿವಪ್ರಕಾಶ್ ಅವರ ಪ್ರಸಿದ್ಧ ನಾಟಕ ಮಾದಾರಿ ಮಾದಯ್ಯ ಪ್ರದರ್ಶನವಿರುತ್ತದೆ. ಹಿರಿಯ ಕುಂಚ ಕಲಾವಿದ ಗೌಸ್ ಅವರ ಚಿತ್ರಕಲಾ ಪ್ರದರ್ಶನವಿದೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದ್ದು ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

## ಡಿ.30ರಿಂದ ದತ್ತಾತ್ರೇಯ ಮಹೋತ್ಸವ

ಮೈಸೂರು: ನಗರದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಅವಧೂತ ದತ್ತ ಪೀಠದಲ್ಲಿ 2025ರ ಸಾಲಿನ ದತ್ತಾತ್ರೇಯ ಜಯಂತಿ ಮಹೋತ್ಸವ ನ.30 ರಿಂದ ಡಿ.8ರವರೆಗೆ ವಿಜೃಂಭಣೆಯಿಂದ ಜರುಗಲಿದೆ.


ನ.30ರ ಭಾನುವಾರ ಬೆ.10ಗಂಟೆಗೆ ಅಖಿಲ ಭಾರತ ಜ್ಞಾನ ಬೋಧ ಸಭಾ ಸಮ್ಮೇಳನ ನಡೆಯಲಿದೆ. ಡಿ.1ರ ಸೋಮವಾರ ಶ್ರೀ ಗೀತಾ ಜಯಂತಿ ಅಂಗವಾಗಿ ಬೆ.10 ಗಂಟೆಗೆ ನಾದ ಮಂಟಪದಲ್ಲಿ ಸಂಪೂರ್ಣ ಭಗವದ್ಗೀತಾ ಪಾರಾಯಣ ಹಮ್ಮಿಕೊಳ್ಳಲಾಗಿದೆ. ಮ.3 ಗಂಟೆಗೆ ಭಗವದ್ಗೀತೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಪದಕ ವಿತರಣಾ ಸಮಾರಂಭ ನಡೆಯಲಿದೆ. ಡಿ.2ರ ಮಂಗಳವಾರ ಬೆ.9ಕ್ಕೆ ಶ್ರೀ ಕಾಲಾಗ್ನಿ ಶಮನ ದತ್ತಾತ್ರೇಯ ಸ್ವಾಮಿಗೆ ಮಂಟಪೋತ್ಸವ ಹಾಗೂ ಪಂಚಾಮೃತ ಅಭಿಷೇಕ, ಬೆ.10ಕ್ಕೆ ಶ್ರೀ ಚಕ್ರ ಪೂಜೆ ಹಾಗೂ ದತ್ತಾತ್ರೇಯ ಹೋಮದ ಪೂರ್ಣಾಹುತಿ ನೆರವೇರಲಿದೆ. ಸಂ.6 ಗಂಟೆಗೆ ನಾದ ಮಂಟಪದಲ್ಲಿ ದಿವ್ಯ ನಾಮ ಸಂಕೀರ್ತನೆ ಇರಲಿದೆ.

ಡಿ.3ರ ಬುಧವಾರ ಶ್ರೀ ಹನುಮಾನ್ ಜಯಂತಿ ಅಂಗವಾಗಿ ಬೆ.7 ಗಂಟೆಗೆ ಕಾರ್ಯ ಸಿದ್ಧಿ ಹನುಮಾನ್ ಸ್ವಾಮಿಗೆ 13ನೇ ವಾರ್ಷಿಕ ಅಭಿಷೇಕ, ಬೆ.11 ಗಂಟೆಗೆ ಹನುಮದ್ ವ್ರತ ಪೂಜೆ, ಸಂ.5 ಗಂಟೆಗೆ ರಥೋತ್ಸವ, ಸಂ.6 ಗಂಟೆಗೆ ಸನಾತನ ದತ್ತ ಬಂಧು ಮಹೋತ್ಸವ, ರಾತ್ರಿ 8 ಗಂಟೆಗೆ ಹನುಮಾನ್ ದೇವಾಲಯದಲ್ಲಿ ಲಕ್ಷ ದೀಪೋತ್ಸವ ಜರುಗಲಿದೆ. ಡಿ.4ರ ಗುರುವಾರ ಹುಣ್ಣಿಮೆ ಪ್ರಯುಕ್ತ ಉತ್ಸವದ ಪ್ರಮುಖ ದಿನವಾಗಿದ್ದು, ಬೆ.9 ಗಂಟೆಗೆ



ಶ್ರೀ ಕಾಲಾಗ್ನಿ ಶಮನ ದತ್ತಾತ್ರೇಯ ಸ್ವಾಮಿಗೆ ತೈಲಾಭಿಷೇಕ, ಬೆ.10 ಗಂಟೆಗೆ ಸಹಸ್ರ ಕಳಶ ತೈಲಾಭಿಷೇಕ ನೆರವೇರಲಿದೆ. ಸಂ.6 ಗಂಟೆಗೆ ಸಪ್ತರ್ಷಿ ಸರೋವರದಲ್ಲಿ ಶ್ರೀ ದತ್ತಾತ್ರೇಯ ಸ್ವಾಮಿಯ ಪಲ್ಲಕ್ಕಿ ಉತ್ಸವ ಮತ್ತು ತೆಪ್ಪೋತ್ಸವ ನಡೆಯಲಿದ್ದು, ರಾತ್ರಿ 8 ಗಂಟೆಗೆ ಕಾಕಡಾರತಿ ಹಾಗೂ ಡೋಲೋತ್ಸವದೊಂದಿಗೆ ಸಂಪನ್ನಗೊಳ್ಳಲಿದೆ ಡಿ.5ರ ಶುಕ್ರವಾರ ಬೆ.9 ಗಂಟೆಗೆ ಮಂತ್ರ ಉಪದೇಶ ಕಾರ್ಯಕ್ರವ ುವಿರುತ್ತದೆ. ಡಿ.6ರ ಶನಿವಾರ ಶ್ರೀ ರಾಜರಾಜೇಶ್ವರಿ ದೇವಾಲಯದ 2ನೇ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತದೆ. ಡಿ.6, 7 ಮತ್ತು 8 ರಂದು ವಾರ್ಷಿಕ ಶಾಸ್ತ್ರ ಸಭೆ ನಡೆಯಲಿದೆ ಎಂದು ತಿಳಿಸಿದೆ.

## ಶ್ರೀ ವಾಸವಿಗೆ ಮುತ್ತಿನ ವಜ್ರಾಂಗಿ ಸಮರ್ಪಣೆ




ರಾಮನಗರ: ನಗರದ ಶ್ರೀ ಕನ್ನಿಕಾಪರಮೇಶ್ವರಿ ಅಮ್ಮನ ವರಿಗೆ ಆಕೆಯ ಉಪಾಸಕರ ಗುಂಪೊಂದು ಬಗೆಬಗೆಯ ಮುತ್ತುಗಳಿಂದ ನಿರ್ಮಿಸಿರುವ ವಜ್ರಾಂಗಿಯನ್ನು ಅರ್ಪಿಸಿದ್ದಾರೆ.

ನೂರಾರು ಮುತ್ತುಗಳು, ಆಭರಣಗಳಲ್ಲಿ ಬಳಸುವ ಹೊಳಪಿನ ಕಲ್ಲುಗಳು, ಅಮೇರಿಕನ್ ಡೈಮಂಡ್‌ಗಳನ್ನು ಒಳಗೊಂಡ ಈ ವಜ್ರಾಂಗಿಯನ್ನು ವಿಶೇಷ ಸಂದರ್ಭ ಗಳಲ್ಲಿ ಶ್ರೀಮಾತೆಯ ಮೂರ್ತಿಗೆ ತೊಡಿಸಲಾಗುತ್ತದೆ ಎಂದು ದೇವಾಲಯ ನಿರ್ವಹಣೆಯ ಮೂಲಗಳು ತಿಳಿಸಿವೆ. ಫೈಬರ್ ಹಾಳೆಯ ಮೇಲೆ ಮುತ್ತುಗಳು, ಹೊಳ ಪಿನ ಕಲ್ಲುಗಳನ್ನು ಚನ್ನರಾಯಪಟ್ಟಣದ ಅಕ್ಕಸಾಲಿಗ ರುದ್ರೇಶ್ ಕೂರಿಸಿ ವಜ್ರಾಂಗಿಯನ್ನು ನಿರ್ಮಿಸಿದ್ದಾರೆ. ಇದು ಅತ್ಯಂತ ಸೂಕ್ಷ್ಮ ಕೆಲಸ ಮತ್ತು ಸವಾಲಿನ ಕೆಲಸವಾಗಿತ್ತು ಎಂದು ಅವರು ತಿಳಿಸಿದ್ದಾರೆ. ದೇವತಾ ಮೂರ್ತಿಗಳ ಅಲಂಕಾರದ ನೈಪುಣ್ಯತೆ ಸಾಧಿಸಿರುವ ಬೆಂಗಳೂರಿನ ರಾಧಾಕೃಷ್ಣ ಶಾಸ್ತ್ರಿಯವರು ಶ್ರೀ ಕನ್ನಿಕಾ ಪರಮೇಶ್ವರಿ ಅಮ್ಮನವರ ಮೂರ್ತಿಯ ಅಳತೆ ತೆಗೆದು ಕೊಂಡು ಅಕ್ಕಸಾಲಿಗ ರುದ್ರೇಶ್ ಅವರಿಗೆ ಮಾರ್ಗದ ರ್ಶನ ನೀಡಿದ್ದಾರೆ. ಇವರಿಬ್ಬರ ಕೌಶಲದಿಂದಾಗಿ ವಜ್ರಾಂಗಿ ಸುಂದರವಾಗಿ ಮೂಡಿ ಬಂದಿದೆ ಎಂಬುದು ಭಕ್ತರು ಪ್ರತಿಕ್ರಯಿಸಿದ್ದಾರೆ. ವ್ಯಾಪಾರಸ್ಥರಾದ ಎ.ನಾಗರಾಜ್, ಪಿ.ಜಿ.ಮೋಹನ್, ಎಂ.ಬಿ.ನವೀನ್ ಕುಮಾರ್, ಎ.ಎನ್.ವಿ.ಭಾನು, ಕುಬೇರ್ ಗುಪ್ತ ಮತ್ತು ಕೆ.ವಿ.ಉಮೇಶ್ ಮತ್ತು ಅವರ ಕುಟುಂಬ ವರ್ಗ ಈ ಮುತ್ತಿನ ವಜ್ರಾಂಗಿಯನ್ನು ಶ್ರೀಮಾತೆಗೆ ಸಮರ್ಪಿಸಿದ್ದಾರೆ. ಶುಕ್ರವಾರ ವಜ್ರಾಂಗಿಯನ್ನು ಶ್ರೀಮಾತೆಗೆ ತೊಡಿಸಲಾ ಗಿತ್ತು. ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು.

ಶಾಸಕ ಹೆಚ್ ಎಂ ಗಣೇಶ್ ಪ್ರಸಾದ್ ಭರವಸೆ


## ಶಕ್ತಿಮೀರಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವೆ



ಗುಂಡ್ಲುಪೇಟೆ:ಕಳೆದ ಎರಡುವರೆ ವರ್ಷಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಹಲವು ಕೆಲಸಗಳನ್ನು ಮಾಡಿದ್ದು ಮುಂದಿನ ದಿನಗಳಲ್ಲೂ ಶಕ್ತಿಮೀರಿ ನನ್ನ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಶಾಸಕರಾದ ಹೆಚ್ ಎಂ ಗಣೇಶ್ ಪ್ರಸಾದ್ ರವರು ಅಭಿಪ್ರಾಯಪಟ್ಟರು. ಇಂದು ತಾಲ್ಲೋಕಿನ ಅಗತಗೌಡನಹಳ್ಳಿ ಮತ್ತು ಮಳವಳ್ಳಿ ಗ್ರಾಮಗಳ ಹಲವು ಅಭಿವೃದ್ಧಿ ಕಾರ್ಯಗಳಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು ಮಳವಳ್ಳಿ ಗ್ರಾಮಕ್ಕೆ 25 ಲಕ್ಷದ ಮತ್ತು ಅಗತಗೌಡನಹಳ್ಳಿಯ 41 ಲಕ್ಷ ರೂ ಗಳ ಎಸ್ ಸಿ ಪಿ, ಟಿ ಎಸ್ ಪಿ ಯೋಜನೆಯಲ್ಲಿ ಸಿ ಸಿ ರಸ್ತೆ ಗೆ ಗುದ್ದಲಿ ಪೂಜೆ ಮಾಡಿ ಮಾತನಾಡುತ್ತಾ ಗುಂಡ್ಲುಪೇಟೆ ಕ್ಷೇತ್ರದ ಬಗ್ಗೆ ನಮ್ಮ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ವಿಶೇಷ ಕಾಳಜಿ ಹೊಂದಿದ್ದು ಈಗಾಗಲೇ 85 ಕೋಟಿ ಅನುದಾನ ನೀಡಿದ್ದಾರೆ ಇದರಲ್ಲಿಯ ಐವತ್ತು ಕೋಟಿ ರೂಗಳು ಅನುಮೋದನೆಯಾಗಿದ್ದು ಈ ಅನುದಾನವನ್ನು ದೇವಸ್ಥಾನಗಳು, ಮಠಗಳು, ಸಮುದಾಯಭವನಗಳು ಮತ್ತು ಪುರಸಭೆ, ಮತ್ತು ಸಿ ಸಿ ರಸ್ತೆಗಳ ಅಭಿವೃದ್ಧಿಗೆ ಹಾಕಲಾಗಿದ್ದು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನವನ್ನು ನಮ್ಮ ಸರ್ಕಾರ ನೀಡಲಿದ್ದು ತಾಲ್ಲೋಕಿನ ಉಳಿದ ಗ್ರಾಮಗಳಿಗೂ ಕೆಲಸ ಹಾಕುತ್ತೇನೆ. ದಿನೇ ದಿನೇ ಹಲವು ಗ್ರಾಮಗಳಿಂದ ಅಭಿವೃದ್ಧಿಗೆ ಬೇಡಿಕೆ ಬರುತ್ತಿದ್ದ ಖಂಡಿತವಾಗಿಯೂ ಮುಂದೆ ಹಂತ ಹಂತವಾಗಿ ಎಲ್ಲಾ ಗ್ರಾಮಗಳಿಗೂ ಈ ಅಭಿವೃದ್ಧಿ ಕೆಲಸಗಳನ್ನು ವಿಸ್ತರಿಸಲಾಗುವುದು. ವಿರೋಧ ಪಕ್ಷಗಳು ವಿನಾಕಾರಣ ಸುಳ್ಳು ಹೇಳಿ ಅಪಪ್ರಚಾರ ಮಾಡುತ್ತಿವೆ ಇದರ ಬಗ್ಗೆ ಜನರು ತಲೆ ಕೆಡಿಸಿಕೊಳ್ಳುಬಾರದು ನಾನೂ ಕೂಡ ಇಂತಹ ಆರೋಪಗಳಿಗೆ ಉತ್ತರ ನೀಡುವುದಿಲ್ಲ. ಜನರು ಯಾವುದೇ ಅಪಪ್ರಚಾರಗಳಿಗೆ ಕಿವಿಗೊಡದೇ ಮುಂದಿನ ದಿನಗಳಲ್ಲಿ ಎಲ್ಲಾ ಗ್ರಾಮಗಳಿಗೂ ಅನುದಾನ ತಂದು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಸದಸ್ಯ ರಾಜೇಶ್, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕಬ್ಬಹಳ್ಳಿ ಮಹೇಶ್, ಎಪಿಎಂಸಿ ಅಧ್ಯಕ್ಷ ಆರ್ ಎಸ್ ನಾಗರಾಜು, ಗೌಡಿಕೆ ರೇವಣ್ಣ, ಗ್ರಾಮ ಪಂಚಾಯತಿ ಸದಸ್ಯ ಮಣಿಯಮ್ಮ, ಸುರೇಶ್, ಯಜಮಾನ ಸ್ವಾಮಿನಾಥ, ಹನುಮಯ್ಯ, ಸಂತೋಷ, ಹಿರಿಯ ಮುಖಂಡ ಸಿದ್ದಪ್ಪ , ಪುನೀತ್, ಹಾಜರಿದ್ದರು.

# ಫೋಟೋ ಆಲ್ಬಮ್ ಹೇಳಿದ ಕಥೆ

ನನ್ನೆ ಯಾವುದೋ ಕಾಗದ ಪತ್ರಗಳನ್ನು ಹುಡುಕುತ್ತಿದ್ದಾಗ, ಕೈಗೆ ಸಿಕ್ಕಿದ್ದು ನನ್ನ ಮದುವೆಯ ಫೋಟೋ ಆಲ್ಬಮ್. 35 ವರ್ಷದ ಹಿಂದಿನ ಮದುವೆಯ ದಿನವನ್ನು ಪುನಃ ಕಣ್ಣ ಮುಂದೆ ತಂದಿತು ಆ ಹಳೆಯ ಫೋಟೋಗಳು , ಮದುವೆ ಮಂಟಪದಲ್ಲಿದ್ದ ಅವರ ನಗುಮುಖಗಳು, ಆ ನವಿರಾದ ಕ್ಷಣಗಳು, ಇವೆಲ್ಲ 35 ವರ್ಷದ ನಮ್ಮ ಜೀವನದ ದೀರ್ಘ ಪ್ರಯಾಣಕ್ಕೆ ಮೌನ ಸಾಕ್ಷಿಗಳಾಗಿ ಕಾಣಿಸಿದರು.



ಆ ಫೋಟೋಗಳನ್ನು ತಿರುಗಿಸುತ್ತಿದ್ದಂತೆ ಒಂದು ಕಹಿ ಮಧುರ ಅರಿವು ನನ್ನ ಮನಸ್ಸನ್ನು ತಟ್ಟಿತು. ನಮ್ಮ ಮದುವೆಯಲ್ಲಿ ಇದ್ದ ಸಂಬಂಧಗಳಲ್ಲಿ 90% ಇಂದು ಜೀವಂತರಾಗಿಲ್ಲ. ಅಜ್ಜ, ಅಜ್ಜಿ, ಅಮ್ಮ, ಅಪ್ಪ, ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ಅತ್ತೆ, ಮಾವಂದಿರು , ಸ್ನೇಹಿತರು ಎಷ್ಟೋ ಜನ ತಮ್ಮ ಜೀವನ ಯಾತ್ರೆಯನ್ನು ಮುಗಿಸಿದ್ದಾರೆ . ಅವರ ಮುಖಗಳು , ನಗು ಇಂದು ಫೋಟೋದಲ್ಲಿ ಕೇವಲ ನೆನಪು ಮಾತ್ರವಾಗಿ ಉಳಿದಿದೆ . ಒಬ್ಬೊಬ್ಬರ ಅನುಪಸ್ಥಿತಿ ನನ್ನ ಕಣ್ಣ ಮುಂದೆ ಬಂದು ನನ್ನ ಮನಸನ್ನು ಕೆಲ ಕಾಲ ನಿಶ್ಯಬ್ದಗೊಳಿಸಿತು. 35 ವರ್ಷ ಎನ್ನುವುದು ಕೇವಲ ಕಾಲದ ಮಾಪನ ಮಾತ್ರವಲ್ಲ; ಅದು ಮನುಷ್ಯನು ಕಳೆದುಕೊಳ್ಳುವ ಪ್ರೀತಿ ಪಾತ್ರರ ಗಣತಿಯೂ ಹೌದು ಎಂಬ ಬಗೆಯ ಅರಿವು ಮನಬಂದಿತು.

ಒಂದು ಬಗೆಯ ವಿಷಾದದೊಂದಿಗೆ , ಮತ್ತೊಂದು ಆಲ್ಬಮ್ ತೆಗೆದಾಗ ಕಂಡಿದ್ದು ಮತ್ತೊಂದು ಜೀವನದ ಮಜಲು . ಆಲ್ಬಮ್‌ನ ಪುಟಗಳನ್ನು ತಿರುವಿ ಹಾಕುತ್ತಾ ಹೋದಾಗ , ಕಂಡಿದ್ದು ನನ್ನ ಮದುವೆಯ ಆಲ್ಬಮ್ ನಲ್ಲಿ ಇಲ್ಲದ ಮುಖಗಳು , ಇವೆಲ್ಲ ನಂತರದ ಪೀಳಿಗೆಯ ಹೊಸ ಮುಖಗಳು, ಹೊಸ ನಗು, ಹೊಸ ಬಂಧಗಳು ಕಂಗೊಳಿಸತೊಡಗಿದವು. ಮುದ್ದಾಗಿ ನಗುತ್ತಿರುವ ಮಕ್ಕಳು, ಅವರೊಂದಿಗೆ ಬೆಳೆದ ಹೊಸ ಸಂಬಂಧಗಳು, ಜೀವನದ ಸ್ಪಂದನವನ್ನು ಮತ್ತೊಮ್ಮೆ ತೋರಿಸಿದ ಹೊಸ ಸ್ನೇಹಿತರು. ಇವೆಲ್ಲವೂ ಕಾಲದ ಪ್ರವಾಹದಲ್ಲಿ ಕಳೆದು ಹೋದ ಬಾಂಧವ್ಯಗಳಿಗೆ ಪರ್ಯಾಯವಾಗಿ , ಹೊಸ ಚಿಗುರೊಡೆದ ಉಳಿದ ಜೀವನದ ಮಧುರ ರೂಪಗಳಾಗಿ ನಗುತ್ತಿದ್ದವು .

ಆಗ ನನಗನಿಸಿದ್ದು , ಒಂದೆಡೆ ಹಳೆಯ ಪೀಳಿಗೆಯವರು ದೂರವಾದ ನೋವು; ಮತ್ತೊಂದೆಡೆ ಹೊಸ ಪೀಳಿಗೆ ಜೀವನಕ್ಕೆ ತಂದ ಸಂತೋಷಇವೆರಡನ್ನು ಕೂಡಿಕೊಂಡಾಗ ಬದುಕಿನ ನಿಜಸ್ವರೂಪ ಸ್ಪಷ್ಟವಾಗಿ ಗೋಚರಿಸಿತು. ಬದುಕು ಎಂದರೆ ನಿಂತ ನೀರಲ್ಲ. ಅದು ಹರಿಯುತ್ತಲೇ ಇರುವ ಜೀವ ನದಿ. ಹಳೆಯ ಎಲೆ ಉದುರಬೇಕು, ಹೊಸ ಚಿಗುರಿಗೆ ಜಾಗ ಕೊಡಬೇಕು. ಒಂದು ಅಧ್ಯಾಯ ಮುಗಿಯಬೇಕು, ಮತ್ತೊಂದು ಆರಂಭಗೊಳ್ಳಬೇಕುಇದೇ ಬದುಕಿನ ಸಹಜ ನಿಯಮ.

35 ವರ್ಷಗಳ ಹಿಂದೆ ಮದುವೆ ಮಂಟಪದಲ್ಲಿ ನಿಂತಿದ್ದ ನಮ್ಮ ಎರಡು ಜೀವಗಳು, ಇಂದಿಗೆ ಅನುಭವ, ಜವಾಬ್ದಾರಿ, ಕಷ್ಟ , ನಷ್ಟ, ಸಂತೋಷ, ದುಃಖ ಎಲ್ಲವನ್ನು ದಾಟಿಕೊಂಡು ಮತ್ತಷ್ಟು ಗಟ್ಟಿಯಾಗಿವೆ.

35 ವರ್ಷಗಳ ಹಿಂದೆ ಯುವಕರಾಗಿದ್ದ ನಾವು ಜೀವನ ಸಂಧ್ಯಾಕಾಲಕ್ಕೆ ಮೆಲ್ಲನೆ ಜಾರುತ್ತಿರುವುದನ್ನು ಆಲ್ಬಂನ ಫೋಟೋಗಳು ತೋರಿಸಿದವು .

ಆಲ್ಬಮ್ ಗಳು ಮತ್ತೆ ಹೇಳುತ್ತಿರುವುದು ಒಂದೇ ಮಾತು: ಕಾಲ ಬದಲಾಗುತ್ತಾ ಹೋಗುತ್ತದೆ; ಆದರೆ ನೆನಪುಗಳು ಮನುಷ್ಯನನ್ನು ಬದಲಿಸುತಿರುತ್ತವೆ. ಒಮ್ಮೆ ನೋವಿನ ಚಿತ್ರವಾಗಿದ್ದ ಪುಟಗಳು ಇಂದಿಗೆ ಜೀವನ ತತ್ತ್ವವಾಗಿವೆ. ಕಳೆದುಕೊಂಡವರು ನೆನಪಿನಲ್ಲಿ ಜೀವಂತರಾಗುತ್ತಾರೆ; ಹೊಸಬರು ಜೀವನವನ್ನು ಮುಂದಕ್ಕೆ ನೂಕುತ್ತಾರೆ.

ಹಳೆಯ ಬೇರುಗಳಿಂದ ಹೊಸ ಚಿಗುರು ಮೂಡುವಂತೆ, ಮಾನವನ ಬದುಕು ಸಹ ನಶ್ವರತೆಯ ಮಧ್ಯೆ ನಿರಂತರ ನವಿರುಗೊಳ್ಳುತ್ತದೆ.

ಹೀಗಾಗಿ, ಫೋಟೋ ಆಲ್ಬಮ್ ಕೇವಲ ಚಿತ್ರಗಳ ಸಂಗ್ರಹವಲ್ಲ ಅದು ಬದುಕಿನ ಒಂದು ನಿಶ್ಯಬ್ದ ದಿನಚರಿ. ಕಳೆದು ಹೋದವರಿಗೆ ವಂದನೆ, ಬಂದವರಿಗೆ ಸ್ವಾಗತ ಹೇಳುವ ಜೀವನದ ಮೃದುವಾದ ನೆನಪು.



ಸ್ವಾಮಿನಾಥನ್
ಬೆಂಗಳೂರು

# ದೇಹವೊಂದು ಬಾಡಗೆ ಮನೆ!

ನಾವು ಈ ಭೂಮಿ ಮ್ಯಾಲೆ ಬಂದೀವಿ ಅಂದ್ರ ಹೋಗುವುದಂತೂ ಖಾತ್ರಿ, ಆದ್ರ ಹೆಂಗ,ಯಾವ ರೀತಿ ಇಲ್ಲಿಂದ ಹೋಗ್ತೀವಿ ಅನ್ನೋದು ಮಾತ್ರ ಜೀವನದಾಗ ಭಾಳ ನಿಗೂಢ ನೋಡ್ರಿ!

ಭಗವಂತ ಕೊಟ್ಟ ಜೀವ, ಬದುಕು, ಭಗವಂತನಿಗೆ ಸೇರಿದ್ದು ಹೌದಿಲ್ಲ! ಅಂದ್ರ ಬಾಡಿಗಿ ಮನ್ಯಾಗ ನಮ್ಮ ದೇಹ ಇದ್ದಂಗ ಆಯ್ತು! ಇದು ಬಾಡಿಗಿ ಮನಿ ಇದ್ರೂ ಅದನ್ನ ಶುದ್ಧವಾಗಿ ಇಟ್ಕೊಳ್ಳಲೇ ಬೇಕು, ಯಾಕಂದ್ರ ಹಗಲು, ರಾತ್ರಿ ಆ ಮನ್ಯಾಗ ಜೀವನ ಮಾಡೋರು ನಾವೇ, ಆ ಮನೆ ಕಟ್ಟಿಸಿದ ಯಜಮಾನ ಅಲ್ಲ, ಆದ್ರೆ ಆತಗ ತಿಂಗಳಿಗೊಮ್ಮೆ ಬಾಡಿಗಿ ಹಾಕ್ಲೇ ಬೇಕು ಅಡ್ವಾನ್ಸ್ ಮೊದಲೇ ಕೊಟ್ಟಿರಬೇಕು!

ಹಂಗ ನಾವು ದೇವರಿಗೂ ನಾವು ಉಸಿರಾಡೋ ಉಸಿರಿನ ಬಾಡಿಗಿ ಕಟ್ಟಬೇಕು, ಯಾಕಂದ್ರ ಈ ಉಸಿರಿಗೆ ಮನಿ ಆತ ಕೊಟ್ಟಾನ ಜೊತಿಗೆ ಅದಕ್ಕ ಒಂದೊಂದಾಗಿ ಚೆಂದದ ಹೆಸರು ಕೊಡ್ಲಿಕ್ಕೆ ಮಾತ್ರ ನಮಗೆ ಕೆಲಸ ವಹಿಸಿದ!

ಇದು ನಾಯಿ,ಇದು ಬೆಕ್ಕು, ಈತ ಮನುಷ್ಯ ಅಂತ! ನಾಯಿ, ಬೆಕ್ಕು,ಇಂತಹ ಪ್ರಾಣಿ,ಪಕ್ಷಿ,ಕ್ರಿಮಿ ಕೀಟಗಳಿಗೆ ಅರಿವು ಇರಂಗಿಲ್ಲ ಈ ದೇಹ,ಉಸಿರು ದೇವರು ಕೊಟ್ಟಿದ್ದು ಅಂತ! ಹಂಗಾಗಿ ಅವುಕ್ಕ ಪಾಪ, ಪುಣ್ಯದ ಕರ್ಮ ತಟ್ಟಂಗಿಲ್ಲ,ಅವು ಯಾವ್ದು ಆಸೆ ಪಡದೆ ದೇವರ ಕೊಟ್ಟ ಜೀವನ ಹೆಂಗ ಇರ್ತದೋ ಹಂಗ ಮಾಡ್ಕೊಂಡು ಹೋಗಿ ತಮ್ಮ ಆಯಸ್ಸು ಮುಗಿಸಿ ಬಿಡ್ತಾವ!

ಆದ್ರ ಮನುಷ್ಯ ಹಂಗಲ್ಲ, ಆತಗ ಮೊಟ್ಟ ಮೊದಲು ಮಾತು, ಬುದ್ಧಿ ಕೊಟ್ಟಾನ ಅದನ್ನ ಬಳಸ್ಕೊಂಡು ವಿದ್ಯಾ ಕಲ್ತು ಜೀವನ ಮಾಡ್ಲಿಕ್ಕೆ !

ಹಿಂಗಾಗಿ ಪಾಪ ಪುಣ್ಯದ ಕರ್ಮದ ಬಿಸಿ ನಮಗ ಅಂದ್ರೆ ಮನುಷ್ಯರಿಗೆ ತಟ್ತಾವ!

ಅದು ನಮಗ ಬಾಧಿಸಬಾರ್ದು ಅಂದ್ರ ನಾವು ಸತ್ಕರ್ಮ ಮಾಡಬೇಕು ಯಾಕಂದ್ರ ನಮ್ಮ ಆತ್ಮಕ್ಕ ದೇಹ ಅನ್ನೋ ಮನಿ ಬಾಡಿಗಿ ಕೊಟ್ಟಾಗ

ಆತಗ ತಿಂಗಳಿಗೊಮ್ಮೆ ಕೊಡುವ ರೊಕ್ಕ ಅಂದ್ರ ದಿನಾ ಆತನ ಮ್ಯಾಲೆ ನಾವಿಟ್ಟ ಭಕ್ತಿ! ಆತನ ಬಾಡಿಗಿ ರೊಕ್ಕ ತಿಂಗಳಿಗೊಮ್ಮೆ ಕೊಡಲಿಕ್ಕೆ ಬರಂಗಿಲ್ಲ ದಿನಾ ಕೊಡಬೇಕು ಕ್ಷಣ,ಕ್ಷಣಕ್ಕ ಕೊಡಬೇಕು! ಅಂದ್ರ ನಾವು ಒಳ್ಳೆಯ ಕಾರ್ಯ ಮಾಡೋದು ಅದನ್ನು ನಮ್ಮ ಅಕೌಂಟಿನ್ಯಾಗ ಇದ್ದುದ್ದು ಆತಗ ತೋರಿಸೋದು ಅಷ್ಟೇ, ಆದ್ರ ಆತ ಅದನ್ನು ನೋಡಿ ನಮ್ಮ ಮ್ಯಾಲೇ ಕೃಪಾ ದೃಷ್ಟಿ ಬೀರ್ತಾನ ಹೊರತು ಅದನ್ನ ನಮ್ ಅಕೌಂಟಿಂದ ಹೊರಗ ತಗಿಯಂಗಿಲ್ಲ!

ಹಿಂಗಾಗಿ ನಾವು ನಮ್ಮ ಪಾಪ, ಪುಣ್ಯಗಳ ಡೆಪಾಸಿಟ್ ಮ್ಯಾಲೆ ಜೀವನ ನಡಿಸ್ಕೊಂಡು ಹೋಗ್ಬೇಕು ಹೊರತು ದೇವರು ತನಗಾಗಿ ಯಾವ್ದೂ ತಗೋಳಂಗಿಲ್ಲ! "ಕೆರೆಯ ನೀರನು ಕೆರೆಗೆ ಚೆಲ್ಲಿ!ಅನ್ನೋಹಂಗ ನಮ್ಮ ಕರ್ಮದ ಫಲ ನಮ್ಮ ಮುಂದ ಚೆಲ್ತಾನ ಅಷ್ಟೇ!



ಹಿಂಗಾಗಿ ಮನೋನಿಗ್ರಹಕ್ಕ ಮನೋನಿಯಾಮಕ ಭಗವಂತನ ಅನುಗ್ರಹ ಬೇಕೇಬೇಕು, ಆವಾಗ ನಾವು ನಮ್ಮ ಬಾಡಿಗಿ ಮನಿ ಅಂತ ಅಂತೀವಲ ಈ ದೇಹವನ್ನು ಲೀಸಾಗಾದ್ರೂ ಹಕ್ಕೋಬಹುದು!

ಅಂದ್ರ ದೇಹವನ್ನೇ ಒಂದು ಪೂಜಾ ಸಾಮಾಗ್ರಿ ಹಂಗ ಮಾಡಿದ್ರ ನಾವು ಸತತವಾಗಿ ಭಕ್ತಿ ಮಾಡೋದು ಬೇಕಿಲ್ಲ, ಬ್ಯಾಡಗಿ ಕಟ್ಟೋದು ಬೇಕಿಲ್ಲ , ಪೂಜಾ ಸಾಮಾಗ್ರಿ ತಾನಾಗಿಯೇ ದೇವ್ರಿಗೆ ಬಳಕಿ ಆಗ್ತದ!

ಅದಕ್ಕೆ ನಾವು ಮೊಟ್ಟ ಮೊದಲಿಗೆ ಮಾಡಬೇಕಾಗೋದು ದೇವರ ಸ್ಮರಣೆ ಅದನ್ನೇ ನಮ್ಮ ಜೀವನದಾಗ ರೂಢಿಸಿಕೊಂಡು ನಿಧಾನವಾಗಿ ಮನಸು ಶುದ್ಧಿ ಮಾಡ್ಕೋಬೇಕು!

ನಾಲ್ಕು ಹೂವು ಏರ್ಸದು, ದೀಪ ಹಚ್ಚೋದು, ಇದ್ರಿಂದನ ನಾನು ದೇವರನ ಭಾಳ ಭಕ್ತಿ ಮಾಡ್ತೀನಿ ಅನ್ಕೊಂಡ್ರ ಅದು ತಪ್ಪು! ಒಂದೊಂದು ಹೂವು ಏರಿಸದಾಗೂ ನಾವು ಒಂದೊಂದು ಕೆಟ್ಟ ಬುದ್ಧಿ ಕಳ್ಕೊತ ಬರ್ಬೇಕು, ಆದ್ರ ನಾವು ಏನು ಮಾಡ್ತೀವಿ ಹೂವ ಏರಿಸಿ ಬರೇ ನಮ್ ಸುಖ, ಸಂತೋಷ ,ಧನ, ಧಾನ್ಯ ಕೇಳ್ತೀವಿ, ಆವಾಗ ದೇವ್ರು ನಗ್ತಾನ ಈ ಮನುಷ್ಯರ ಸ್ವಭಾವವೇ ಇಷ್ಟ ಆಯ್ತು ಅಂತ!

ಯಾಕಂದ್ರ ದೇವರು ಎಲ್ಲಾ ಪ್ರಾಣಿಗಿಂತ ಅತಿ ಬುದ್ಧಿ ಮನುಷ್ಯಾಗ ಯಾಕ ಕೊಟ್ಟಾನ ಅಂದ್ರ, ಅದರಿಂದ ಆತ ಏನಾದ್ರೂ ಒಳ್ಳೇದು ಸಾಧಸ್ಲಿ ಅಂತ ಆದ್ರ ನಾವು ಬುದ್ಧಿ ಉಪಯೋಗಿಸಿ ಸ್ವಾರ್ಥ ಮಾತ್ರ ಸಾಧಿಸ್ತೀವಿ!

ಇದ್ನ ಹೇಳಿದಷ್ಟು ಸರಳ ಬಿಡ್ಲಿಕ್ಕೆ ಬರಂಗಿಲ್ಲ ಖರೆ, ಯಾಕಂದ್ರ ಪ್ರತಿ ಉಸರ್ನಾಗೂ ನಾವು ಸ್ವಾರ್ಥ ನೇ ತುಂಬ್ಕೊಂಡಿವಿ ಹೀಗಾಗಿ ನಿಸ್ವಾರ್ಥ ಉಸಿರು ಅಷ್ಟು ಜಲ್ದಿ ನಮಗ ಸಿಗಂಗಿಲ್ಲ! ಅದಕ್ಕ ಭಾಳ ಪ್ರಯತ್ನ ಮಾಡಬೇಕು!

ಅಂಥವರೇ ಯತಿಗಳು,ದಾಸರು,ಶರಣರು!

ಹಿಂಗಾಗಿ ಅವರ ಪಾದಪೂಜಾ ಮಾಡಿ ಆ ನೀರು ನಾವು ತಲಿಗೆ ಚಿಮುಸ್ಕೋತೀವಿ! ಅಂಥವರ ಪಾದಧೂಳಿಯಾದ್ರೂ ನಮಗ ಸಿಗ್ಲಿ ಅಂತ ಅಷ್ಟೇ! ಹಿಂಗಾಗಿ ನಾವು ಮನಸ್ಸು ಶುದ್ಧಿ ಮಾಡ್ತಾ ಹೋದ್ರ ಅವರು ಪಾದಧೂಳಿ ದಿನಾ ಧರಿಸಿದ್ದಂಗ ಆಗ್ತದ!

ಯತಿ, ಮುನಿಗಳು ಸನ್ಯಾಸತ್ವ ಸ್ವೀಕಾರ ಮಾಡಿ ಜೀವನದಾಗ ಸಾಧನೆ ಮಾಡಿ ತೋರಿಸಿದ್ರು, ಆದ್ರೆ ದಾಸರು, ಶರಣರು ಸಂಸಾರವೆಂಬ ಭವ ಸಾಗರದೊಳಗ ಇದ್ದೇ ಸಾಧನೆ ಮಾಡಿದ್ರು! ನಾವು ಅವರು ನೀಡಿದ ಮಾರ್ಗದರ್ಶನದೊಳಗ ನಡೆದು ಬಂದ್ರ ಸಾಕು ಈ ಉಸಿರು ವಾಸವಾಗಿರೋ ಈ ಬಾಡಿಗಿ ದೇಹದಾಗಿನ ಮನಸು ಶುದ್ಧ ಆಗಿ ದೇವರು ಈ ಮನಿಯಿಂದ ನಮ್ಮನ್ನು ಬಿಡಿಸಿದಾಗ ಆತ್ಮ ತನ್ನಿಂತಾನೇ ಸರಿಯಾದ ಜಾಗಕ್ಕ ಹೋಗ್ತದ!



ಸ್ನೇಹಾ ಆನಂದ್

# ಸುತ್ತಲಿರುವ ಜನರ ಗುಣ ಹೇಗೋ, ನಮ್ಮ ಜೀವನವೂ ಹಾಗೇ ಆಗುತ್ತದೆ

ಸತ್ಸಂಗದ ಮಹತ್ವ (ಸುತ್ತಲಿರುವ ಜನರ ಗುಣ ಹೇಗೋ, ನಮ್ಮ ಜೀವನವೂ ಹಾಗೇ ಆಗುತ್ತದೆ)

ಯಾರು ಜೊತೆ ಇರುತ್ತೇವೋ, ಯಾವ ಚಿಂತನೆ ಇಟ್ಟುಕೊಳ್ಳುತ್ತೇವೋ ನಮಗೆ ಅದೆಲ್ಲ ಮಾತಿನಲ್ಲಿ, ನಂತರ ಕರ್ಮದಲ್ಲಿ, ನಂತರ ಭವಿಷ್ಯ ಮತ್ತು ಭಾಗ್ಯದಲ್ಲಿ ಕಾಣಿಸಿಕೊಂಡೀತು.

ಕೆಲಸ ಮಾಡುವ ಕಛೇರಿಗಳಲ್ಲಿ ಮನೆಯ ಅಕ್ಕಪಕ್ಕದಲಿ ವಯಕ್ತಿಕ ಪಪೋಟಿ ಬೇಡ.

ಇದು ಸರಳ ಮತ್ತು ಸಹಜವಾದ ಮಾತು. ಇದನ್ನು ನಾನು ಹಲವಾರು ಬಾರಿ ಗಮನಿಸುತ್ತೇನೆ. ಕೆಲಸ ಮಾಡುವ ಕಚೇರಿಗಳಲ್ಲಿ ತಮ್ಮ ಸಹೋದ್ಯೋಗಿಗಳ ನಡುವೆ ಪೈಪೋಟಿಗೆ ಬಿದ್ದು ಅವರಿಗಿಂತ ಹೆಚ್ಚಿನ ದರ್ಜೆಯಲ್ಲಿ ತಾನು ಉತ್ತಮ ಎನಿಸಿಕೊಳ್ಳುವ ಪ್ರಯತ್ನಹಲವರಿಗೆ. ಇದು ಒಂದು ರೀತಿಯ ವ್ಯಾಧಿಯೇ ಸರಿ. ಅವರಿಗಿಂತ ಉತ್ತಮವಾದ ಬಟ್ಟೆಯನ್ನು ಧರಿಸಬೇಕು, ಜೊತೆಗಿರುವ ಸಹೋದ್ಯೋಗಿಗಳಿಗಿಂತ ಹೆಚ್ಚಿನರೀತಿಯಲಿ ಚಂದ ಕಾಣಬೇಕು. ಸುಖಾ ಸುಮ್ಮನೇ ಸಹೋದ್ಯೋಗಿಗಳೊಡನೆ ಪೈಪೋಟಿಗೆ ಬಿದ್ದು ಅವರ ಬಗ್ಗೆ ಚಾಡಿ ಮಾತುಗಳನ್ನು ಹಬ್ಬಿಸುವುದು. ಅವರು ಮಾಡಿದ ತಪ್ಪುಗಳನ್ನು ಎತ್ತಿ ತೋರಿಸುವುದು. ಕೆಲಸದಲ್ಲಿ ಅವರು ಹೇಗೆ ತನಗಿಂತ ಕಡಿಮೆ ಎಂಬುವುದನ್ನು ಬಿಂಬಿಸುವುದು. ಹೀಗೆ ಕೆಲಸ ಮಾಡುವ ಸ್ಥಳದಲ್ಲಿ ಕೂಡ ಒಂದು ರಾಜಕೀಯ ಸನ್ನಿವೇಶ ನಿರ್ಮಾಣವಾಗುತ್ತದೆ ಅದು ಮನಸ್ಸಿಗೂ ಮತ್ತು ಕೆಲಸಕ್ಕೂ ಅಡಚಣೆಯನ್ನು ಉಂಟುಮಾಡುತ್ತದೆ. ಕೆಲಸ ಮಾಡುವ ಕಚೇರಿಯಲ್ಲಿ ಗಮನಿಸಬೇಕಾದ ಅಂಶಗಳು ಹಿಂದಿಯಲ್ಲಿ ಒಂದು ಮಾತು ಇದೆ " ಕಾಮ ಸೇ ಕಾಮ ರಖೋ" ಇದರ ಅರ್ಥ ಕೆಲಸದೊಂದಿಗೆ ಕೆಲಸವಿರಲಿ ಬೇರೆ ವಿಷಯಗಳತ್ತ ಗಮನ ಬೇಡ. ನೀವು ಉತ್ತಮರಾಗಿದ್ದರೆ ನಿಮ್ಮ ಕೆಲಸವನ್ನು ಇನ್ನೂ ಉತ್ತಮವಾಗಿ ಮಾಡಿ ಆಗ ಉತ್ತಮತೆ ತಾನಾಗಿಯೇ ಬರುವುದು. ಇನ್ನೊಬ್ಬರ ತಪ್ಪನ್ನು ಎತ್ತಿ ಹಿಡಿದು ತಾನು ಒಳ್ಳೆಯವನು ಎಂದು ತೋರಿಸುವದು ಬೇಡ.

ಶಾಲೆ, ಕಾಲೇಜು ಮತ್ತು ಕಛೇರಿಗಳಲ್ಲಿ, ಮನೆ ಅಕ್ಕಪಕ್ಕದವರಲ್ಲಿ ಪಾಲಿಸಬೇಕಾದ ಅಂಶಗಳು.

- ಇಲ್ಲಿ ಮುಖ್ಯ ಉದ್ದೇಶವು ಕಚೇರಿಯ ಕಾರ್ಯ ಕೆಲಸವಾಗಿರುವುದು. ಅಕ್ಕಪಕ್ಕದವರು ಸಹೋದ್ಯೋಗಿಗಳು ಏನು ಮಾಡುತ್ತಾರೆ ಎಂದು ಯೋಚಿಸುವುದು ನಮ್ಮ ಕೆಲಸವಲ್ಲ.
- ಕಚೇರಿಯಲ್ಲಿರುವ ಸಹೋದ್ಯೋಗಿಗಳೊಡನೆ ಅಥವಾ ಮನೆ ಅಕ್ಕಪಕ್ಕದಲ್ಲಿರುವ ಜನರ ಒಡನೆ ಸ್ವಲ್ಪ ಹೊತ್ತು ಮಾತ್ರ ನಾವು ಇರುತ್ತೇವೆ. ಆ ಸಂಬಂಧಗಳು ಶಾಶ್ವತವಲ್ಲ ಹೀಗಾಗಿ ಅವುಗಳನ್ನು ಅತಿಯಾಗಿ ಮನಸ್ಸಿಗೆ ತೆಗೆದುಕೊಳ್ಳಬೇಡಿ
- ವೈಯಕ್ತಿಕ ವಿಷಯಗಳನ್ನಾಗಲಿ ಮನೆಯ ವಿಷಯಗಳನ್ನಾಗಲಿ ಕಚೇರಿಗಳಲ್ಲಿ ಚರ್ಚಿಸುವುದು ಸೂಕ್ತವಲ್ಲ ಅವರು ಅದನ್ನು ಇನ್ನೊಬ್ಬರ ಮುಂದೆ ಹೇಳಿದಾಗ ನಗೆ ಪಾಟಲಿಗೆ ಈಡಾಗುತ್ತೇವೆ.
- ಉತ್ತಮವಾದ ಬಟ್ಟೆಗಳಿಂದ ಅಥವಾ ತೋರಿಸುವ ದರ್ಪದಿಂದ ನಾವು ದಕ್ಷ ಕಾರ್ಯಕಾರರು ಆಗುವುದಿಲ್ಲ. ಮಾಡುವ ಕೆಲಸದಲ್ಲಿ ಉತ್ತಮತೆಯನ್ನು ಸಾಧಿಸಬೇಕು
- ಕಚೇರಿಗಳಲ್ಲಿ ಕೂಡ ,ಎಂಟು ಹತ್ತು ತಾಸು ಸಹೋದ್ಯೋಗಿಗಳ ಒಡನೆ ಒಟ್ಟಿಗೆ ಇರಬೇಕು. ಹೀಗಾಗಿ ಅವರೊಡನೆ ಸೌಹಾರ್ದ ಇರಲಿ ಸುಮ್ಮನೆ ಯಾರೊಟ್ಟಿಗೆ ಮನಸ್ತಾಪಗಳನ್ನ ಮಾಡಿಕೊಳ್ಳಬಾರದು. ಲಹದಿಂದ ಮನಸ್ಸು ವಿಹಲ್ವ
- ಮೇಲಧಿಕಾರಿಗಳಿಗೆ ಸಹೋದ್ಯೋಗಿಗಳ ಬಗ್ಗೆ ದೂರು ಹೇಳುವುದಾಗಲಿ, ಅವರಿಗಿಂತ ತಾನು ಹೇಗೆ ಒಳ್ಳೆಯವನು ಎಂದು ಹೇಳಿಕೊಳ್ಳುವ ಜಂಬವಾಗಲಿ ಎಂದೂ ಬೆಳೆಸಿಕೊಳ್ಳಬಾರದು. ಅವರೆ ಮ್ಮ ಕಾರ್ಯವಖರಿ ಗುರುತಿಸುವಂತೆ ಇರಬೇಕು.
- ನಮ್ಮ ಬಗ್ಗೆ ಅವರು -ಇವರು ಏನು ಮಾತನಾಡಿಕೊಂಡರು, ಉಳಿದ ಸಹೋದ್ಯೋಗಿಗಳಿಗೆ ನಮ್ಮ ಬಗ್ಗೆ ಏನು ಅಭಿಪ್ರಾಯ ಎಂದು ತಿಳಿಯುವ ಕುತೂಹಲ ನಮಗೆ ಬೇಕಿಲ್ಲ. ನಾವು ಶುಧ್ಧವಾಗಿರುವುದು ನಮಗೆ ಗೊತ್ತಿದ್ದರೆ ಸಾಕು... ಎಲ್ಲರಿಗೂ ಸ್ವಚ್ಛತೆ ತೋರಿಸಲು ನಾವು ಸಾಬೂನು ಅಲ್ಲ.
- ನೀವು ಶಾಲಾ-ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದರೆ ಅಥವಾ ಬೇರೆ ಯಾವುದೇ ಕೆಲಸಗಳಲ್ಲಿ ಉದ್ಯೋಗಿಯಾಗಿದ್ದರೆ ನಿಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡಿ ಆಗ ಅದಕ್ಕೆ ಮನ್ನಣೆ ತಾನಾಗಿಯೇ ಸಿಗುತ್ತದೆ, ಬೇರೆಯವರನ್ನು ವಿದ್ಯಾರ್ಥಿಗಳ ಮುಂದೆ ದೂರುವುದು ನಿಮ್ಮ ವ್ಯಕ್ತಿತ್ವಕೆ ಕುಂದು ಕಾಣಿಸುವದು.
- ನಿಮ್ಮ ಅಧಿಕಾರವೂ, ಕಾರ್ಯ ಮತ್ತು ಕರ್ತವ್ಯಕ್ಕೆ ಮಾತ್ರ ಸೀಮಿತವಾಗಬೇಕು ಯಾರನ್ನು ವೈಯಕ್ತಿಕವಾಗಿ ತಿದ್ದುವ ಹಕ್ಕು ನಮಗಿರುವುದಿಲ್ಲ.
- ಮಹಿಳಾ ಸಿಬ್ಬಂದಿಯೊಡನೆ ಗೌರವ ಮತ್ತು ಸೌಜನ್ಯದಿಂದ ನಡೆದುಕೊಳ್ಳುವುದು ಉತ್ತಮ ವ್ಯಕ್ತಿತ್ವದ ಲಕ್ಷಣ.
- ಸದಾ ಕ್ರಿಯಾಶೀಲವಾಗಿ ಮತ್ತು ಆದಷ್ಟು ತಾಳ್ಮೆಯಿಂದ ವರ್ತಿಸುವದು ಒಳ್ಳೆಯದು. ಇದು ನಿಮ್ಮನ್ನು ಉತ್ಸಾಹಿ ಆಗಿ ಇಡುವದು.
- ನಿಮ್ಮ ಕೆಲಸಗಳಿಗೆ ಬೇರೆಯವರನ್ನು ಅವಲಂಬಿತರಾಗದಂತೆ, ಸ್ವಾವಲಂಬಿಯಾಗಿ ಇರುವುದು ಪ್ರಗತಿಗೆ ಸಾಧನ
- * ಯಾರ ವೈಯಕ್ತಿಕ ವಿಷಯವನ್ನು ತಿಳಿದುಕೊಳ್ಳುವ ಅಥವಾ ಅವರಿವರ ಬಗ್ಗೆ ಚಾರಿತ್ರವಧೆಯಾಡುವಂತಹ ಮಾತುಗಳನ್ನು ಆಡದಿರಿ
- ಯಾರೇ ಬಂದು ಬೇರೆಯವರ ಬಗ್ಗೆ ಚಾಡಿ ಮಾತುಗಳನ್ನು ಹೇಳಿದಾಗ ಅದನ್ನು ಅಲ್ಲೇ ಕೇಳಿ ಅಲ್ಲಿಯೇ ಬಿಟ್ಟುಬಿಡಿ. ಏಕೆಂದರೆ ನಾವು ವಯಕ್ತಿಕ ವಾರ್ತಾ ಇಲಾಖೆಯವರುಅಲ್ಲ ವಾರ್ತೆಯನ್ನು ಓದಲು ಅಲ್ಲಿ ಹೋಗಿರುವುದಿಲ್ಲ.
- ನೀವು ಹೇಗೆ ಸರಿ ಇದ್ದೀರಿ ಎಂದು ಪ್ರತಿ ಬಾರಿ ಸಿದ್ಧಪಡಿಸಲು ಹೆಣಗಾಡದಿರಿ. ನಿಮ್ಮ ವ್ಯಕ್ತಿತ್ವವೇನು ಎಂದು ನಿಮಗೆ ಗೊತ್ತಿದ್ದರೆ ಸಾಕು.ಪ್ರತಿಯೊಬ್ಬರಿಗೆ ಸಾಕ್ಷಿ ನೀಡಿ ಸಾಬೀತುಪಡಿಸುವ ಅವಶ್ಯಕತೆ ಇರುವದಿಲ್ಲ.
- ಯಾರದೋ ಮಾತನ್ನು ಕೇಳಿಕೊಂಡು ಯಾರ ಬಗ್ಗೆಯೂ ಅಭಿಪ್ರಾಯವನ್ನು ಸೃಷ್ಟಿಸದಿರಿ ನಿಮ್ಮ ಅನುಭವಕ್ಕೆ ಬಂದ ಮೇಲೆ ಮಾತ್ರ ಅವುಗಳನ್ನು ನಂಬಿ
- ನಿಮಗೆ ಸಂಬಂಧಪಡದ ವಿಷಯಗಳಲ್ಲಿ ತಲೆ ತೂರಿಸುವುದಾಗಲಿ, ಮಾತನಾಡುವುದಾಗಲಿ ಅಧಿಕ ಪ್ರಸಂಗ ಎನಿಸಿಕೊಳ್ಳುವುದು. ಮೇಲಾಧಿಕಾರಿಗಳ ಬಗ್ಗೆ ಕೀಳಾಗಿ ಮಾತನಾಡುವುದು ಮತ್ತು ಅಗೌರದಿಂದ ನಡೆದುಕೊಳ್ಳುವುದು ನಿಮ್ಮ ವ್ಯಕ್ತಿತ್ವಕ್ಕೆ ಹಾನಿ ಉಂಟುಮಾಡುವುದು
- ಹೆಚ್ಚಿನ ಗಮನ ಯಾವತ್ತೂ ಕೆಲಸದ ಬಗ್ಗೆ ಇರಲಿ. ಸಹೋದ್ಯೋಗಿಗಳ ಬಗ್ಗೆ, ಅವರು ಧರಿಸುವ ಬಟ್ಟೆ, ಬಳಸುವ ಕಾರು ಅದು ಅವರಿಗೆ ಬಿಟ್ಟಿದ್ದು.ಅದಕ್ಕೂ
- ನಮಗೂ ಪೈಪೋಟಿ ಯಾಗದಿರಲಿ.
- ಸಹೋದ್ಯೋಗಿಗಳು ಸಹಾಯ ಮಾಡಿದಾಗ, ಉತ್ತಮವಾಗಿ ಕೆಲಸ ಮಾಡಿದಾಗ ಮನದುಂಬಿ ಅಭಿನಂದಿಸಿ ಇದರಿಂದ ನಿಮ್ಮ ವ್ಯಕ್ತಿತ್ವದ ಗೌರವ ಹೆಚ್ಚುತ್ತದೆ.
- ಸಣ್ಣಪುಟ್ಟ ಭಿನ್ನಾಭಿಪ್ರಾಯವಾದಾಗ ಜಗಳಗಳಾದಾಗ ಅವುಗಳನ್ನು ದೊಡ್ಡದಾಗಿ ಮಾಡದೆ ಕ್ಷಮೆ ಕೇಳಿ ಅಲ್ಲಿಯೇ ಮುಗಿಸಿ ಕೆಲಸದತ್ತ ಗಮನಿಸಿ. ಜಗಳ ಆರಂಭವನ್ನಷ್ಟೇ ನಾವು ಮಾಡಬಹುದು ಅದರ ಅಂತ್ಯ ನಮ್ಮ ಕೈಯಲ್ಲಿ ಇರುವುದಿಲ್ಲ.ಅದಕ್ಕೆ ದ್ವೇಷ ಸಾಧಿಸುವ ಹಠ ಎಂದಿಗೂ ಬೇಡ



ಮನದ 2 ಮಾತು

- ಮನೆಯ ಕರಕರೆಗಳನ್ನು ಕಛೇರಿವರೆಗೆ ಎಂದಿಗೂ ಒಯ್ಯದಿರಿ. ಕೆಲಸ ಮಾಡುವ ಸ್ಥಾನ ಯಾವಾಗಲೂ ಉತ್ಸಾಹ ಮತ್ತು ಲವಲವಿಕೆಯಿಂದ ತುಂಬಿರಲಿ ಇದು ನಿಮ್ಮ ಕಾರ್ಯದಕ್ಷತೆಯನ್ನು ಹೆಚ್ಚಿಸುತ್ತದೆ.
- ಇನ್ನೊಬ್ಬರಲ್ಲಿ ನಿಮಗಿಂತ ಹೆಚ್ಚಿನ ಕಾರ್ಯಕ್ಷಮತೆ ಕಂಡು ಬಂದಾಗ ಅವರಿಂದ ಕಲಿಯಲು ಪ್ರಯತ್ನಿಸಿ ಅಭಿನಂದಿಸಿ ಅಸೂಯೆ ಪಟ್ಟುಕೊಳ್ಳುವುದು ಪ್ರಗತಿಶೀಲರ ಲಕ್ಷಣವಲ್ಲ. ಅದು ನಿಮ್ಮ ಮನಸ್ಸಿಗೆ ಕಿರಿಕಿರಿ ಉಂಟು ಮಾಡುತ್ತದೆ
- ಮೇಲ್ವರ್ಗ ಮತ್ತು ಕೆಳವರ್ಗದ ಎಲ್ಲಾ ಸಿಬ್ಬಂದಿಯೊಡನೆ ಗೌರವ ಮತ್ತು ಆದರದಿಂದ ಮಾತನಾಡುವ ಅಭ್ಯಾಸವನ್ನು ಇಟ್ಟುಕೊಳ್ಳಿ.
- ಉದ್ಯೋಗವು... ನಾವು ಮಾಡುವ ಕೆಲಸವೂ ನಮಗೆ ಅನ್ನ ನೀಡುವ ದೇವರಾಗಿರುವುದರಿಂದ ಆ ಸಂಸ್ಥೆಯ ಬಗ್ಗೆ ಅಲ್ಲಿರುವವರ ಬಗ್ಗೆ ಅಪ ಶಬ್ದಗಳನ್ನು ಆಡುವುದು ಅನ್ಯಾಯ ಮಾಡಿದಂತೆ
- ಸಹೋದ್ಯೋಗಿಗಳಿಗಿಂತ ಮುಂದೆ ಹೋಗಬೇಕು ಎಂಬುದು ಗುರಿಯಾಗದಿರಲಿ. ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡು ಯಶಸ್ಸಿನತ್ತ ಹೋಗಬೇಕು ಎನ್ನುವುದು ಗುರಿಯಾಗಿರಲಿ.
- ಚಾಡಿಮಾತು ಕೇಳುವುದು ಹೇಳುವುದು ಎರಡೂ ಹಾನಿಕರ, ಇವು ಒಗ್ಗಟ್ಟನ್ನು ಮುರಿದು ಹಾಕುತ್ತವೆ.

ಹೀಗೆ ದಿನದ ಹೆಚ್ಚಿನ ಸಮಯ ಕಚೇರಿಗಳಲ್ಲಿ ಕಳೆಯುತ್ತೇವೆ. ಅಲ್ಲಿರುವ ಸಹೋದ್ಯೋಗಿಗಳೊಂದಿಗೆ ಕಿರಿಕಿರಿಯಾದರೆ ಮನಸ್ಸಿಗೆ ಇಡೀ ದಿನ ಸುಖ ಇರುವುದಿಲ್ಲ. ಕಾರ್ಯದಕ್ಷತೆಯು ಕುಂದುತ್ತದೆ. ಹೆಚ್ಚಾಗಿ ಮಹಿಳೆಯರು ಕೂಡ ಸೀರೆ, ಅಂದ, ಉಡುಪು ವಿನ್ಯಾಸ ಇವುಗಳನ್ನು ಆಧಾರವಾಗಿ ಇಟ್ಟುಕೊಂಡು ಸಹೋದ್ಯೋಗಿಗಳಿಗಿಂತ ವಿಭಿನ್ನವಾಗಿ ಹೆಚ್ಚು ಚೆಂದವಾಗಿ ಕಾಣಬೇಕು ಎನ್ನುವ ಸ್ಪರ್ಧಾ ಮನೋಭಾವನೆ ಬೇಡ. ನೀವು ಶಿಕ್ಷಕ ವೃತ್ತಿಯಲ್ಲಿದ್ದರೆ ಮಕ್ಕಳನ್ನು ಪ್ರೀತಿಸಿ. ಉತ್ತಮವಾಗಿ ಕಲಿಸಲು ಶ್ರಮಪಟ್ಟು ಪ್ರಯತ್ನಿಸಿ. ಮಕ್ಕಳಿಗೆ ಮಾದರಿ ಶಿಕ್ಷಕರಾಗಿ ಮನದಲ್ಲಿ ನೆನಪು ಉಳಿಯುವಂತೆ ಇರಬೇಕು.

ಇದು ಕೇವಲ ಕಚೇರಿಗಳಲ್ಲಿ ಮಾತ್ರ ಅಲ್ಲ ಸಂಬಂಧಿಕರಲ್ಲಿ ಮತ್ತು ಮನೆಯ ಅಕ್ಕಪಕ್ಕದಲ್ಲಿ ಕೂಡ ಇರುವರ ಜೊತೆ ಕೂಡ ಅನ್ವಯವಾಗುತ್ತದೆ. ಮನೆಯ ಅಕ್ಕ–ಪಕ್ಕದವರೊಡನೆ ಯಾವತ್ತಿಗೂ ಅನಗತ್ಯವಾದ ಪೈಪೋಟಿಗೆ ಬೀಳದಿರಿ. ನಮ್ಮ ಆರ್ಥಿಕ ಅನುಕೂಲತೆಯ ತಕ್ಕಂತೆ ಸೌಲಭ್ಯಗಳು ಇರುತ್ತವೆ . ಯಾವುದೇ ವಸ್ತುವನ್ನು ಖರೀದಿಸಬೇಕಾದರೆ ಅಗತ್ಯವಿದ್ದರೆ ಮಾತ್ರ ಖರೀದಿಸಿ ಎಲ್ಲರ ಬಳಿಯೂ ಇದೆ ನನ್ನ ಬಳಿಯೂ ಇರಲಿ ಎಂಬ ಅಭಿಪ್ರಾಯ ಬೇಡ. ಸಮಾರಂಭಗಳಿಗೆ ಹೋದಾಗ ಕರೆದವರ ಪ್ರೀತಿ ಮತ್ತು ಸಮಾರಂಭದ ಉದ್ದೇಶದ ಮೇಲೆ ಗಮನವಿರಲಿ ವಿನಹ ಬೇರೆಯವರು ಧರಿಸಿದ ಆಭರಣ,ಸೀರೆ ಒಡವೆ ವಸ್ತ್ರ ಇವು ನಮಗೆ ಸಂಬಂಧಪಟ್ಟ ವಿಷಯಗಳೆ ಅಲ್ಲ. ನಮ್ಮ ವ್ಯಕ್ತಿತ್ವಕ್ಕೆ ನಮ್ಮ ವಿಚಾರಧಾರೆಗಳಿಂದ ಒಂದು ಚೌಕಟ್ಟನ್ನು ಹಾಕಿಕೊಂಡು ಆದರ್ಶಗಳ ಮೇಲೆ ನಡೆಯಬೇಕು. ಅವರಿವರ ಮಾತುಗಳಿಂದ ಪ್ರಭಾವಿತರಾಗಬಾರದು.

ಮನೆಯಲ್ಲಿ ನಡೆಯುವ ವಿಷಯಗಳನ್ನಾಗಿ ಜಗಳಗಳನಾಗಲಿ ಅಕ್ಕಪಕ್ಕದವರ ಮುಂದೆ ಎಂದಿಗೂ ಹೇಳದಿರಿ. ನಿಮ್ಮ ಆದಾಯ ಸಂಪತ್ತು ಇದು ನಿಮಗೆ ಮಾತ್ರ ಸೀಮಿತವಾಗಿರಲಿ ತೋರಿಕೆಯ ಸಾಧನ ಎಂದಿಗೂ ಆಗದಿರಲಿ. ಯಾರಿಗಾದರೂ ಸಹಾಯ ಮಾಡಿದರೆ ಆದಷ್ಟು ಅದರ ಬಗ್ಗೆ ಮೌನವಹಿಸಿ ಎಲ್ಲರ ಮುಂದೆ ಹೇಳಿ ಡಂಗುರ ಸಾರುವ ಅವಶ್ಯಕತೆ ಇರುವುದಿಲ್ಲ. ದುಡ್ಡು ಸಂಪತ್ತು ಇವತ್ತು ಒಬ್ಬರದಾಗಿರುವುದು ನಾಳೆ ಇನ್ನೊಬ್ಬರದಾಗಿರಬಹುದು ಅದನ್ನು ಈಗ ಬಳಸುವ ಅವಕಾಶ ನಮ್ಮದಾಗಿದೆ ಹೀಗಾಗಿ ಅದರ ಸದುಪಯೋಗ ಮಾಡಿರಿ ಆಡಂಬರವಲ್ಲ. ಸಂಬಂಧಿಕರೊಡನೆ ಮಾತುಕತೆ ಮಿತವಾಗಿ ಹಿತವಾಗಿ ಸ್ನೇಹ ಮಯವಾಗಿರಲಿ ಯಾರ ವೈಯಕ್ತಿಕ ಅವ ಹೇಳನ ಮಾಡದಿರಿ. ಅವರು ತಪ್ಪು ಇವರು ಸರಿಯೆಂದು ಇಬ್ಬರ ಜಗಳದಲ್ಲಿ ಅನಗತ್ಯವಾಗಿ ತೂರಿಕೊಂಡು ಹೇಳಲು ನಾವು ಅಲ್ಲಿ ನ್ಯಾಯಾಧೀಶರು ಅಲ್ಲ. ಎಲ್ಲಾ ವಿಷಯಗಳಿಗೆ ಸ್ಪಂದಿಸು ಅಗತ್ಯ ಇರುವುದಿಲ್ಲ.

ಲೋಕೋ ಭಿನ್ನರುಚಿ ಎನ್ನುವಂತೆ ಎಲ್ಲರ ಸ್ವಭಾವವು ವಿಭಿನ್ನವಾಗಿರುತ್ತದೆ ಎಲ್ಲಿ ಹೊಂದುತ್ತದೆ ಅಲ್ಲಿ ಸ್ನೇಹದಿಂದ ಇರಿ. ಎಲ್ಲಿ ಹೊಂದಾಣಿಕೆ ಇಲ್ಲ ಎನಿಸುತ್ತದೆ ಅಲ್ಲಿ ಸುಮ್ಮನಿದ್ದು ಬಿಡಿ. ಯಾರನ್ನು ತಿದ್ದುವುದು ನಮ್ಮ ಜೀವನದ ಉದ್ದೇಶ ಅಲ್ಲ. ಎಲ್ಲರ ಜೀವನದಲ್ಲಿ ಗುರು ಆಗುವ ಪ್ರಯತ್ನ ಬೇಡ.

ಗಂಡ ಹೆಂಡತಿಯ ಜಗಳ, ಅತ್ತೆ ಮಾವಂದಿರ ಚಾಡಿ ಮಾತುಗಳು ಬೇರೆಯವರೊಡನೆ ಹಂಚಿಕೊಳ್ಳದಿರಿ. ಇದರಿಂದ ನಿಮ್ಮ ಸಮಸ್ಯೆ ಪರಿಹಾರವಾಗುವುದಿಲ್ಲ.

ಯಾವಾಗಲೂ ಆತ್ಮವಿಶ್ವಾಸದಿಂದ ಮತ್ತು ನಗುತ್ತಾ ಇರಲು ಪ್ರಯತ್ನಿಸಿ. ಆತ್ಮವಿಶ್ವಾಸ ಇರುವ ಮನುಷ್ಯನನ್ನು ಯಾರೂ ಕೆಳಗೆ ಬೀಳಿಸಲಾರರು.


ಸಂಬಂಧಗಳಲ್ಲಿ ಬಿರುಕು ಬಂದಾಗ ಕೆಲ ಹೊತ್ತು ಮೌನವಹಿಸಿಬಿಡಿ ಎಲ್ಲವನ್ನು ಸರಿ ಮಾಡಲು ಎಲ್ಲಾ ಸಮಯದಲ್ಲೂ ಸಾಧ್ಯವಿಲ್ಲ. ಯಾರೊಡನೆಯೂ ನೀವು ಹೆಚ್ಚು ಆತ್ಮೀಯವಾಗಲು ಮೊದಲು ಅವರನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಿ . ಪ್ರೀತಿ ಸ್ನೇಹ ವಿಶ್ವಾಸಕ್ಕೆ ಪೆಟ್ಟು ಬಿದ್ದಾಗ ತುಂಬಾ ನೋವಾಗುತ್ತದೆ ಅತಿ ಸಲಿಗೆಯ ವ್ಯಕ್ತಿತ್ವವಾಗಲಿ ಅತಿ ನಿಕೃಷ್ಟ ಕಠೋರತೆಯ ಸ್ವಭಾವವಾಗಲಿ ಸರಿಯಲ್ಲ. ಗೌರವವನ್ನು ಕೊಟ್ಟು ಗೌರವವನ್ನು ಪಡೆದುಕೊಳ್ಳುವ ಸ್ವಭಾವವನ್ನು ರೂಢಿಸಿಕೊಳ್ಳಬೇಕು. ಸಮಯ ಬಿಡುವಾದಾಗ ಒಳ್ಳೆಯ ಪುಸ್ತಕಗಳನ್ನು ಓದುವುದಾಗಲಿ , ಮನೆಯ ಸುತ್ತಲೂ ಜಾಗವಿರದಿದ್ದರೂ ಕುಂಡಗಳಲ್ಲಿ ಸಣ್ಣಪುಟ್ಟ ಹೂವಿನ ಸಸಿಗಳನ್ನು ನೆಡುವುದು ಉತ್ತಮ ಕಲಾಕೃತಿಗಳನ್ನು ಬಿಡಿಸುವುದು ಇಂತಹ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳಿ . ಇದು ಮನಸ್ಸಿಗೆ ಆನಂದವನ್ನು ನೀಡುತ್ತದೆ. ಅಕ್ಕ ಪಕ್ಕದವರ ಬಳಿಗೆ ಸದಾ ಸಹಾಯ ಕೇಳುವುದು ಸರಿಯಲ್ಲ. ಅದೇ ರೀತಿ ಇನ್ನೊಬ್ಬರಿಗೆ ಸಹಾಯ ಮಾಡಲು ಸದಾ ಸಿದ್ದರಿರುವುದು ಸರಿಯಲ್ಲ. ಆಗ ನಿಮ್ಮನ್ನು ಬೇರೆಯವರು ಸುಲಭವಾಗಿ ಕೆಲಸಕ್ಕೆ ಬಳಸಿಕೊಳ್ಳುತ್ತಾರೆ. ಆಗದಿರುವ ಕೆಲಸಗಳನ್ನು ಸಂಕೋಚದ ಭಾರಕ್ಕೆ ಒಪ್ಪಿಕೊಂಡು ಮಾಡಲಾಗದೆ ಒದ್ದಾಡದಿರಿ , ನಯವಾಗಿ ನಿರಾಕರಿಸುವ ಬಗೆಯನ್ನು ಕಂಡುಕೊಳ್ಳಿ. ಸಾಧ್ಯವಾಗುವ ಕೆಲಸಗಳನ್ನು ಪ್ರೀತಿಯಿಂದ ಮಾಡಿ ನಿಮಗೆ ತೊಂದರೆಯಾಗುವಂತಹ ಸಹಾಯಗಳನ್ನು ನಯವಾಗಿ ಮತ್ತು ಸ್ಪಷ್ಟವಾಗಿ ನಿರಾಕರಿಸಿ.ಆ ಸಮಯಕ್ಕೆ ನಿಷ್ಟುರವಾಗಿ ಕಂಡರೂ ಆದು ನಿಮ್ಮ ವ್ಯಕ್ತಿತ್ವದ ಗರಿಷ್ಠತೆಯನ್ನು ಉಳಿಸುತ್ತದೆ. ಅಕ್ಕ ಪಕ್ಕದವರಿಗಾಗಲಿ ಸಹೋದ್ಯೋಗಿಗಳಿಗಾಗಲಿ ಅವಶ್ಯಕತೆ ಇರುವಾಗ ನೀವು ಸಹಾಯ ಮಾಡಿರಬಹುದು ಅವರು ಹಾಗೆ ಮಾಡುತ್ತಾರೆ ಎಂದು ಬಯಸದಿರಿ ಅವರು ಅನುಕೂಲಕ್ಕೆ ತಕ್ಕಂತೆ ಬದಲಾಗಬಹುದು ನಿಮ್ಮ ಮನಸ್ಸಿಗೆ ನೋವಾಗದಂತೆ ಅದನ್ನು ಪೂರ್ವಸಿದ್ಧತೆಯಲ್ಲಿಯೇ ಇಟ್ಟುಕೊಳ್ಳಿ. ಅದರ ಚರ್ಚೆ ಬೇರೆಯವರ ಬಳಿ ಮಾಡಬೇಡಿ. ಒಂದು ಓಣಿಯಲ್ಲಿರುವಾಗ ಅಥವಾ ಅಕ್ಕಪಕ್ಕದಲ್ಲಿರುವರು ಆ ಊರಿನಲ್ಲಿ ಇರುವಷ್ಟು ದಿನ ನಮ್ಮ ಒಟ್ಟಿಗೆ ಇರುತ್ತಾರೆ ಅದೇ ರೀತಿ ಕಚೇರಿಯ ಸಹೋದ್ಯೋಗಿಗಳು ಕೂಡ ದಿನದ 8,–10 ಗಂಟೆ ನಮ್ಮ ಒಟ್ಟಿಗೆ ಇರುತ್ತಾರೆ. ಹೀಗಾಗಿ ಅವರೊಡನೆ ಸುಂದರ ಬಾಂಧವ್ಯ ಹೊಂದುವುದು ಅವಶ್ಯಕ. ಕಲಹದ ವಾತಾವರಣದಲ್ಲಿ ಬದುಕುವುದಾಗಲಿ ಕೆಲಸ ಮಾಡುವುದಾಗಲಿ ಕಷ್ಟಕರ. ಇದು ಮಾನಸಿಕ ಆರೋಗ್ಯಕ್ಕೂ ಒಳ್ಳೆಯದಲ್ಲ.ಆದ್ದರಿಂದ ಕೆಲಸ ಮಾಡುವ ಕಚೇರಿಗಳಲ್ಲಿ ವೈಯಕ್ತಿಕತೆಯನ್ನು ತರಬೇಡಿ ಶ್ರದ್ಧೆಯಿಂದ ಕೆಲಸ ಮಾಡಿ ಗುರಿಯತ್ತ ಸಾಗುವ ಪ್ರಯತ್ನ ನಮ್ಮದಾಗಿರಲಿ.

ಮನೆಯ ಅಕ್ಕ–ಪಕ್ಕದರೊಡನೆ ಸೌಹಾರ್ದದ ಸಂಬಂಧವನ್ನು ಅವರ ಸ್ವಭಾವಕ್ಕೆ ಅನುಗುಣವಾಗಿ ಇಟ್ಟುಕೊಂಡರೆ ನಮ್ಮ ಮನಸ್ಸಿಗೂ ನೆಮ್ಮದಿ ಇರುತ್ತದೆ.



ಸಾಕ್ಷಿ ಶ್ರೀಕಾಂತ
ತಿಕೋಟಿಕರ.


# ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ದೇಸಿ ಸೊಗಡು




ನವ ಕನ್ನಡ ಸಾಹಿತ್ಯದ ಯುಗದಲ್ಲಿ ಡಾ ಚಂದ್ರಶೇಖರ ಕಂಬಾರರ ಹೆಸರು ಕೇಳಿದಾಕ್ಷಣ ನೆನಪಿಗೆ ಬರುವುದು ಜನಪದ ಸಾಹಿತ್ಯ ಹಾಗು ದೇಸಿ ಸೊಗಡು. ಪರಿಸರದಲ್ಲಿ ಸಹಜವಾಗಿ ಆಡುವ, ಮಾತನಾಡುವ, ಹಾಡುವ, ನೃತ್ಯಮಾಡುವ ಅಂಶಗಳು ಅವರ ಕೃತಿಗಳಿಗೆ ಜೀವ ನೀಡುತ್ತವೆ.

ಜನಪದ ಎಂದರೆ ಜನರ ಮಧ್ಯದಿಂದ ಬಂದ ಅಲಿಖಿತ, ಬರವಣಿಗೆ ಇಲ್ಲದ ಆದರೆ ಬರವಣಿಗೆಗಿಂತ ವೇಗವಾಗಿ ಪರಿಣಾಮಕಾರಿಯಾಗಿ ಜನರಿಂದ ಜನರಿಗೆ ಹರಡುವ ನೈಜ ಸಂವಹನ. ಯಾವುದೇ ಬರವಣಿಗೆಯಲ್ಲಿ ಅಕ್ಷರಗಳ ಜೊತೆ ಸರಸ ಮಾಡಬೇಕಾಗುತ್ತದೆ. ಜನಪದ ಭಾವದ ಜೊತೆ ಸರಸ ಮಾಡುತ್ತಾ ರಸಮಯವಾಗಿ ಪ್ರಕೃತಿಯೊಡನೆ ಸಹಜವಾಗಿ ಬರೆಯುತ್ತದೆ. ಎಷ್ಟು ಪ್ರಭುದ್ಧವಾಗಿ ವಿಷಯವನ್ನು ಬರೆದೆ ಅನ್ನುವುದಕ್ಕಿಂತ, ವಿಷಯವನ್ನು ಜನರ ಮಧ್ಯದಲ್ಲಿ ಅವರದೇ ಆದ ಸಂವಹನದ ಮೂಲಕ ಎಷ್ಟು ಪರಿಣಾಮಕಾರಿಯಾಗಿ ತಿಲುಪಿಸಿದೆ ಎನ್ನುವುದು ಮುಖ್ಯ, ಅದೇ ದೇಸಿ ಸೊಗಡು.

ಕಂಬಾರರ ನಾಟಕಗಳ ಕಥಾವಸ್ತುಗಳು ಗ್ರಾಮೀಣ ಜೀವನದ ಮರ್ಮದಿಂದಲೇ ಉಗಮಿಸುತ್ತದೆ. ಜೋಕಾಲಿ, ಸಿರಿಸಂಪಿಗ, ಕುದುರೆಮುಖ ಮುಂತಾದ ಕೃತಿಗಳಲ್ಲಿ ಹಳ್ಳಿಯ ಸಂಸ್ಕೃತಿ, ರೈತನ ನೋವು-ಸಂತೋಷ, ಹಬ್ಬ ಎಲ್ಲವೂ ನಾಟಕಗಳಲ್ಲಿನ ಪಾತ್ರಗಳ ಪ್ರಮುಖ ಅಂತ:ಸ್ವತ್ವವಾಗಿವೆ. ಕಂಬಾರರು ಜೋಕುಮಾರಸ್ವಾಮಿ ನಾಟಕದಲ್ಲಿ ತರಕಾರಿ ಜೋಕುಮಾರಸ್ವಾಮಿ ಪಾತ್ರವಾಗಿಸುತ್ತಾರೆ. ಸಮಾಜದಲ್ಲಿ ನೆಡೆಯುವ ನೈತಿಕ, ಅನೈತಿಕ ವಿಷಯಗಳನ್ನು ಹಾಸ್ಯ ಭರಿತ ಶೈಲಿಯಲ್ಲಿ ಸರಿ-ತಪ್ಪುಗಳ ವಿಮರ್ಶಿಸಿ ಸಮಾಜ ತಿದ್ದುವ ಕೆಲಸ ಮಾಡುತ್ತಾರೆ. ಅವರ ನಾಟಕಗಳಲ್ಲಿ ಪಾತ್ರಗಳು ಅಷ್ಟೇ ಅಲ್ಲ, ಪ್ರಕೃತಿ, ಸಸ್ಯ-ಜಲ-ಮಣ್ಣು ಕೂಡಾ ಮುಖ್ಯ





ಪಾತ್ರಗಳಂತೆ ರಂಗದ ಮೇಲೆ ಜೀವಿಸುತ್ತವೆ.

ಭಾಷೆಯ ಬಳಕೆಯಲ್ಲಿ ದೇಸಿ ನುಡಿ ಕಂಬಾರರ ಮತ್ತೊಂದು ಶಕ್ತಿಯಾಗುತ್ತದೆ. ಉತ್ತರ ಕರ್ನಾಟಕದ ಮಾತುಗಾರಿಕೆ, ನುಡಿಗಟ್ಟು, ಹಾಸುಹೊಕ್ಕು ಮಾತಿನ ಮೃದು-ಕಡುವು ಸಂಭಾಷಣೆಗಳು ಗಾನದಂತೆ ಲಯಮಯವಾಗಿದ್ದು, ಕೃತಿಗಳ ಸ್ಥಳ-ಪಾತ್ರಗಳ ಪ್ರಾದೇಶಿಕ ಶೈಲಿ, ಉಡುವ ಬಟ್ಟೆ, ಹಾಕುವ ಶಂಖ, ಕವಡೆ, , ಹವಳ, ಚಿಪ್ಪಿನ ಹಾರಗಳು, ತಲೆಗೆ ಕಟ್ಟುವ ರುಮಾಲು ಹೇಗೆ ನಾಟಕದ ಪರಿಕರಗಳೇ ಪ್ರೇಕ್ಷಕರಾಗಿ ಪಾತ್ರಗಳ ಜೊತೆ ಬದುಕುವಂತೆ ಮಾಡುತ್ತದೆ.

ಜನಪದ ಕಲೆಯನ್ನು ನಾಟಕದ ರಚನೆಗೆ ಲಯಗೊಳಿಸುವಲ್ಲಿ ಕಂಬಾರರು ಅಪರೂಪದ ಕವಿಗಳು. ಯಕ್ಷಗಾನ, ಜಾನಪದ ಗೀತೆಗಳು, ಪುರಾಣಕತೆಗಳು ನಾಟಕದ ಅಂತರಾಳದ ಸಂಗೀತವಾಗಿ ಹರಿಯುತ್ತವೆ. ನಾಟಕದ ಸಂಗೀತ ಒಂದು ರೀತಿ ನಾಟಕದ ಸೂತ್ರದಾರನಂತೆ ಕಥೆಯನ್ನು ಮುಂದೆ ತೆಗೆದುಕೊಂಡು ಹೋಗುತ್ತವೆ.

ದೇಸಿ ಸೊಗಡು ಕೇವಲ ಸೊಗಸು-ಸೌಂದರ್ಯವಲ್ಲ; ಅದು ಕಂಬಾರರ ಸಮಾಜ ವೀಕ್ಷಣಾ ಕೇಂದ್ರ. ನಿತ್ಯಜೀವನದ ಸಂಘರ್ಷ, ನಗು, ಜಗಳ, ಪ್ರೀತಿ, ವರ್ಣ, ದಮನ ಮತ್ತು ಬದಲಾವಣೆಯ ನೋವು ಅವರ ಕೃತಿಗಳಲ್ಲಿ ಎದ್ದು ಕಾಣುತ್ತದೆ. ನಾಟಕದ ವಸ್ತುವಿನಲ್ಲಿ ಹಳ್ಳಿಯ ಚೌಕಟ್ಟಿನಲ್ಲೇ, ಮಾನವ ಮೌಲ್ಯಗಳ ಅತಿದೊಡ್ಡ ಹುಡುಕಾಟ ನಡೆಯುತ್ತದೆ. ಕಂಬಾರರ ದೇಸಿ ಜಗತ್ತು ಪರಂಪರೆ-ಪ್ರಗತಿಗಳ ನಡುವೆ ಹರಟೆಯಂತೆ, ಹೊಡೆದಾಟದಂತೆ, ಹುಡುಕಾಟದಂತೆ ಸಾಗುತ್ತದೆ. ಜನಪದವು ಅವರ ಲೇಖನದಲ್ಲಿ ಕೇವಲ ನೆಲವಾಸನೆಯಲ್ಲಅದು ಆತ್ಮ.

ಡಾ ಚಂದ್ರ ಶೇಖರ ಕಂಬಾರರ ನಾಟಕಗಳು ದೇಸಿ ಸಂಸ್ಕೃತಿಯ ಪ್ರತಿಬಿಂಬವಾಗಿ, ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ತಲೆಮಾರುಗಳಿಗೆ ವರ್ಗಾಯಿಸುವ ಸಾಂಸ್ಕೃತಿಕ ರಾಯಭಾರಿಯಾಗಿ ನಿಂತಿವೆ. ಹಳ್ಳಿ ಬದುಕಿನ ಸತ್ಯ,

ನೋವು, ಗಾನ, ನಂಬಿಕೆಗಳು ಸಾಹಿತ್ಯವಾಗಿಯೇ ಬೆಳಗಿವೆ. ದೇಸಿ ರಸವಿಲ್ಲದೇ ಕಂಬಾರರ ನಾಟಕವನ್ನು ಕಲ್ಪಿಸಲಾಗದುಅದು ಅವರ ರಕ್ತ, ಅವರ ಉಸಿರು, ಅವರ ಆತ್ಮ .



ಪ್ರಭಂಜನ ಮುತ್ತಿಗಿ

# ಗಂಡರ ಗಂಡ ಧೀರಪ್ರಚಂಡ ಶ್ರೀಕೃಷ್ಣದೇವರಾಯ!



ಕರ್ನಾಟಕದ ಇತಿಹಾಸದಲಿಬಂಗಾರದ ಯುಗದ ಕತೆಯನ್ನು,ಹಾಡುವೆ ಕೇಳಿ ನಾ ಹಾಡುವೆ ಕೇಳಿ
ಜ್ಞಾನದ ಜ್ಯೋತಿಯುವಿದ್ಯಾರಣ್ಯರು
ಅನುಗ್ರಹಗೈದಭೂಮಿ ಇದು
ಹಕ್ಕ ಬುಕ್ಕರು ಆಳಿದರಿಲ್ಲಿ,ಹರುಷದ ಮಳೆಯನ್ನು ಎಲ್ಲೂ ಚೆಲ್ಲಿವಿಜಯದ ಕಹಳೆಯ ಊದಿದರು,ವಿಜಯನಗರ ಸ್ಥಾಪನೆ ಮಾಡಿದರು
ಗಂಡರಗಂಡ ಧೀರಪ್ರಚಂಡಕೃಷ್ಣದೇವರಾಯ ಆಳಿದ ವೈಭವತೆಗಂಡರಗಂಡ ಧೀರಪ್ರಚಂಡಕೃಷ್ಣದೇವರಾಯ ಆಳಿದ ವೈಭವತೆ
ಕಲಿಗಳ ನಾಡು ಕವಿಗಳ ಬೀಡುಎನಿಸಿತು ಹಂಪೆಯು ಆ ದಿನದೇಕನ್ನಡ ಬಾವುಟ ಹಾರಿಸಿದ
ಮದುರೆವರೆಗೂ ರಾಜ್ಯವ ಹರಡಿಸಿದ,ಕರ್ನಾಟಕದ ಇತಿಹಾಸದಲಿ

**ಶ್ರೀ ಕೃಷ್ಣದೇವರಾಯ:** ಕೆಚ್ಚೆದೆಯ ಕಲಿ, ಬಹು ಪರಾಕ್ರಮಿ ಎನಿಸಿಕೊಂಡ ವಿಜಯನಗರ ಸಾಮ್ರಾಜ್ಯದ ಶಿಖರ ಪುರುಷ ಶ್ರೀ ಕೃಷ್ಣದೇವರಾಯನು (ಕ್ರಿ. ಶ. 1509–1529) ವಿಜಯನಗರ ಸಾಮ್ರಾಜ್ಯದ ತುಳುವ ರಾಜವಂಶದ ಮೂರನೆಯ ಅರಸ. ಇವನ ಆಳ್ವಿಕೆಯ ಕಾಲವನ್ನು ವಿಜಯನಗರ ಸಾಮ್ರಾಜ್ಯದ ಸುವರ್ಣಯುಗ ಎಂದು ಪರಿಗಣಿಸಲಾಗುತ್ತದೆ. ಇವನು ಕೇವಲ ಮಹಾನ್ ಯೋಧನಾಗಿರದೆ, ಶ್ರೇಷ್ಠ ಆಡಳಿತಗಾರ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಮಹಾನ್ ಪೋಷಕನಾಗಿದ್ದನು.

ವ್ಯಕ್ತಿತ್ವ ಮತ್ತು ಬಿರುದುಗಳು:
ಪೋರ್ಚುಗೀಸ್ ಪ್ರವಾಸಿಗಳಾದ ಡೊಮಿಂಗೊ ಪೇಸ್ ಮತ್ತು ಡುವಾರ್ಟೆ ಬರ್ಬೋಸಾ ಅವರ ಬರಹಗಳ ಪ್ರಕಾರ, ಕೃಷ್ಣದೇವರಾಯನು ಮಧ್ಯಮ ಎತ್ತರದ, ಆಕರ್ಷಕ ಮೈಕಟ್ಟುಳ್ಳ, ಸದಾ ಹಸನ್ಮುಖಿಯಾಗಿದ್ದ ನ್ಯಾಯಪರ ದೊರೆಯಾಗಿದ್ದನು. ನಿತ್ಯವೂ ಗರಡಿ ಸಾಧನೆ ಮಾಡುತ್ತಿದ್ದ ಈತನು ಉತ್ತಮ ಆಡಳಿತಗಾರ, ರಾಜನೀತಿ ನಿಪುಣ ಮತ್ತು ಶ್ರೇಷ್ಠ ಯೋಧನಾಗಿದ್ದನು. ಇವನಿಗೆ 'ಮೂರುರಾಯರಗಂಡ', 'ಕನ್ನಡರಾಜ್ಯ ರಮಾರಮಣ', ಮತ್ತು 'ಆಂಧ್ರಭೋಜ' ಎಂಬ ಪ್ರಮುಖ ಬಿರುದುಗಳಿದ್ದವು. ಇವನ ಕೀರ್ತಿಯನ್ನು ಕವಿ ಅಳ್ಳಸಾನಿ ಪೇದ್ದಣ್ಣನು ಸಾಹಿತ್ಯ ಸಾಮ್ರಾಟ್ ಎಂದೂ ಕೊಂಡಾಡಿದ್ದಾನೆ.



**ರಾಜಕೀಯ ಮತ್ತು ಸೇನಾ ಸಾಧನೆಗಳು:**

- **ಕೃಷ್ಣದೇವರಾಯನು ಸಿಂಹಾಸನಕ್ಕೆ ಬಂದ ಕೂಡಲೇ ಸಾಮ್ರಾಜ್ಯದ ಶಕ್ತಿಯನ್ನು ವೃದ್ಧಿಸುವತ್ತ ಗಮನಹರಿಸಿದನು.**
- **ರಾಯಚೂರು ದೋಆಬ್ ವಿಜಯ (1512): ಇದು ಇವನ ಪ್ರಮುಖ ಯುದ್ಧ ವಿಜಯಗಳಲ್ಲಿ ಒಂದು.**
- **ಒಡಿಶಾದ ಗಜಪತಿಗಳ ವಿರುದ್ಧ ಜಯ: ಗಜಪತಿ ರಾಜ ಪ್ರತಾಪರುದ್ರ ದೇವರನ್ನು ಸೋಲಿಸಿ, ಪೂರ್ವ ಭಾಗದ ಕೋಟೆಗಳನ್ನು ವಶಪಡಿಸಿಕೊಂಡು, ಸಾಮ್ರಾಜ್ಯವನ್ನು ಕೃಷ್ಣಾ ನದಿಯವರೆಗೆ ವಿಸ್ತರಿಸಿದನು. ಗಜಪತಿ ರಾಜನ ಮಗಳನ್ನು ವಿವಾಹವಾದ ಮೂಲಕ ರಾಜಕೀಯ ಮೈತ್ರಿಯನ್ನು ಗಟ್ಟಿಗೊಳಿಸಿದನು.**
- **ಡೆಕ್ಕನ್ ಸುಲ್ತಾನರ ವಿರುದ್ಧ ವಿಜಯ: ಬಿಜಾಪುರ, ಗೋಲ್ಕೊಂಡ ಮತ್ತು ಬಹಮನಿ ಸುಲ್ತಾನರ ವಿರುದ್ಧ ನಿರ್ಣಾಯಕ ವಿಜಯಗಳನ್ನು ಸಾಧಿಸಿ ಸಾಮ್ರಾಜ್ಯಕ್ಕೆ ಸ್ಥಿರತೆಯನ್ನು ತಂದನು. 'ಯವನರಾಜ್ಯ ಸ್ಥಾಪನಾಚಾರ್ಯ' ಎಂಬ ಬಿರುದನ್ನು ಸಹ ಪಡೆದನು.**
- **ಇವನ ಸೇನಾ ಸಾಮರ್ಥ್ಯ ಎಷ್ಟಿತ್ತೆಂದರೆ, ಮೊಘಲ್ ಸಾಮ್ರಾಜ್ಯದ ಸ್ಥಾಪಕ ಬಾಬರನು ಸಹ ಕೃಷ್ಣದೇವರಾಯನನ್ನು ಭಾರತದ ಅತ್ಯಂತ ಶಕ್ತಿಶಾಲಿ ಮತ್ತು ವಿಸ್ತಾರವಾದ ಸಾಮ್ರಾಜ್ಯದ ದೊರೆ ಎಂದು ಪರಿಗಣಿಸಿದ್ದನು.**

ವಿಶೇಷವಾಗಿ ಕೃಷ್ಣದೇವರಾಯ (1509–1529) ಕಾಲದಲ್ಲಿ ವಿಜಯನಗರ ನಗರವು ವಿಶ್ವದಲ್ಲೇ ಶ್ರೀಮಂತ ನಗರವಾಗಿದ್ದ ಕಾರಣ, ರತ್ನಮುತ್ತುಗಳ ವ್ಯಾಪಾರವು ಉನ್ನತ ಮಟ್ಟದಲ್ಲಿತ್ತು.
ಬೇರೆ ರಾಜರ ಕಾಲದಲ್ಲೂ ಇದಿದೆಯೇ ವಿಜಯನಗರದ ಸಂಗಮ, ಸಲುವಾ, ತುಳುವ ರಾಜವಂಶಗಳ ಕಾಲದಲ್ಲೂ ಬಂಗಾರವಜ್ರಗಳ ವ್ಯಾಪಾರ ಬಲವಾಗಿತ್ತು.


ಆದರೆ ಬೀದಿಯಲ್ಲಿ ರತ್ನ ಮಾರಾಟ ಆಗುತ್ತಿದ್ದ ಅತ್ಯಂತ ಚೈತನ್ಯಮಯ ಮಾರುಕಟ್ಟೆ ಎನ್ನುವ ವರ್ಣನೆ ಮುಖ್ಯವಾಗಿ ಕೃಷ್ಣದೇವರಾಯನ ಕಾಲಕ್ಕೆ ಸೇರಿದೆ.
ವಿದೇಶಿ ಪ್ರವಾಸಿಗರ ಮೂಲ ದಾಖಲಾತಿಗಳು
1) ದೂಮಿಂಗೊ ಪಾಯ್ಸ್ (Domingo Paes, 15201522) ಪೋರ್ಚುಗೀಸ್ ಪ್ರವಾಸಿಗ ಮತ್ತು ವ್ಯಾಪಾರಿ ಶ್ರೀಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದರು. ಅವರ ಬರಹದಲ್ಲಿ: In the bazaars of this great city, you will find rows of merchants selling diamonds, rubies, emeralds, pearls and all manner of precious stones openly, as if they were common goods. ಈ ಮಹಾನಗರದ ಮಾರುಕಟ್ಟೆಗಳಲ್ಲಿ ವಜ್ರ, ಪಚ್ಚೆ, ಮುತ್ತು, ಮಣಿ ಮತ್ತು ಎಲ್ಲಾ ರೀತಿಯ ರತ್ನಗಳನ್ನು ಸಾಮಾನ್ಯ ವಸ್ತುಗಳಂತೆ ತೆರೆದಾಗಿ ಸಾಲು ಸಾಲಾಗಿ ಮಾರುವ ವ್ಯಾಪಾರಿಗಳನ್ನು ನೋಡುವಿರಿ.

2) ಅಬ್ದುಲ್ ರಝ್ಝಾಕ್ ಅವರು ಪರ್ಶಿಯನ್ (ಇಂದಿನ ಉಜ್ಬೇಕಿಸ್ತಾನ ಪ್ರದೇಶ) ಮೂಲದ ರಾಯಭಾರಿ, ಪಂಡಿತ ಮತ್ತು ಪ್ರವಾಸಿಗ. ಕ್ರಿ.ಶ. 14431444ರಲ್ಲಿ ಭಾರತಕ್ಕೆ ಭೇಟಿ ನೀಡಿ, ವಿಜಯನಗರ ಸಾಮ್ರಾಜ್ಯದ ಬಗ್ಗೆ ಅಮೂಲ್ಯ ದಾಖಲಾತಿ ಬರೆದಿದ್ದಾರೆ.



ಎರಡನೆಯ ದೇವರಾಯನ ಕಾಲದ ಬರಹಗಳಲ್ಲಿ: The markets overflow with pearls and precious stones. Traders sell them in the streets in heaps.

ಮಾರುಕಟ್ಟೆಗಳು ಮುತ್ತು ಮತ್ತು ರತ್ನಗಳಿಂದ ತುಂಬಿ ಹರಿಯುತ್ತವೆ. ವ್ಯಾಪಾರಿಗಳು ಅವನ್ನು ಬೀದಿಗಳಲ್ಲೇ ಗುಚ್ಛಗಳನ್ನು ಹಾಕಿ ಮಾರುತ್ತಿದ್ದರು.



3) ನಿಕೊಳೊ ಕಾಂಟಿ (Nicolo Conti, 14201421) ಅವರು ಇಟಾಲಿಯನ್ ಮೂಲದ ಪ್ರಸಿದ್ಧ ಪ್ರವಾಸಿಗ ಹಾಗೂ ವ್ಯಾಪಾರಿ. ವಿಜಯನಗರ ಸಾಮ್ರಾಜ್ಯದ ವೈಭವವನ್ನು ಅವರು ಹೀಗೆ ವರ್ಣಿಸಿದ್ದಾರೆ.
Here are found countless jewels, and merchants trade pearls by weight on the streets.

ಇಲ್ಲಿ ಅನೇಕ ಮೌಲ್ಯಮಯ ರತ್ನಗಳು ದೊರಕುತ್ತವೆ, ಮತ್ತು ವ್ಯಾಪಾರಿಗಳು ಮುತ್ತುಗಳನ್ನು ಬೀದಿಯಲ್ಲೇ ತೂಕದಂತೆ ಮಾರುತ್ತಿದ್ದರು. ಸಾಹಿತ್ಯ ಮತ್ತು ಸಂಸ್ಕೃತಿಗೆ ಕೊಡುಗೆ:
ಕೃಷ್ಣದೇವರಾಯನ ಆಸ್ಥಾನವು 'ಅಷ್ಟದಿಗ್ಗಜ'ರೆಂದು ಪ್ರಸಿದ್ಧರಾದ ಎಂಟು ಜನ ತೆಲುಗು ಕವಿಗಳಿಂದ ಅಲಂಕೃತವಾಗಿತ್ತು. (ಉದಾ: ಅಳ್ಳಸಾನಿ ಪೇದ್ದಣ್ಣ, ನಂದಿತ ತಿಮ್ಮನ್ನ, ಧೂರ್ವನಾರಾಯಣ, ಪಿಂಗಲಿ ಸುರಣ, ಮುಂತಾದವರು) ಅಲ್ಲದೆ, ಇವನು ಕನ್ನಡ, ತೆಲುಗು ಮತ್ತು ಸಂಸ್ಕೃತ ಭಾಷೆಯ ವಿದ್ವಾಂಸರಿಗೆ ಆಶ್ರಯ ನೀಡಿದ್ದನು.

* ಸ್ವಯಂ ಕವಿ: ಇವನು ತೆಲುಗಿನಲ್ಲಿ 'ಅಮುಕ್ತಮಾಲ್ಯದ' (ಶ್ರೀ ವೈಷ್ಣವ ಸಂತರ ಬಗ್ಗೆ) ಮತ್ತು ಸಂಸ್ಕೃತದಲ್ಲಿ 'ಜಾಂಬವತಿ ಕಲ್ಯಾಣ' ಎಂಬ ಕೃತಿಗಳನ್ನು ರಚಿಸಿದನು. ಇವನ ಕಾವ್ಯಗಳಲ್ಲಿ ರಾಜನ ಧಾರ್ಮಿಕ ನಂಬಿಕೆ ಮಾತ್ರವಲ್ಲ, ಮಾನವೀಯ ಮೌಲ್ಯಗಳನ್ನೂ ಕಾಣಬಹುದಾಗಿದೆ.

* ಧಾರ್ಮಿಕ ಸಹಿಷ್ಣುತೆ: ವೈಷ್ಣವ ಅನುಯಾಯಿಯಾಗಿದ್ದರೂ, ಇವನು ಎಲ್ಲ ಧರ್ಮಗಳನ್ನೂ ಸಮಾನವಾಗಿ ಗೌರವಿಸಿದನು. ತಿರುಮಲ, ಶ್ರೀಶೈಲಂ, ಚಿಕ್ಕಮಗಳೂರು ಸೇರಿದಂತೆ ಅನೇಕ ದೇವಸ್ಥಾನಗಳಿಗೆ ಅಪಾರ ದಾನ ನೀಡಿದನು ಮತ್ತು ರಾಯಗೋಪುರಗಳು, ಕಲ್ಯಾಣ ಮಂಟಪಗಳನ್ನು ನಿರ್ಮಿಸಿದನು.

ಆಡಳಿತ ಮತ್ತು ನಿರ್ಮಾಣ ಕಾರ್ಯಗಳು:
* ಕೃಷ್ಣದೇವರಾಯನು ದಕ್ಷ ಆಡಳಿತಗಾರನಾಗಿದ್ದನು. ನೀರಾವರಿ, ಕೃಷಿ ಮತ್ತು ವ್ಯಾಪಾರದ ಮೇಲೆ ವಿಶೇಷ ಗಮನ ನೀಡಿದನು.

* ವಿಜಯನಗರದ ಉಪನಗರವಾದ ನಾಗಲಾಪುರವನ್ನು ತನ್ನ ತಾಯಿ ನಾಗಲಾಂಬಿಕೆ ನೆನಪಿಗಾಗಿ ನಿರ್ಮಿಸಿದನು.

* ಹಂಪಿಯಲ್ಲಿ ಉಗ್ರ ನರಸಿಂಹ, ಏಕಶಿಲಾ ರಥ, ಹಜಾರರಾಮಸ್ವಾಮಿ ದೇವಾಲಯ, ಕೃಷ್ಣಸ್ವಾಮಿ ದೇವಾಲಯ ಮತ್ತು ಮಹಾನವಮಿ ದಿಬ್ಬದಂತಹ ಭವ್ಯ ಕಟ್ಟಡಗಳು ಇವನ ವಾಸ್ತುಶಿಲ್ಪದ ಪ್ರೀತಿಗೆ ಸಾಕ್ಷಿಯಾಗಿವೆ. ಇವನ ಕಾಲದಲ್ಲಿ ಹಂಪಿಯು ಕಲೆ, ವ್ಯಾಪಾರ ಮತ್ತು ಧಾರ್ಮಿಕ ಜೀವನದ ಕೇಂದ್ರವಾಗಿ ಮೆರೆಯಿತು. ಒಟ್ಟಾರೆಯಾಗಿ, ಶ್ರೀ ಕೃಷ್ಣದೇವರಾಯನು ವಿಜಯನಗರ ಸಾಮ್ರಾಜ್ಯವನ್ನು ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕವಾಗಿ ಉತ್ತುಂಗಕ್ಕೇರಿಸಿದ ಮಹಾನ್ ಚಕ್ರವರ್ತಿಯಾಗಿದ್ದನು. ಇವನ ಆಳ್ವಿಕೆಯ ವೈಭವ ಇಂದಿಗೂ ಮನೆಮಾತಾಗಿದ್ದು, ದಕ್ಷಿಣ ಭಾರತದ ಇತಿಹಾಸದಲ್ಲಿ ಒಂದು ಪ್ರಕಾಶಮಾನ ಅಧ್ಯಾಯವಾಗಿ ಉಳಿದಿದೆ. ಶ್ರೀ ಕೃಷ್ಣದೇವರಾಯನ ಆಳ್ವಿಕೆಯು ವಿಜಯನಗರದ ಸುವರ್ಣಯುಗದ ಶೃಂಗವಾಗಿತ್ತು. ಸೇನಾಸಾಮರ್ಥ್ಯ, ನ್ಯಾಯ, ಕಲೆ, ಸಾಹಿತ್ಯ ಮತ್ತು ಧಾರ್ಮಿಕ ಸಹಿಷ್ಣುತೆಯ ಈ ಸಂಯೋಜನೆ ಇವನನ್ನು ದಕ್ಷಿಣ ಭಾರತದ ಅಶೋಕನೆಂದು ಪರಿಗಣಿಸಲು ಕಾರಣವಾಗಿದೆ.ಶ್ರೀಕೃಷ್ಣದೇವರಾಯನ ಪಾತ್ರಕ್ಕೆ ಜೀವ ತುಂಬಿ ಅಭಿನಯಿಸಿದ ನಮ್ಮ ಕನ್ನಡದ ನಟಸಾರ್ವಭೌಮರನ್ನೂ ಈ ಸುಸಂದರ್ಭದಲ್ಲಿ ನೆನೆಯದೆ ಇರಲು ಸಾಧ್ಯವೇಇಂಥ ಸುಪುತ್ರರನ್ನು ಪಡೆದ ಕನ್ನಡತಾಯಿ ಧನ್ಯ! ಬಲು ಮಾನ್ಯ!



ರೂಪ ಮಂಜುನಾಥ
ಹೊಳೆನರಸೀಪುರ

ಕನ್ನಡದ ರಾಜ-ಮಾಹಾರಾಜರು

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,